ಐಕ್ಯರಂಗ

ಸಂಪುಟ 20 ಸಂಚಿಕೆ 1 ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿ.29'97–ಜ.4'98 ಬೆಲೆ ರೂ. 3.00



ಸಂಯುಕ್ತ ರಂಗಕ್ಕೆ ಬಹುಮತ ನೀಡಿ-ಎಡಪಕ್ಷಗಳನ್ನು ಬಲಪಡಿಸಿ

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಡಿಸೆಂಬರ್ ೨೧,೨೨ ರಂದು ಕಲ್ಕತ್ತೆಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಸಂಯುಕ್ತ ರಂಗ ಕೇಂದ್ರ ಸರಕಾರವನ್ನು ರಚಿಸುವಂತೆ ಬಹುಮತದಿಂದ ಚುನಾಯಿಸಿ, ಜನತೆಯ ಮತ್ತು ದೇಶದ ಭವಿಷ್ಯತ್ತಿನ ಬಗ್ಗೆ ಯಾವುದೇ ಧೋರಣೆಗಳು ಹಾಗೂ ಕಾರ್ಯಕ್ರಮಗಳಿಲ್ಲದ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಸೋಲಿಸಿ ಹಾಗೂ ಸಿಪಿಐ(ಎಂ) ಹಾಗೂ ಇತರ ಎಡ ಪಕ್ಷಗಳ ಪ್ರಾತಿನಿಧ್ಯವನ್ನು ಬಲಪಡಿಸಿ ಸಂಸತ್ತಿನಲ್ಲಿ ಜಾತ್ಯಾತೀತತೆ, ಪ್ರಜಾಪ್ರಭುತ್ವ ಹಾಗೂ ಜನತೆಯ ಹಿತಾಸಕ್ತಿಗಳ ಅತ್ಯಂತ ದೃಢ ರಕ್ಷಕ ಪ್ರಾತಿನಿಧ್ಯ ಸಾಕಷ್ಟು ಪ್ರಮಾಣದಲ್ಲಿ ಇರುವಂತೆ ಮಾಡಿ ಎಂದು ದೇಶದ ಜನತೆಗೆ ಕರೆ ನೀಡಿದೆ.

ಲೋಕಸಭೆಯ ವಿಸರ್ಜನೆಯನಂತರ ರಾಜಕೀಯ ಸನ್ನಿವೇಶವನ್ನು ಪರಾಮರ್ಶಿಸಿ ಮುಂಬರುವ ಚುನಾವಣೆಗಳಿಗೆ ಸಿದ್ಧತೆಗಳ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿಯು ಈ ಸಭೆ ಚರ್ಚಿಸಿ ನಿರ್ಣಯಗಳನ್ನು ಕೈಗೊಂಡಿತು.

"ಕಾಂಗ್ರೆಸ್ ಜನಗಳ ಮೇಲೆ ಹೇರಿದ ಚುನಾವಣೆಗಳನ್ನು ಎದುರಿಸಲು ನಾವು ಸಿದ್ಧರಿದ್ದೇವೆ" ಎಂದು ಎರಡು ದಿನಗಳ ಸಭೆಯ ನಂತರ ಪತ್ರಕರ್ತರಿಗೆ ತಿಳಿಸುತ್ತಾ ಸುರ್ಜಿತ್ ಹೇಳಿದರು. ಒಂದು ರಾಜಕೀಯ ಪಕ್ಷಕ್ಕೆ ಅದರ ವಿರುದ್ಧ ಯಾವುದೇ 'ಅಪರಾಧ'ದ ಪುರಾವೆಯಿಲ್ಲದೆ ಶಿಕ್ಷೆ ವಿಧಿಸಬೇಕೆಂಬ ಕಾಂಗ್ರೆಸ್‌ನ ನಗ್ನ ಸಮಯಸಾಧಕತನದಿಂದಾಗಿ ಈ ಚುನಾವಣೆಗಳನ್ನು ಜನಗಳ ಮೇಲೆ ಹೇರಲಾಗಿದೆ ಎಂದು ಅವರು ಹೇಳಿದರು. ಜನ ಇಂತಹ ದುಸ್ಸಾಹಸಕ್ಕೆ ತಕ್ಕ ಉತ್ತರ ನೀಡಬೇಕು. ಅಪಕೀರ್ತಿ ಮೆತ್ತಿಸಿಕೊಂಡಿರುವ ಕಾಂಗ್ರೆಸ್‌ಗೆ ಲೋಕಸಭಾ ಚುನಾವಣೆಗಳಲ್ಲಿ ಪರಾಭವ ಉಂಟಾಗುವಂತೆ ಮಾಡಬೇಕು ಎಂದವರು ಕರೆ ನೀಡಿದರು.

"ಕಾಂಗ್ರೆಸ್‌ನಲ್ಲಿ ಈಗ ಕಾಣುವುದು ರಾಜಕೀಯ ದಿವಾಳಿಯ ಮತ್ತು ಅವನತಿಯ ಚಿತ್ರ. ಕೋಮುವಾದದೊಂದಿಗೆ ರಾಜಿಯ ವಿಷಯದಿಂದಾಗಿಯಾಗಲೀ, ಐಎಂಎಫ್-ವಿಶ್ವಬ್ಯಾಂಕ್‌ನ ಆದೇಶದಂತೆ ತಂದ ಆರ್ಥಿಕ ನೀತಿಗಳಿಂದಾಗಲೀ ಅಥವಾ ಅದರ ಭ್ರಷ್ಟಾಚಾರದ ದಾಖಲೆಯಿಂದಾಗಲೀ ಜನ ಇಂತಹ ಒಂದು ಪಕ್ಷವನ್ನು ತಿರಸ್ಕರಿಸುವುದು ಖಂಡಿತ" ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ. ಅಸ್ತವ್ಯಸ್ಥಗೊಂಡಿರುವ ಕಾಂಗ್ರೆಸ್‌ನಿಂದ ಈಗ ಮುಖಂಡರು ಸಾಲು ಸಾಲಾಗಿ ಹೊರಗೆ ಹೋಗುತ್ತಿದ್ದಾರೆ ಎಂದು ಸುರ್ಜಿತ್ ಹೇಳಿದರು.

ಕಾಂಗ್ರೆಸ್‌ನ ಆಂತರಿಕ ಅಲ್ಲೋಲಕಲ್ಲೋಲದಿಂದ ಉಂಟಾಗಿರುವ ರಾಜಕೀಯ ನಿರ್ವಾತವನ್ನು ತಾನು ತುಂಬಬಲ್ಲೆ ಎಂಬ ನಿರರ್ಥಕ ನಿರೀಕ್ಷೆ ಬಿಜೆಪಿಯದ್ದು. ಕೋಮುವಾದಿ ಬಿಜೆಪಿಯಲ್ಲಿ ಈಗ ಕ್ರಿಮಿನಲ್ ವ್ಯಕ್ತಿಗಳ ಪ್ರಾಬಲ್ಯವೇ ಹೆಚ್ಚಾಗಿದೆ. ಅದು ಈಗ ಹಣಶಕ್ತಿಯ ಮೇಲೆ ಎಷ್ಟೊಂದು ಅವಲಂಬಿತವಾಗಿದೆಯೆಂದರೆ ಬಿಜೆಪಿಗೆ ಸೇರುವ ಪಕ್ಷಾಂತರಿಗಳಿಗೆ ಸೂಕ್ತ ರೀತಿಯ 'ಪ್ರೋತ್ಸಾಹ' ಒದಗಿಸಲು ಸರಕಾರಿ ಖಜಾನೆಯನ್ನು ದುರುಪಯೋಗ ಪಡಿಸಲು ತಿಂದು ಹಾಕಲು ಕೂಡ ಅದು ಹಿಂಜರಿಯುತ್ತಿಲ್ಲ ಎಂದು ಸುರ್ಜಿತ್ ರವರು ಬಿಜೆಪಿಗೆ ಈಗ ತಾನು "ಮೌಲ್ಯಾಧಾರಿತ" ಸಂಘಟನೆ ಎಂದು ಹೇಳಿಕೊಳ್ಳಲು ಖಂಡಿತ ಸಾಧ್ಯವಿಲ್ಲ ಅಲ್ಲದೆ ರಾಜ್ಯಗಳಲ್ಲಿ ಅವರೊಳಗೆ ಭಿನ್ನಾಭಿಪ್ರಾಯ, ಒಡಕು ಇದೆ ಎಂದು ನೆನಪಿಸಿದರು.

"ಬಿಜೆಪಿ ಹೇಗಾದರೂ ಮಾಡಿ ಅಧಿಕಾರ ಗಿಟ್ಟಿಸಲು ಹತಾಶವಾಗಿದೆ. ಹಿಂದುತ್ವ ಮತ್ತು ಭ್ರಷ್ಟ ಸಮಯ ಸಾಧಕತನದ ಮಿಶ್ರಣ ಜನರ ಮುಂದಿರುವ ಅತ್ಯಂತ ಪ್ರತಿಗಾಮಿ ಪರ್ಯಾಯ. ದೊಡ್ಡ ಬಂಡವಾಳಿಗರು, ಪಾಳೆಯಗಾರಿ ಶಕ್ತಿಗಳು ಹಾಗೂ ಭೂಮಾಲಕರನ್ನು ಪ್ರತಿನಿಧಿಸುವ ಇವರು ಜನಗಳನ್ನು ಸಂಕುಚಿತ ಮತೀಯ ರೀತಿಯಲ್ಲಿ ಒಡೆದಿಡಲು ಒಂದು ಸರ್ವಾಧಿಕಾರಿ ವ್ಯವಸ್ಥೆ ಬಯಸುವವರು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಬಿಜೆಪಿ ಮತ್ತು ಅದರ ಮಿತ್ರರಾಗಲೀ ಕಾಂಗ್ರೆಸ್ ಮತ್ತು ಅದರ ಹೊಸ ಗೆಳೆಯರಿಗಾಗಲಿ ಸ್ಥಿರತೆ ಕೊಡಲು ಸಾಧ್ಯವಿಲ್ಲ ಏಕೆಂದರೆ ಸ್ಥಿರತೆ ಬೇಕಾದರೆ ಜಾತ್ಯಾತೀತತೆ, ರಾಷ್ಟ್ರೀಯ ಐಕ್ಯತೆ, ಒಕ್ಕೂಟವಾದ ಮತ್ತು ಜನಪರ ಆರ್ಥಿಕ ಬೆಳವಣಿಗೆಗೆ ಬದ್ಧವಾಗಿರಬೇಕಾಗುತ್ತದೆ ಎಂದಿರುವ ಕೇಂದ್ರ ಸಮಿತಿ ಸಂಯುಕ್ತ ರಂಗ ಮಾತ್ರವೇ ಇಂತಹ ಸ್ಥಿರತೆ ನೀಡಬಲ್ಲದು ಎಂದು ಹೇಳಿದೆ.

ಭಯಾನಕ ಕೋಮುವಾದಿ ಅಪಾಯವನ್ನು ತಡೆಗಟ್ಟುವ ಮೂರನೇ ಪರ್ಯಾಯ ಹೋರಾಟದಲ್ಲಿ ಮೂಡಿ ಬಂದ ಸಂಯುಕ್ತರಂಗವನ್ನು ಈಗ ಬಲಪಡಿಸುವುದು ಅಗತ್ಯ ಎಂದ ಸುರ್ಜಿತ್‌ರವರು ಹಲವು ದೌರ್ಬಲ್ಯಗಳಿದ್ದರೂ ತನ್ನ18 ತಿಂಗಳ ಆಳ್ವಿಕೆಯಲ್ಲಿ ಜಾತ್ಯಾತೀತತೆಯ ಪರವಾಗಿ ಅದು ನಿಂತಿದೆ, ರಾಜ್ಯಗಳ ಹಕ್ಕುಗಳನ್ನು ಪಾಲಿಸಿ ನಮ್ಮ ರಾಜಕೀಯ ವ್ಯವಸ್ಥೆಯ ಒಕ್ಕೂಟ ಸ್ವರೂಪವನ್ನು ಬಲಗೊಳಿಸುವತ್ತ ಹೆಜ್ಜೆಯಿಟ್ಟಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಪಡಿಸಲು ಕೂಡಾ ಶ್ರಮಿಸಿದೆ ಎಂದರು. ರಾಷ್ಟ್ರೀಯ ಮಟ್ಟದಲ್ಲಿ ಸಮ್ಮಿಶ್ರ ಸರಕಾರಗಳು ಕೆಲಸ ಮಾಡಬಲ್ಲವು ಎಂಬುದನ್ನು ಸಂಯುಕ್ತ ರಂಗ ಚೆನ್ನಾಗಿ ತೋರಿಸಿಕೊಟ್ಟಿದೆ ಎಂದು ಅವರು ಹೇಳಿದರು.

ಸಂಯುಕ್ತ ರಂಗವನ್ನು ಬಲಪಡಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಸಂಯುಕ್ತ ರಂಗ ಧೋರಣೆಗಳನ್ನು ಕುರಿತ ಘೋಷಣೆಯೊಂದನ್ನು ಜನರ ಮುಂದಿಟ್ಟು ಜಾತ್ಯಾತೀತ, ಪ್ರಜಾಪ್ರಭುತ್ವ, ಒಕ್ಕೂಟವಾದ ಮತ್ತು ಜನಪರ ಆರ್ಥಿಕ ಬೆಳವಣಿಗೆ ಅನುಕೂಲವಾದ ಧೋರಣೆಗಳನ್ನು ಜನರ ಆಯ್ಕೆಗಿಡ ಬೇಕು ಎಂದು ಕೇಂದ್ರ ಸಮಿತಿ ಸಲಹೆ ಮಾಡಿದೆ.

ಒಟ್ಟಾರೆಯಾಗಿ ಎಡಪಕ್ಷಗಳ, ನಿರ್ದಿಷ್ಟವಾಗಿ ಸಿಪಿಐ(ಎಂ) ನ ಪ್ರಾತಿನಿಧ್ಯ ಹೊಸ ಲೋಕಸಭೆಯಲ್ಲಿ ಹೆಚ್ಚಿಸುವಂತೆ ಮಾಡುವುದು ಅತ್ಯಗತ್ಯ. 1996 ರ ಚುನಾವಣೆಗಳ ಮೊದಲು 'ಮೂರನೇ ಪರ್ಯಾಯ ರೂಪಿಸುವತ್ತ ಒಂದು ಪ್ರಮುಖ ಪಾತ್ರವಹಿಸಿದ್ದ ಎಡಪಕ್ಷಗಳು, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ) ಎಡಪಕ್ಷಗಳು ತಮ್ಮದೇ ಪ್ರಣಾಳಿಕೆಯನ್ನು ಹೊರಡಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಕಾರ್ಯಕ್ರಮವನ್ನು ಒತ್ತಿಹೇಳಲಿವೆ. ಇದರಲ್ಲಿ ಒಕ್ಕೂಟವಾದದ ರಕ್ಷಣೆ ಹಾಗೂ ಪ್ರತಿಪಾದನೆ, ಜನಪರ ಆರ್ಥಿಕ ನೀತಿಗಳ ಅನುಷ್ಠಾನ ಮುಖ್ಯ ಅಂಶಗಳಾಗಿರುತ್ತವೆ ಎಂದು ಸುರ್ಜಿತ್ ತಿಳಿಸಿದರು.

ಕಾಂಗ್ರೆಸ್ ಜನಗಳ ಮೇಲೆ ಚುನಾವಣೆ ಹೇರಿ ಒಂದು ಜೂಜಾಟಕ್ಕಿಳಿಯಿತು. ಜನರು ಅದಕ್ಕೆ ಮಾತ್ರವಲ್ಲ, ಬಿಜೆಪಿಗೂ ಭಾರೀ ಸೋಲುಣ್ಣಿಸಬೇಕು ಎಂದು ಸುರ್ಜಿತ್ ಕರೆ ನೀಡಿದರು.

ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ 'ದೊಡ್ಡ ಶತ್ರು' ಯಾರು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜಿತ್ ಇದನ್ನು ದೇಶದಲ್ಲಿರುವ ನಿರ್ದಿಷ್ಟ ರಾಜಕೀಯ ಪರಿಸ್ಥಿತಿಗಳಲ್ಲಿ ನೋಡಬೇಕಾಗುತ್ತದೆ ಎಂದರು. ಉದಾಹರಣೆಗೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮುಖ್ಯ ಶತ್ರು, ಆದರೆ ದೇಶದ ಬೇರೆ ಕೆಲವು ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿಯಿಲ್ಲ. ಕೇಂದ್ರದಲ್ಲಿ ಸರಕಾರದಲ್ಲಿ ಭಾಗವಹಿಸುವ ಬಗ್ಗೆ ಪ್ರಶ್ನೆ ಕೇಳಿದಾಗ ಈಗ ಅದು ಕೇವಲ ಕಾಲ್ಪನಿಕ ಪ್ರಶ್ನೆ ಎಂದು ತಳ್ಳಿ ಹಾಕುತ್ತಾ' ಸೇತುವೆ ಬಂದಾಗ ಅದನ್ನು ದಾಟುತ್ತೇವೆ ಒಂದು ನಿರ್ಣಯ ಕೈಗೊಳ್ಳುತ್ತೇವೆ" ಎಂದರು.

ಸಿಪಿಐ(ಎಂ) ಮಹಾಧಿವೇಶನ ಮುಂದಕ್ಕೆ

ಫೆಬ್ರವರಿ 1998 ರಲ್ಲಿ ನಡೆಯಬೇಕಾಗಿದ್ದ ಸಿಪಿಐ(ಎಂ) ನ ಹದಿನಾರನೇ ಮಹಾಧಿವೇಶನವನ್ನು ಆ ತಿಂಗಳಲ್ಲಿ ಲೋಕಸಭಾ ಚುನಾವಣೆಗಳು ನಡೆಯುವ ಕಾರಣದಿಂದ ಮುಂದೂಡಲು ಕೇಂದ್ರ ಸಮಿತಿ ಒಪ್ಪಿಗೆ ನೀಡಿದೆ. ಅದೀಗ ಸೆಪ್ಟೆಂಬರ್ 1998 ರಲ್ಲಿ ಕಲ್ಕತ್ತೆಯಲ್ಲಿ ನಡೆಯಲಿದೆ. ನಿರ್ದಿಷ್ಟ ದಿನಾಂಕಗಳನ್ನು ಮಹಾಧಿವೇಶನದ [illegible] ನಂತರ ತಿಳಿಸಲಾಗುವುದು.

ಹಣಕಾಸು ವಲಯದ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆ ಒಪ್ಪಂದ

ಸಿಪಿಐ(ಎಂ) ಪ್ರತಿಭಟನೆ

ಮಾರ್ಚ್ ೧೯೯೯ ರೊಳಗೆ ಹಣಕಾಸು ಸೇವೆಗಳನ್ನು 'ಉದಾರ' ಗೊಳಿಸುವ ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದಕ್ಕೆ ಸಹಿ ಹಾಕಲು ಭಾರತ ಸರಕಾರ ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ಹಣಕಾಸು ವಲಯವನ್ನು, ಅದರಲ್ಲೂ ವಿಶೇಷವಾಗಿ ವಿಮಾ ವಲಯವನ್ನು ತೆರೆಯುವುದನ್ನು ಸಿಪಿಐ(ಎಂ) ಮತ್ತು ಇತರ ಎಡ ಸಪಕ್ಷಗಳು ದೃಢವಾಗಿ ವಿರೋಧಿಸುತ್ತಾ ಬಂದಿದೆ. ಇದರಿಂದಾಗಿ ವಿಮಾ ನಿಯಂತ್ರಣ ಪ್ರಾಧಿಕಾರ ಕುರಿತ ಮಸೂದೆಯನ್ನು ಸಂಯುಕ್ತ ರಂಗ ಹಿಂತೆಗೆದುಕೊಳ್ಳಬೇಕಾಗಿ ಬಂತು. ಈಗ ಸರಕಾರ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಮಣಿದು ಈ ಒಪ್ಪಂದಕ್ಕೆ ಸಹಿ ಮಾಡಿ ಮಾರ್ಚ್ 1999 ರೊಳಗೆ ವಿಮಾ ವಲಯವೂ ಸೇರಿದಂತೆ ಹಣಕಾಸು ವಲಯವನ್ನು ತೆರೆಯಲು ಒಪ್ಪಿದಂತಾಗಿದೆ.

ಅಷ್ಟೇ ಅಲ್ಲ, ವಿದೇಶಿ ಬ್ಯಾಂಕುಗಳು ಒಂದು ವರ್ಷದಲ್ಲಿ 12 ಶಾಖೆಗಳನ್ನು ತಮಗೆ ಇಷ್ಟ ಬಂದಲ್ಲಿ ತೆರೆಯಲು ಸರಕಾರ ಪರವಾನಗಿ ನೀಡಬೇಕಾಗಿ ಬಂದಿದೆ. ಈ ಮೂಲಕ ಸಂಯುಕ್ತ ರಂಗ ಸರಕಾರ ಭಾರತವನ್ನು ಅಂತರ್ರಾಷ್ಟ್ರೀಯ ಹಣಕಾಸು ಮಾರುಕಟ್ಟೆಗಳ ಮರ್ಜಿಗೆ ಒಳಪಡಿಸಿದೆ. ದೇಶ ಒಂದು ಮಧ್ಯಾವಧಿ ಚುನಾವಣೆಗೆ ಸಿದ್ಧವಾಗುತ್ತಿರುವಾಗ ಇಂತಹ ಮಹತ್ವದ ನಿರ್ಣಯ ಕೈಗೊಂಡಿರುವುದು ನಿಜಕ್ಕೂ ಆಶ್ಚರ್ಯಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

[illegible]

16ನೇ ರಾಜ್ಯ ಸಮ್ಮೇಳನ ಕೋಲಾರ ಡಿ.30,31'97–ಜ. 1,2'98 ಸಿ.ಪಿ.ಐ.(ಎಂ)

ಬೆಂಗಳೂರಿನ ಹೋರಾಟ ನಿರತ ಗಾರ್ಮೆಂಟ್ ಕಾರ್ಮಿಕರಿಗೆ ಬೆಂಬಲವಾಗಿ ಇತರ ಕಾರ್ಮಿಕ ಸಂಘಟನೆಗಳ ಸೌಹಾರ್ದ ಸಮಿತಿಯ ಆಶ್ರಯದಲ್ಲಿ ಮುಖ್ಯ ಮಂತ್ರಿ ನಿವಾಸದೆದುರು ನಡೆದ ಧರಣಿಯ ಒಂದು ದೃಶ್ಯ ಇದರಲ್ಲಿ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.



ನಾವು ಹೊರಟೆವು ಕೋಲಾರಕ್ಕೆ ಪಕ್ಷದ 16ನೇಯ ಸಮ್ಮೇಳನಕ್ಕೆ

ಎಸ್.ಕೆ. ಉಪಾಧ್ಯಾಯ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಮೂರು ವರ್ಷಕ್ಕೊಂದು ಸಲ ನಡೆಯುವ ಪಕ್ಷದ ಸಮ್ಮೇಳನ ಬಹುಮುಖ್ಯ. ಗ್ರಾಮ ಘಟಕಗಳಿಂದ ಹಿಡಿದು ರಾಜ್ಯ ಘಟಕದವರೆಗ ಮೂರು ವರ್ಷಗಳ ರಾಜಕೀಯ ಸಂಘಟನಾತ್ಮಕ ವಿಮರ್ಶೆ ಹಾಗೆಯೇ ಹಿಂದಿನ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳ- ಮಾರ್ಗ ಸೂಚಿಯ ಅನುಷ್ಠಾನಗಳ ಕುರಿತು ನಿಷ್ಪಕ್ಷವಾದ, ಬಿಚ್ಚು ಮನಸ್ಸಿನ ವಿಮರ್ಶೆ ಮತ್ತು ಟೀಕೆ, ಸ್ವಯಂ ಟೀಕೆಗಳನ್ನು ನಡೆಸಲಿಕ್ಕಿರುವ ಅವಕಾಶವಾಗಿದೆ. ಆಮೂಲಕ ನಾವು ಹಿಂದಿನ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳ ಅನುಷ್ಠಾನ, ನಿರ್ದೇಶನಗಳನ್ನು ಎಷ್ಟರಮಟ್ಟಿಗೆ ಜಾರಿಗೊಳಿಸಲು ಸಾಧ್ಯವಾಗಿದೆ. ಅದು ಸಾಧ್ಯವಾಗದಿದ್ದಲ್ಲಿ ಕಾರಣಗಳೇನು ಅದಕ್ಕೆಲ್ಲ ಕಾರಣ ಘಟಕಗಳೋ ಮಧ್ಯಂತರ ಕಮಿಟಿಗಳೋ, ರಾಜ್ಯ ಸಮಿತಿಯೋ, ಅದರ ಸಾಧನೆ ಮತ್ತು ತಪ್ಪುಗಳನ್ನು ಅರ್ಥೈಸಿಕೊಂಡು ನಿರ್ಣಯ-ಮಾರ್ಗ ಸೂಚಿಗಳನ್ನು ಕಾರ್ಯಗತಗೊಳಿಸುವಲ್ಲಿ ಅಡ್ಡಿ ಆತಂಕಗಳನ್ನು ಗುರುತಿಸಿ, 16 ನೇ ಸಮ್ಮೇಳನದ ಕೈಗೊಳ್ಳಲಿರುವ ನಿರ್ಣಯ- ಮಾರ್ಗಸೂಚಿಗಳ ಅನುಷ್ಠಾನಕ್ಕೆ ಅವು ಅಡ್ಡಿಬಾರದಂತೆ ನೋಡಿಕೊಳ್ಳುವುದು ಅವುಗಳಿಗೆ ಸಮರ್ಪಕವಾದ ಪರಿಹಾರಗಳನ್ನು ಕಂಡು ಹಿಡಿಯುವ ಜವಾಬ್ದಾರಿ ಈ ಸಮ್ಮೇಳನದಲ್ಲಿ ಆಗಬೇಕಾಗಿದೆ. ಈಗಾಗಲೇ ಗ್ರಾಮ ಘಟಕಗಳ ಹಾಗೆಯೇ ಮಧ್ಯಂತರ ಕಮಿಟಿಗಳ ಸಮ್ಮೇಳನಗಳು ಮುಗಿದಿವೆ. ಅವುಗಳ ಅನುಭವಗಳ ವರದಿ ರಾಜ್ಯ ಸಮಿತಿಗೆ ಲಭ್ಯವಾಗುತ್ತಿವೆ. ಅಲ್ಲದೆ ಪ್ರತಿನಿಧಿಗಳು ಸ್ವತಃ ತಮ್ಮ ಅನುಭವಗಳನ್ನು ಕಾರ್ಯದರ್ಶಿಯವರ ವರದಿಯ ಮೇಲೆ ಅಭಿಪ್ರಾಯ ವ್ಯಕ್ತ ಮಾಡುವಾಗ ತಮ್ಮ ಘಟಕಗಳ ಅನುಭವಗಳನ್ನು ನಿವೇದಿಸಲಿದ್ದಾರೆ. ಅವುಗಳ ಆಧಾರದಲ್ಲಿ ಸಮ್ಮೇಳನದಲ್ಲಿ ಮುಂದಿನ ಮೂರು ವರ್ಷಗಳ ಕಾರ್ಯಕ್ರಮ ಮತ್ತು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯವ್ಯಾಪ್ತಿಯ ಕುರಿತು ಮಾರ್ಗದರ್ಶನ ಹೊರಡಲಿದೆ. ಅವುಗಳೇನೆಂಬುದನ್ನು ತಿಳಿದುಕೊಳ್ಳುವ ಅಪೇಕ್ಷೆ ಎಲ್ಲರದಾಗಿದೆ. ಅದೂ ಕೂಡ ದೇಶದ ರಾಜಕೀಯದಲ್ಲಿ ಮಹತ್ವದ ಬದಲಾವಣೆಗಳಾಗುತ್ತಿರುವಾಗ ಅದರ ಪ್ರಭಾವ ರಾಜಕೀಯದ ಮೇಲೂ ಬೆಳಕು ಚೆಲ್ಲುತ್ತಿರುವಾಗ ನಮ್ಮ ಸಮ್ಮೇಳನದ ನಿರ್ಣಯಗಳು ಅಂಥ ರಾಜಕೀಯ ಅವಾಂತರಗಳಿಗೆ ಸರಿಯಾಗಿ ಸ್ಪಂದಿಸುವ, ಅದರ ಮೂಲಕ ಪಕ್ಷದ ಪ್ರತ್ಯೇಕ ಅಸ್ತಿತ್ವವನ್ನು ತೋರಿಸಿಕೊಟ್ಟು ಅದರ ಮೂಲಕ ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಪ್ರಭಾವ ರಾಜಕೀಯವಾಗಿಯೂ ಸಂಘಟನಾತ್ಮಕವಾಗಿಯೂ ವಿಸ್ತಾರಗೊಳ್ಳುವಂತೆ, ಹೆಚ್ಚು ಪ್ರಭಾವಿತವಾಗುವಂತೆ ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಹಾಗಾಗಿಯೇ ಕೋಲಾರದಲ್ಲಿ ನಡೆಯುವ ಪಕ್ಷದ 16ನೇ ಸಮ್ಮೇಳನದತ್ತ, ಅದರಲ್ಲಾಗುವ ನಿರ್ಣಯಗಳತ್ತ ಎಲ್ಲರ ಗಮನ ಹರಿಯಲು ಕಾರಣ.

ಹಾಗೆಂದು ಹೇಳುವಾಗ ನಮ್ಮ ಘಟಕಗಳು 15ನೆಯ ಕೇಂದ್ರ ಮತ್ತು ರಾಜ್ಯ ಸಮ್ಮೇಳನಗಳ ನಿರ್ಣಯಗಳನ್ನು ಮಾರ್ಗ ಸೂಚಿಗಳನ್ನು ಸಂಪೂರ್ಣವಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ಅರ್ಥೈಸಿಕೊಂಡು ತಾನು ಕಮ್ಯುನಿಸ್ಟನಾಗಿ ನಿರ್ವಹಿಸ ಬೇಕಾದಂಥ ಕರ್ತವ್ಯವನ್ನು ನಿರ್ವಹಿಸುವು ದರಲ್ಲಿ ಪ್ರಯತ್ನ ಮಾಡಿದೆ ಎಂದರ್ಥ ವಲ್ಲವೇ? ಹೌದು. ಕೇಂದ್ರ ಮತ್ತು ರಾಜ್ಯ ಸಮಿತಿ ಹೆಚ್ಚಿನ ಕರೆಗಳಿಗೆ ಇಡೀ ಪಕ್ಷದ ಘಟಕಗಳು ಸ್ಪಂದಿಸಿವೆ. ಎಲ್ಲೆಲ್ಲಿ ಆ ರೀತಿ ಗಂಭೀರವಾಗಿ ಸ್ಪಂದಿಸಿವೆ. ಆ ಪ್ರದೇಶದಲ್ಲಿ ಪಕ್ಷದ ಸದಸ್ಯತ್ವ ಹೆಚ್ಚಾಗಿರುವುದನ್ನು ಕಾಣಬಹುದು. ಆದರೆ ಅದೇ ಸಮಯದಲ್ಲಿ ಚಂಢೀಗಢದಲ್ಲಿ ಸೇರಿದ 15 ನೇಯ ಪಾರ್ಟಿ ಕಾಂಗ್ರೆಸ್ ಹೇಳಿದಂತೆ "ಪಕ್ಷದ ಸದಸ್ಯರನ್ನು ಹೆಚ್ಚು ಕ್ರಿಯಾಶೀಲರಾಗಿ ಮಾಡುವ, ಅವರ ರಾಜಕೀಯ ತಿಳುವಳಿಕೆಯನ್ನು ಹೆಚ್ಚಿಸುವ ವರ್ಗ ಸಂಘಟನೆ ಮತ್ತು ಸಾಮೂಹಿಕ ಸಂಘಟನೆಗಳನ್ನು ಕೆಳಗಿನ ಮಟ್ಟದಲ್ಲಿ ಕ್ರಿಯಾತ್ಮಕಗೊಳಿಸುವ, ಸಾಮೂಹಿಕ ಸಂಘಟನೆಗಳು ನಡೆಸುವ ಚಳುವಳಿಗಳಲ್ಲಿ ಸಾಮಾನ್ಯ ಜನರು ಹೆಚ್ಚೆಚ್ಚಾಗಿ ಪಾಲ್ಗೊಳ್ಳುವಂತೆ ಮಾಡುವ, ಜಯುಗಳಿಕೆಯನ್ನು ಕ್ರೋಢಿಕರಿಸುವ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ವಿಸ್ತಾರಗೊಳಿಸುವ ಜವಾಬ್ದಾರಿ ನಿರ್ವಹಿಸಬೇಕಾದರೆ ಪಕ್ಷದ ಶಾಖೆಗಳು ಯಾವ ರೀತಿ ಕೆಲಸ ನಿರ್ವಹಿಸುತ್ತಿವೆ ಅದರ ಮೇಲೆ ಅವಲಂಬಿತವಾಗಿದೆ. ಪಕ್ಷ ವಿಸ್ತೃತಗೊಳ್ಳಬೇಕಾದರೆ ಶಾಖೆಗಳು ಬಲಶಾಲಿಯಾಗುವ ಮಹತ್ವವನ್ನು ಮೇಲಿನ ಕಮಿಟಿಗಳು ಗಂಭೀರವಾಗಿ ಪರಿಗಣಿಸಬೇಕು. ಪಕ್ಷದ 14 ನೇ ಪಾರ್ಟಿ ಕಾಂಗ್ರೆಸ್ಸಿನ ನಿರ್ಣಯ ಗಳನ್ನು ಜಾರಿಯಲ್ಲಿ ತರಬೇಕು. ಮೇಲಿನ ಕಮಿಟಿಗಳು ಶಾಖೆಗಳ ಚಟುವಟಿಕೆಗಳನ್ನು ಕಾಲಕಾಲಕ್ಕೆ ವಿಮರ್ಶಿಸುವ ಯೋಜನೆ ಮಾಡಬೇಕು'' ಇದರ ಕುರಿತು ಕೋಲಾರ ಸಮ್ಮೇಳನ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ.

ಯಾಕೆಂದರೆ ಈಗಿನ ರಾಜಕೀಯ ಗೊಂದಲದ ಪರಿಸ್ಥಿತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಮ್ಮ ಪಕ್ಷದ ಕೇಂದ್ರ, ಹಾಗೆಯೇ ರಾಜ್ಯಸಮಿತಿ ನಿರ್ವಹಿಸಿದ ಚಾರಿತ್ರಿಕ ಜವಾಬ್ದಾರಿಯ ಮಹತ್ವ ಜನರ ಮಧ್ಯೆ ಕೊಂಡೊಯ್ಯುವಲ್ಲಿ ನಮ್ಮ ಶಾಖೆಗಳು ಯಶಸ್ವಿಯಾಗಿವೆಯೆಂದು ಹೇಳಲು ಸಾಧ್ಯವಿಲ್ಲ. ಕರೆಗಳಿಗೆ ಜನರನ್ನು ಅಣಿನೆರಸುವ ಜೊತೆಯಲ್ಲಿಯೇ ನಮ್ಮ ರಾಜಕೀಯ ಜವಾಬ್ದಾರಿಯನ್ನು ಅಂದರೆ ಜನರ ಮಧ್ಯೆ ನಮ್ಮ ಸಾಧನೆಗಳನ್ನು ಕೊಂಡೊಯ್ಯುವಲ್ಲಿ ನಾವು ಸಮರ್ಥರಾಗಿದ್ದೇವೆಂದು ಹೇಳಿ ಕೊಳ್ಳುವ ಧೈರ್ಯ ನಮ್ಮ ಶಾಖೆಗಳಿಗಿಲ್ಲ. ಆ ಜವಾಬ್ದಾರಿಯನ್ನು ನಿರ್ವಹಿಸುವಂತೆ ಶಾಖೆಗಳಿಗೆ ಪ್ರಚೋದನೆ ನೀಡುವುದರಲ್ಲಿ ಯಶಸ್ವಿಯಾಗಬೇಕಾಗಿದೆ. ಕೋಲಾರದ ಸಮ್ಮೇಳನ ಹಲವಾರು ಕರ್ತವ್ಯಗಳ ಪೈಕಿ ಪಕ್ಷದ ಸಂಘಟನಾ ದೃಷ್ಟಿಯಿಂದ ಇದೂ ಮಹತ್ವ.

16ನೇ ರಾಜ್ಯ ಸಮ್ಮೇಳನ ಕೋಲಾರ ಸಿ.ಪಿ.ಐ.(ಎಂ)

ಶಿವಮೊಗ್ಗ ಜಿಲ್ಲಾ ಸಮ್ಮೇಳನ

ಸಿ.ಪಿ.ಐ(ಎಂ). ಪಕ್ಷದ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಡಿಸೆಂಬರ್ 10ರಂದು ದಿ.ಚಂದೂಕುಟ್ಟಿ ಯವರ ವೇದಿಕೆಯಲ್ಲಿ, ನಡೆಯಿತು. ಪಕ್ಷದ ಹಿರಿಯ ಮುಖಂಡರೂ ಹಾಗೂ ರೈತ ಮುಖಂಡರಾದ ಎಸ್.ಹೆಚ್. ಸುಬ್ಬಯ್ಯರವರು ಧ್ವಜಾರೋಹಣ ಮಾಡು ವುದರೊಂದಿಗೆ ಸಮೇಳನ ಪ್ರಾರಂಭ ವಾಯಿತು. ಪಕ್ಷಕ್ಕಾಗಿ,ಮತ್ತು ದೇಶಕ್ಕಾಗಿ ಹೋರಾಡಿ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯ್ತು.

ಸಮೇಳನ ಉದ್ಘಾಟಿಸಿ ಮಾತನಾಡಿದ ಪಕ್ಷದ ಹಿರಿಯ ಮುಖಂಡರಾದ ಸೂರ್ಯನಾರಾಯಣರಾವ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಯುಕ್ತ ರಂಗ ಇರಲಿಲ್ಲ ಇಂದು ಸಂಯುಕ್ತ ರಂಗ ಒಗ್ಗಟ್ಟು ಹಾಗೂ ಬಲಿಷ್ಠವಾಗಿದ್ದು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಹುಮತ ಗಳಿಸಲಿದೆ ಎಂದರು. ಜೊತೆಗೆ ಭ್ರಷ್ಟಚಾರಿ ಕಾಂಗ್ರೆಸ್, ಹಾಗೂ ಕೋಮುವಾದಿ ಬಿ.ಜೆ.ಪಿ ವಿರುದ್ಧ ಹೋರಾಟವನ್ನು ತೀವ್ರಗೊಳಿಸುವಂತೆ ಸಮ್ಮೇಳನಕ್ಕೆ ಕರೆ ನೀಡಿದರು. ಪ್ರತಿನಿಧಿ ವೀಕ್ಷಕರು ಸೇರಿದಂತೆ 43 ಪ್ರತಿನಿಧಿಗಳು ಪಾಲ್ಗೊಂಡಿದ್ದ ಪ್ರತಿನಿಧಿ ಅಧಿವೇಶನದಲ್ಲಿ ಕರಡು ವರದಿ ಚರ್ಚೆಯ ನಂತರ ಅಂಗೀಕಾರ ವಾಯಿತು.

ಸಮಾರೋಪ ಸಮಾರಂಭದಲ್ಲಿ ಸಿ. ನಂಜುಂಡಪ್ಪನವರು ಮಾತನಾಡಿ ಪಕ್ಷವು ಇಡೀ ಜಿಲ್ಲೆಯ ಬೆಳವಣಿಗೆಯ ದೃಷ್ಟಿಯಲ್ಲಿ ಕೆಲಸ ನಿರ್ವಹಿಸುವಂತೆ ಕರೆ ನೀಡಿದರು.

ನಿರ್ಣಯಗಳು: ಸಮ್ಮೇಳನವು ಜಿಲ್ಲೆಯ ಅಭಿವೃದ್ಧಿಗಾಗಿ ಒತ್ತಾಯಿಸುವ ಪ್ರಮುಖ ನಿರ್ಣಯಗಳು - 75 ವರ್ಷ ಇತಿಹಾಸವಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಯ ಆಧುನೀಕರಣಕ್ಕೆ 800 ಕೋಟಿ ರೂ ಹಣ ಬಿಡುಗಡೆಗೆ ಒತ್ತಾಯಿಸುವ, ಶಿವಮೊಗ್ಗದಲ್ಲಿ ಮೆಡಿಕಲ್ ಕಾಲೇಜ್ ಪ್ರಾರಂಭಿಸುವಂತೆ ಒತ್ತಾಯಿಸುವ ಜಿಲ್ಲೆಯ ರಸ್ತೆ ಹಾಗೂ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಪಡಿಸುವಂತೆ, ಬಂಜರು ಭೂಮಿಯ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವಂತೆ ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಿದೆ.

ನೂತನ ಪ್ರಾದೇಶಿಕ ಸಮಿತಿ: ಹೊಸ ಕಾರ್ಯದರ್ಶಿಯಾಗಿ ಎಲ್.ರಂಗೇಗೌಡ, ಎಸ್.ಬಿ.ಶಿವಶಂಕರ್ ಆಯ್ಕೆಯಾದರೆ, ಕೆ.ಎಂ .ಶ್ರೀನಿವಾಸ್. ಕೆ.ಸುಕುಮಾರನ್. ಜಿ. ಶಿವಣ್ಣ. ಟಿ.ಆರ್.ರಾಘವೇಂದ್ರರಾವ್. ನಾರಾಯಣ ಮತ್ತು ಗಿರಿಯಪ್ಪ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಬೆಳಗಾವಿ ಪ್ರಾದೇಶಿಕ ಸಮಿತಿ ಸಮ್ಮೇಳನ

ನೀರಾವರಿ ಅಭಿವೃದ್ಧಿ ಕರ - ಸಿ.ಪಿ.ಐ(ಎಂ). ವಿರೋಧ

ಬೆಳಗಾವಿ: ಡಿಸೆಂಬರ್ 11 ಮತ್ತು 12 ರಂದು ಬೆಳಗಾವಿ ಜಿಲ್ಲಾ ಸಿ.ಪಿ.ಐ(ಎಂ). ನ ಪ್ರಾದೇಶಿಕ ಸಮಿತಿಯ ಕರ್ನಾಟಕ ಸರ್ಕಾರದ ನೀರಾವರಿ ಕರ ವಿಧಿಸಬೇಕೆಂಬ ಯೋಜನಾ ಮಂಡಳಿಯ ಅಭಿಪ್ರಾಯವನ್ನು ಒಪ್ಪಿರುವುದಕ್ಕೆ ವಿರೋಧಿಸಿದೆ.

ಹಿಂದಿನ ಗುಂಡುರಾವ್ ಸರ್ಕಾರ ನೀರಾವರಿ ಅಭಿವೃದ್ಧಿ ಕರವನ್ನು ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ವಸೂಲಿ ಮಾಡಿದ್ದನ್ನು ವಿರೋಧಿಸಿ 1980 ರ ಐತಿಹಾಸಿಕ ನರಗುಂದ ಹಾಗೂ ನವಲಗುಂದದ ರೈತರು ಬಂಡೆದ್ದು ಚಳುವಳಿ ನಡೆಸಿದ್ದನ್ನು ಮರೆಯಬಾರದೆಂದು ಸರ್ಕಾರಕ್ಕೆ ಸಮ್ಮೇಳನ ಎಚ್ಚರಿಸಿದೆ.

ಸವದತ್ತಿಯಲ್ಲಿ ಪ್ರಾರಂಭಗೊಂಡ, ಸಮ್ಮೇಳನದಲ್ಲಿ ಹಿರಿಯ ಮುಂದಾಳು ಎಸ್.ಎಚ್.ಕಪ್ಪಣ್ಣವರ ಧ್ವಜಾರೋಹಣ ಮಾಡಿದರು, ಸಿ.ಪಿ.ಐ(ಎಂ). ರಾಜ್ಯ ಕಾರ್ಯದರ್ಶಿ ಮಂಡಳಿ ಸಧಸ್ಯರಾದ ಕಾಂ॥ ನಿತ್ಯಾನಂದ ಸ್ವಾಮಿ ಉದ್ಘಾಟಿಸಿದರು. ಬೆಳಗಾವಿ ಸಿ.ಪಿ.ಐ(ಎಂ) ಮುಖಂಡರಾದ ಎ.ಆರ್. ವಿಜಯಕುಮಾರ್, ನಾಗೇಶ್ ಸಾತೇರಿ, ನಿವೃತ್ತ ಲೇಬರ್ ಕಮೀಶನರ್ ಸಿ.ಪಿ. ಖರಾಡೆ ಸಮ್ಮೇಳನಕ್ಕೆ ಶುಭಕೋರಿದರು.

ನಿರ್ಣಯಗಳು

ಅಭಿವೃದ್ಧಿಕರ ವಿರೋಧಿಸಿ, ಮಹದಾಯಿ ನದಿಯನ್ನು ಮಲಪ್ರಭಾ ಜಲಾಶಯಕ್ಕೆ ಜೋಡಿಸಲು ಒತ್ತಾಯಿಸಿ, ಅತಿಕ್ರಮ ಸಾಗುವಳಿದಾರರಿಗೆ ಪತ್ರ ನೀಡುವಂತೆ ಅಂಗನವಾಡಿ ಕೇಂದ್ರಗಳಿಗೆ ಉತ್ತಮ ಗುಣವುಳ್ಳ ಆಹಾರ ಪೂರೈಕೆ ಹಾಗೂ ಹಗರಣಗಳ ತನಿಖೆಗೆ ಒತ್ತಾಯಿಸಿ, ಯಲ್ಲಮ್ಮಗುಡ್ಡದಲ್ಲಿ ಸಣ್ಣ ಪುಟ್ಟ ಅಂಗಡಿಗಳನ್ನು ತೆರವು ಮಾಡಿಸುವುದರ ವಿರುದ್ಧ ಮತ್ತು ಹಲವಾರು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿದೆ.

ಹೊಸ ಪ್ರಾದೇಶಿಕ ಸಮಿತಿ

ಒಂಭತ್ತು ಜನರುಳ್ಳ ನೂತನ ಪ್ರಾದೇಶಿಕ ಸಮಿತಿ ರಚಿಸಿದ್ದು ವಿ.ಪಿ.ಕುಲಕರ್ಣಿ ಕಾರ್ಯದರ್ಶಿಯಾಗಿ ಪುನರ್ ಆಯ್ಕೆಗೊಂಡರು.

ಧಾರವಾಡ ಜಿಲ್ಲಾ ಸಮ್ಮೇಳನ

ಸ್ವಾತಂತ್ರದ ಸುವರ್ಣ ವರ್ಷಚರಣೆಯ ಸಂದರ್ಭದಲ್ಲಿ ನೂರಕ್ಕೆ 40 ಕ್ಕೂ ಹೆಚ್ಚು ಜನರು ಇನ್ನೂ ಬಡತನ, ನಿರು ದ್ಯೋಗ, ಅಸಮಾನತೆ ,ಅನಕ್ಷರತೆ, ಅನಾರೋಗ್ಯ, ಶೋಷಣೆ, ಮುಂತಾದವುಗಳಿಂದ ಮುಕ್ತರಾಗದಿರುವ ಕುರಿತು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿಪಿಐ(ಎಂ) ರಾಜ್ಯ ಮುಖಂಡರೂ ಆದ ಕಾ.ಸೂರ್ಯನಾರಾಯಣ ರಾವ್ ಡಿಸೆಂಬರ್ 19 ರ ಸಂಜೆ ರಾಣಿಬೆನ್ನೂರಿನಲ್ಲಿ, ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸುತ್ತಾ ತಮ್ಮ ತೀವ್ರವಿಷಾದ ವ್ಯಕ್ತಪಡಿಸಿದರು. ಸಿ.ಪಿ.ಐ(ಎಂ) ತಿಳಿಸುವಂತೆ ಸದ್ಯದ ಬಂಡವಾಳಶಾಹಿ ಭೂಮಾಲಿಕರ ಪ್ರಭುತ್ವವನ್ನು ಕಿತ್ತೊಗೆದು ರೈತ-ಕಾರ್ಮಿಕರ ಪ್ರಭುತ್ವವನ್ನು ಸ್ಥಾಪಿಸುವುದರಿಂದ ಮಾತ್ರ ಸಾಧ್ಯ ಎಂದು ಕಾ. ರಾವ್ ಘೋಷಿಸಿದುದನ್ನು ಸಭೆಯಲ್ಲಿ ಕಿಕ್ಕಿರಿದು ಸೇರಿದ್ದ ರೈತ- ಕಾರ್ಮಿಕರು ಜಯಘೋಷಗಳಿಂದ ಸ್ವಾಗತಿಸಿದರು.

ಹಾನಗಲ್ ಹಾಗೂ ಸುತ್ತಮುತ್ತಲಿನ ತಾಲೂಕುಗಳ ಸಾವಿರಾರು ಬಡರೈತ ಕೂಲಿಕಾರರು ಭೂಮಿಗಾಗಿ ಪೋಲೀಸರ-ಅರಣ್ಯಾಧಿಕಾರಿಗಳ ದೌರ್ಜನ್ಯಗಳನ್ನು ಎದುರಿಸಿ ದೀರ್ಘಕಾಲದ ಜೈಲುವಾಸಗಳನ್ನು ಅನುಭವಿಸಿ ಹೋರಾಡುತ್ತಿರುವುದನ್ನು ಕಾಂ॥ ಸೂರ್ಯನಾರಾಯಣ ರಾವ್ ಅಭಿನಂದಿಸಿದರು. ಅವರಿಗೆ ಕೂಡಲೇ ನ್ಯಾಯ ದೊರಕಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಿದರು. ಈ ಬಡ ಕೂಲಿಕಾರರಿಗೆ ಸರಕಾರದ ಪಡ ಭೂಮಿಯನ್ನು ಹಂಚಿಕೊಟ್ಟು ಪಟ್ಟಾ ನೀಡಬೇಕೆಂದೂ ಅವರ ಮೇಲಿನ ನೂರಾರು ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿ.ಪಿ.ಐ.(ಎಂ) ರಾಜ್ಯ ಮುಖಂಡರೂ ಧಾರವಡ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ॥ ನಿತ್ಯಾನಂದ ಸ್ವಾಮಿ ಅವರು ಮಂಡಿಸಿದ ನಿರ್ಣಯವನ್ನು ಪ್ರಚಂಡ ಚಪ್ಪಾಳೆ ಹಾಗೂ ಘೋಷಣೆಗಳಿಂದ ಅಂಗೀಕರಿಸಲಾಯಿತು. ಕೃಷಿಕೂಲಿಕಾರರರ ನ್ಯಾಯೋಚಿತ ಬೇಡಿಕೆಗಳನ್ನು ಮಾತು ಕತೆಗಳ ಮೂಲಕ ಈಡೇರಿಸುವುದಾಗಿ ಈ ಹಿಂದೆ ಆಶ್ವಾಸನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಎಂ.ಉದಾಸಿ ತಮ್ಮ ವಚನ ಪಾಲಿಸಬೇಕೆಂದು ನಿರ್ಣಯದಲ್ಲಿ ಒತ್ತಾಯಿಸಲಾಯಿತು.

ಸಿ.ಪಿ.ಐ.(ಎಂ) ರಾಜ್ಯ ಮುಖಂಡರಾದ ಕಾಂ. ಜಿ.ಎನ್. ನಾಗರಾಜ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ ಐ.ಎಂ.ಎಫ್., ಜಾಗತಿಕ ಬ್ಯಾಂಕ್, ವಿಶ್ವವ್ಯಾಪಾರ ಸಂಸ್ಥೆಗಳ ಶರತ್ತುಗಳಿಗೆ ಶರಣಾಗಿ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಆಧಾರಿತ ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳನ್ನು ವಿವರಿಸಿ ತಿಳಿಸಿದರು. ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಒಂದೇ ನಾಣ್ಯದ ಎರಡು ಮುಖಗಳು ಎಂದು ತಿಳಿಸಿದರು. ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿಯ ಸದಸ್ಯರೂ ಕೃಷಿಕೂಲಿಕಾರರ ಸಂಘದ ಮುಖಂಡರೂ ಆದ ಕಾಂ. ಫಕೀರಪ್ಪ ಹೋತನಳ್ಳಿ ಅವರು ಜಯಲಲಿತ ಜೊತೆ ಅನೈತಿಕ ಚುನಾವಣಾ ಮೈತ್ರಿ ಮಾಡಿಕೊಂಡ ಬಿ.ಜೆ.ಪಿ.ಯನ್ನು ಲೇವಡಿ ಮಾಡಿದರು. ಸಿಪಿ.ಐ.(ಎಂ) ರಾಜ್ಯ ಸಮಿತಿಯ ಸದಸ್ಯರಾದ ಕಾಂ। ಸಿ.ಆರ್. ಭಟ್ ಮಾತನಾಡುತ್ತಾ ಸಿ.ಪಿ.ಐ.(ಎಂ) ಕಳೆದ 33 ವರ್ಷಗಳಲ್ಲಿ ಕೆಳಮಟ್ಟದಿಂದ ಮೇಲಟ್ಟದವರಿಗೆ ಚುನಾವಣೆಗಳನ್ನು ನಡೆಸಿ ಈಗ 16ನೇ ಬಾರಿಯ ಚುನಾವಣೆಗಳು ನಡೆಯುತ್ತಿದ್ದು ಅತ್ಯುನ್ನತ ಮಟ್ಟದ ಆಂತರಿಕ ಪ್ರಜಾಪ್ರಭುತ್ವವನ್ನು ಬೆಳೆಸಿಕೊಂಡು ಬಂದಿದೆ. ಇದಕ್ಕೆ ತದ್ವಿರುದ್ಧವಾಗಿ ಚುನಾವಣಾ ಆಯೋಗದ ಕಟ್ಟಾಜ್ಞೆಯ ಮೇರೆಗಷ್ಟೆ ಕಾಂಗ್ರೆಸ್‌ನಲ್ಲಿ 20 ವರ್ಷಗಳ ನಂತರ ಈ ವರ್ಷ ಚುನಾವಣೆ ನಡೆಸಿ ತೀವ್ರ ಆಂತರಿಕ ಬಿಕ್ಕಟ್ಟು ಸಂಭವಿಸಿದೆ. ಜನತಾದಳದಲ್ಲಿ ಈ ವರ್ಷ ಮೊದಲ ಬಾರಿಗೆ ಚುನಾವಣೆ ನಡೆಸಿ ಪಕ್ಷವೇ ಇಬ್ಭಾಗವಾಗಿದೆ. ಬಿ.ಜೆ.ಪಿ.ಯಲ್ಲಿ ತೋರಿಕೆಗೇ ಚುನಾವಣೆಗಳಾಗುತ್ತಿದ್ದರೂ ಆರ್.ಎಸ್.ಎಸ್.ನ ಬಿಗಿ ಹಿಡಿತವಿದ್ದು ಸರ್ವಾಧಿಕಾರವೇ ನಡೆಯುತ್ತಿದೆ. ಶಿವಸೇನೆಯಲ್ಲಿ ಚುನಾವಣೆಯೇ ನಡೆಯದೇ ಬಾಳಾಠಾಕ್ರೆ ಹಿಟ್ಲರನಂತೆ ಆ ಪಕ್ಷದ ಆಜೀವ ಅಧ್ಯಕ್ಷರಾಗಿದ್ದಾರೆ ಎಂದು ಕಾಂ. ಭಟ್ ತಿಳಿಸಿದರು.

ಉದ್ಘಾಟನಾ ಸಮಾರಂಭದ ಬಹಿರಂಗ ಸಭೆಯ ಮೊದಲು ಹಾನ್‌ಗಲ್ ತಾಲೂಕಿನಿಂದ ಲಂಬಾಣಿ ಮಹಿಳೆಯರೂ ಸೇರಿದಂತೆ ಕೃಷಿಕೂಲಿಕಾರರು ಮತ್ತು ಹುಬ್ಬಳ್ಳಿ, ರಾಣಿಬೆನ್ನೂರು, ಹರಿಹರ, ದಾವಣಗೆರೆ ನಗರಗಳಿಂದ ಕೈಗಾರಿಕೆ, ಬೀಡಿ ಹಾಗೂ ಕೈಮಗ್ಗ ಕ್ಷೇತ್ರಗಳ ಕಾರ್ಮಿಕರು, ವಿದ್ಯಾರ್ಥಿ ಯುವಜನರು, ಮಹಿಳೆಯರು- ಒಟ್ಟು ಒಂದು ಸಾವಿರ ಜನರು ಮೆರವಣಿಗೆಯಲ್ಲಿ ಬಂದರು. ಕೆಂಬಾವುಟಗಳಿಂದ, ಕೆಂಪು ಬ್ಯಾನರ್‌ಗಳಿಂದ ವರ್ಣರಂಜಿತ ಮೆರವಣಿಗೆಯಲ್ಲಿ 'ರೈತ ಕಾರ್ಮಿಕರ ಒಂದೇ ಪಕ್ಷ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ' ಇನ್‌ಕ್ವಿಲಾಬ್ ಜಿಂದಾಬಾದ್' ಭೂಮಿ ಕೊಡಿ, ಕೆಲಸಕೊಡಿ' ಭ್ರಷ್ಟ-ಪಕ್ಷಾಂತರಿ ಕಾಂಗ್ರೆಸ್-ಬಿ.ಜೆ.ಪಿ.ಗಳನ್ನು ಸೋಲಿಸಿರಿ' ಎಂಬ ಘೋಷಣೆಗಳು ಮೊಳಗಿದವು. ಮಧ್ಯದಲ್ಲಿ ವಿಮಾ ನೌಕರ ಸಂಘದವರು ಬೃಹತ್ ಮೆರವಣಿಗೆಯನ್ನು ಸೌಹಾರ್ದತೆಯ ಘೋಷಣೆಗಳೊಂದಿಗೆ ಸ್ವಾಗತಿಸಿದ್ದು ಅಭೂತಪೂರ್ವ ಹೃದಯಸ್ಪರ್ಶಿ ಘಟನೆಯಾಗಿತ್ತು. ಯುವ ಕಲಾವಿದರು ಕ್ರಾಂತಿಗೀತೆಗಳನ್ನು ಹಾಡುವುದರೊಂದಿಗೆ ಸಭೆ ಪ್ರಾರಂಭವಾಯಿತು. ರಾಣಿಬೆನ್ನೂರಿನ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮಹತ್ವವನ್ನು, ಸ್ವಾತಂತ್ರ್ಯ ಹೋರಾಟದಲ್ಲಿ ಈ ಪ್ರದೇಶದ ಜನರು ನಿರ್ವಹಿಸಿದ ಅವಿಸ್ಮರಣೀಯ ಪಾತ್ರವನ್ನು ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಸ್ಥಳೀಯ ವಿಮಾ ನೌಕರರ ಸಂಘದ ಕಾರ್ಯದರ್ಶಿಗಳಾದ ಎಸ್.ಎಲ್. ಜಾಡರ್ ತಿಳಿಸಿದರು. ಸಮಾರಂಭಕ್ಕೆ ಬಂದವರಿಗೆ ಸ್ವಾಗತಕೋರಿ ಶುಭ ಹಾರೈಸಿದರು. ಕೊನೆಯಲ್ಲಿ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಕೆ. ಬಸವನಗೌಡ ವಂದನಾರ್ಪಣೆ ಮಾಡಿದರು. ಸಿ.ಪಿ.ಐ.(ಎಂ) ನ ಇಷ್ಟು ದೊಡ್ಡ ಯಶಸ್ವಿ ಸಾರ್ವಜನಿಕ ಸಭೆ ರಾಣಿಬೆನ್ನೂರಿನಲ್ಲಿ ನಡೆದುದು ಇದೇ ಮೊದಲ ಸಲವಾಗಿದ್ದು, ಮುಂದೆ ಈ ಪ್ರದೇಶದಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳು ಬೆಳೆಯಲು ಇದು ಭದ್ರ ತಳಹದಿಯಾಗಲಿದೆ ಎಂದು ಆಶಿಸಬಹುದು. ಮುಂದೆ ಡಿ. 20 ಮತ್ತು 21ರಂದು ನಡೆದ ಜಿಲ್ಲಾ ಸಮ್ಮೇಳನದಲ್ಲಿ ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಿಂದ ಪಕ್ಷದ ವಿವಿಧ ಶಾಖೆಗಳ 53 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕಾಂ. ವಿ.ಎನ್. ದೇಶಪಾಂಡೆ ಕೆಂಬಾವುಟ ಹಾರಿಸಿದರು. ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದ ನಂತರ ಕಾಂ. ಜಿ.ಎನ್. ನಾಗರಾಜ್ ಪ್ರಾಸ್ತವಿಕವಾಗಿ ನಮ್ಮ ತುರ್ತು ಕರ್ತವ್ಯಗಳನ್ನು ನೆನಪಿಸಿಕೊಟ್ಟರು. ನಂತರ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ನಿತ್ಯಾನಂದ ಸ್ವಾಮಿ ಮಂಡಿಸಿದ ಕರಡು ವರದಿಯ ಮೇಲೆ 18 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ವರದಿ ಅಂಗೀಕಾರದ ನಂತರ ಐದು ಜಿಲ್ಲೆಗಳಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಯೋಜನೆಗಳು ಕುರಿತು 25 ನಿರ್ಣಯಗಳನ್ನು ಅಂಗೀಕರಿಸಲಾಯಿತು. ಮುಂದಿನ ಅವಧಿಗೆ ಕಾಂ. ನಿತ್ಯಾನಂದ ಸ್ವಾಮಿಯವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ, ಅವರೂ ಸೇರಿದಂತೆ ಸಿ.ಆರ್. ಭಟ್, ಡಿ.ಜೆ. ಗೊಂದ್‌ಕರ್, ಫಕೀರಪ್ಪ ಹೋತನಳ್ಳಿ ಮತ್ತು ಕೆ. ಮಹಾಂತೇಶ ಜಿಲ್ಲಾ ಕಾರ್ಯದರ್ಶಿ ಮಂಡಳಿಗೆ ಆಯ್ಕೆಗೊಂಡರು. ಸಂಗಾತಿಗಳಾದ ಎಂ.ವಿ. ಶೆಟ್ಟಿ, ವಿ.ಡಿ. ತುಪ್ಪದ, ಹಕ್ಕಲ ಗೌಡ, ಮ. ಪಾಟೀಲ, ಕೆ.ಎಲ್. ಭಟ್, ಎ.ಎಸ್.ಮೂರ್ತಿ, ಆರ್.ಸಿ. ಉನ್ನಿತನ್, ಆರ್.ಎಚ್.ಆಯಿ, ರವಿ ಇವರನ್ನು ಜಿಲ್ಲಾ ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತು. ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಸಂಗಾತಿಗಳಾದ ಡಿ.ಜೆ. ಗೊಂದಕರ್, ಫಕೀರಪ್ಪ ಹೋತನಳ್ಳಿ, ಕೆ.ಮಹಾಂತೇಶ, ಮತ್ತು ಕೆ.ಎಲ್.ಭಟ್ ಅವರನ್ನು ವೀಕ್ಷಕರಾಗಿ ಎ.ಎಸ್. ಮೂರ್ತಿ ಹಾಗೂ ರವಿ ಅವರನ್ನು ಆಯ್ಕೆ ಮಾಡಲಾಯಿತು.

ವರದಿ : ಸಿ.ಆರ್.ಭಟ್



ದ.ಕ. ಜಿಲ್ಲಾ ಸಮ್ಮೇಳನ

ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯಲು ಸ್ಫೂರ್ತಿ ನೀಡಿದ ಸಮ್ಮೇಳನ

ಡಿಸೆಂಬರ್ 16ರ ಸಾಯಂಕಾಲ ಕರ್ನಾಟಕದ ಕರಾವಳಿ ಪಟ್ಟಣವಾದ ಮಂಗಳೂರು ನಗರವು ವಸ್ತುಶಃ ಕೆಂಪು ಕಡಲಾಗಿತ್ತು. ಬಾವುಟಗುಡ್ಡೆಯಿಂದ ಹರಿದು ಬಂದ ಕೆಂಭಟರ ಪ್ರವಾಹವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಿದ್ದಾಗ ಬೀದಿಯ ಇಕ್ಕಡೆಗಳಲ್ಲಿ ಕಿಕ್ಕಿರಿದು ನಿಂತ ಜನತೆ ಬೆರಗುಗಣ್ಣಿನಿಂದ ನೋಡಿತು. ವರ್ಗ ವಿರೋಧಿಗಳಲ್ಲಿ ಎದೆ ನಡುಕ ಹುಟ್ಟಿಸಿತು. ಸೈನಿಕ ಪಡೆಯನ್ನು ನೆನಪಿಸುವ ಬ್ಯಾಂಡ್ ವಾದ್ಯ ಗೋಷ್ಠಿಗಳ ತಾಳಕ್ಕೆ ಶಿಸ್ತುಬದ್ಧವಾಗಿ ಹೆಜ್ಜೆ ಹಾಕಿದ ಸಾವಿರಾರು ಕೆಂಪು ಸ್ವಯಂ ಸೇವಕರು ದುಡಿಯುವ ಜನರ ಚಳುವಳಿಗೆ ರೋಮಾಂಚಕ ಸ್ಫೂರ್ತಿ ನೀಡಿದರು.

ದುಡಿಯುವ ವರ್ಗಕ್ಕೆ ನೇತೃತ್ವ ನೀಡುತ್ತಿರುವ ಸಿ.ಪಿ.ಐ.(ಎಂ)ನ 16 ನೇ ದ.ಕ. ಜಿಲ್ಲಾ ಸಮ್ಮೇಳನದ ಸಮಾರೋಪದ ಅಂಗವಾಗಿ ನಡೆದ ರ್ಯಾಲಿಯು ಚರಿತ್ರೆ ನಿರ್ಮಿಸಿತು.

- ರ್ಯಾಲಿಯ ಮರುದಿನ ಮಂಗಳೂರಿನ ಜನರ ಬಾಯಲ್ಲಿ ಮೆರವಣಿಗೆಯ ಬಗ್ಗೆಯೇ ಮಾತು. ಯುವ ಕಾಂಗ್ರೆಸ್ ಕಾರ್ಯಕರ್ತರೊಬ್ಬರು "ಈ ಬಾರಿಯ ಚುನಾವಣೆಯಲ್ಲಿ ಕಮ್ಯುನಿಸ್ಟ್‌ರೇ ಗೆಲ್ಲುತ್ತಾರೆ" ಎಂದ ಮಾತು ಉತ್ಪ್ರೇಕ್ಷೆಯ ಮಾತಾದರೂ ರ್ಯಾಲಿಯ ಗಾತ್ರವು ಜನಸಾಮಾನ್ಯರ ಮೇಲೆ ಬೀರಿದ ಪರಿಣಾಮವಿದು.
- ಸಿಪಿಐ(ಎಂ) ಸಮ್ಮೇಳನಕ್ಕೆ ಪ್ರಚಾರ ನೀಡಲು ಹಿಂಜರಿಯುತ್ತಿದ್ದ ನಗರದ ಪತ್ರಿಕೆಗಳು ಅಭೂತಪೂರ್ವ ರ್ಯಾಲಿಯನ್ನು ಕಂಡು ಸಿಪಿಐ(ಎಂ)ನ ಪ್ರಭಾವವನ್ನು ಅರಿತು ಬಳಿಕ [illegible]
- ಸಮ್ಮೇಳನದ ಅಂಗವಾಗಿ ಪ್ರಚಾರ ಸಮಿತಿಯು ಹೊರತಂದ ವಿಶೇಷ ಪುರವಣಿಯು ಸರ್ವರ ಮೆಚ್ಚುಗೆ ಗಳಿಸಿತು. ಪಕ್ಷದ ಕುರಿತು ಮಹತ್ವದ ದಾಖಲೆಗಳಿರುವ, ಜಿಲ್ಲೆಯ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ಮಾಹಿತಿಯಿರುವ ಪುರವಣಿಯು ಬಹಿರಂಗ ಸಭೆಯಲ್ಲಿ ಬಿಸಿ ದೋಸೆಯಂತೆ ಖರ್ಚಾಯಿತು.
- ಪ್ರತಿನಿಧಿ ಸಮ್ಮೇಳನ ನಡೆದಿದ್ದ ಕಾಂ|| ಸುನಿಲ್ ಮೈತ್ರಾ ನಗರದಲ್ಲಿ ಪ್ರದರ್ಶಿಸಲ್ಪಟ್ಟ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ಮಾಹಿತಿ ನೀಡುವ ಚಿತ್ರಪ್ರದರ್ಶನವನ್ನು ವೀಕ್ಷಿಸಿದವರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. 'ನಿರಂತರ ಬೆಳಗುವ' ಚಿತ್ರಪ್ರದರ್ಶನ ನಿರ್ಮಿಸಿತ್ತು.
- ಕಾರ್ಮಿಕರ ಹೋರಾಟದ ಹಿರಿಮೆಯನ್ನು ಸಾರುವ, ಉಳ್ಳಾಲ ವಲಯ ಸಿ.ಪಿ.ಐ.(ಎಂ) ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರು ನಿರ್ಮಿಸಿದ ಬೃಹದಾಕಾರದ ಟ್ಯಾಬ್ಲೋ ಜನ ಸಾಮಾನ್ಯರ ಮೆಚ್ಚುಗೆ ಗಳಿಸಿತು. ಶಾಸಕ ಶ್ರೀರಾಮರೆಡ್ಡಿಯವರು ಪ್ರಭಾವಿತರಾಗಿ ಕೋಲಾರದ ರಾಜ್ಯ ಸಮ್ಮೇಳನಕ್ಕೆ ಟ್ಯಾಬ್ಲೋ ತರುವಂತೆ ಸಂಘಟಕರನ್ನು ವಿನಂತಿಸಿದರು.
- ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯದರ್ಶಿಯಾಗಿ ಹಗಲುರಾತ್ರಿ ದುಡಿದ ಜೆ. ಬಾಲಕೃಷ್ಣಶೆಟ್ಟಿ ಮತ್ತು ಅವರೊಂದಿಗಿದ್ದ ವಸಂತ ಆಚಾರಿಯವರು ಸಮ್ಮೇಳನದ ಐತಿಹಾಸಿಕ ಯಶಸ್ಸಿನ ಬಗ್ಗೆ ಸಂತೃಪ್ತಿ ವ್ಯಕ್ತಪಡಿಸಿ ತಮ್ಮೊಂದಿಗೆ ನಿರಂತರ ದುಡಿದ ನೂರಾರು ಯುವಕಾರ್ಯಕರ್ತರನ್ನು ಕೃತಜ್ಞತೆಯಿಂದ ಸ್ಮರಿಸಿದರು.
- ಸಮ್ಮೇಳನದ ವಿಶೇಷ ಆಕರ್ಷಣೆಯಾದ ಕೆಂಪು ಸ್ವಯಂಸೇವಕರ ಪಥ ಸಂಚಲನಕ್ಕೆ ಪೂರ್ವಭಾವಿಯಾಗಿ ಜಿಲ್ಲೆಯಾದ್ಯಂತ ತರಬೇತಿ ನೀಡಲಾಗಿತ್ತು. ಇದಕ್ಕೆ ಕೆಂಪು ಪಡೆಯನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ತರಬೇತಿ ನೀಡಿ ಸುಸಜ್ಜಿತಗೊಳಿಸಲು ನಿರ್ಧಾರ ಮಾಡಿದೆ. ಹಿಂದಿಗಿಂತ ಭಿನ್ನವಾಗಿ 400 ಮಂದಿ ಕೆಂಭಟರು ಪಥಸಂಚಲನದಲ್ಲಿ ಭಾಗವಹಿಸಿದರು.

1981ರಲ್ಲಿ ರಾಜ್ಯ ಸಮ್ಮೇಳನದ ಅಂಗವಾಗಿ ಮಂಗಳೂರಿನಲ್ಲಿ ನಡೆದ ರ್ಯಾಲಿಯಲ್ಲಿ ಹೆಚ್ಚು ಜನ ಭಾಗವಹಿಸಿದ್ದಿರಬಹುದು. ಆದರೆ ಈ ಭಾರಿ ನಡೆದ ರ್ಯಾಲಿ ಹಿಂದೆಂದಿಗಿಂತಲೂ ಆವೇಶಭರಿತವಾಗಿತ್ತು. ಸ್ಫೂರ್ತಿಯುತವಾಗಿತ್ತು. ಆಶಾದಾಯಕವಾಗಿತ್ತು. ಜೊತೆಗೆ ವರ್ಣ ರಂಜಿತ-ಸೃಜನಶೀಲವಾಗಿತ್ತು. ಸಿ.ಪಿ.ಐ(ಎಂ) ಜಿಲ್ಲೆಯಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯುವ ಸೂಚನೆಯನ್ನು ನೀಡಿದ ರ್ಯಾಲಿಯಾಗಿತ್ತು. ಮೆರವಣಿಗೆಯಲ್ಲಿ ಭಾಗವಹಿಸಿದವರಲ್ಲಿ ಬಹುತೇಕರು ಮಹಿಳೆಯರು ಮತ್ತು ಯುವಜನರೆಂಬುದು ಗಮನಾರ್ಹ. ಜಿಲ್ಲೆಯ ಮೂಲೆ ಮೂಲೆಗಳಿಂದ ಬಂದ ಹತ್ತು ಸಹಸ್ರ ಮಂದಿ ಮೆರವಣಿಗೆಯಲ್ಲಿ ಭಾಗವಹಿಸಿದರು.

ಸ್ಫೂರ್ತಿಯುತ ಆರಂಭ

ಬೋಳಾರದ ಕಾಂ|| ಸುನಿಲ್ ಮೈತ್ರಾ ನಗರ (ಟೈಲ್ ವರ್ಕರ್ಸ್ ಯೂನಿಯನ್ ಕಛೇರಿ)ದಲ್ಲಿ ಡಿ. 14ರಂದು ಬೆಳಿಗ್ಗೆ 11ಕ್ಕೆ ಹಿರಿಯ ಮುಂದಾಳು ಜನಾರ್ದನ ನಾಯಕ್‌ರಿಂದ ಧ್ವಜಾರೋಹಣವಾದಾಗ ಆವೇಶಭರಿತ ಘೋಷಣೆಗಳು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಮೂಸಬ್ಬ ಉದ್ಘಾಟನಾ ಸಮಾರಂಭದಲ್ಲಿ ಸ್ವಾಗತ ಬಯಸಿದರು. ಡೇವಿಡ್ ಕರ್ಕಡರವರು ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದರು.

ಕಾಂ|| ಸೂರ್ಯ ನಾರಾಯಣರಾವ್‌ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾ **ಜಾಗತೀಕರಣ ನೀತಿಯಿಂದಾಗಿ** ನಮ್ಮ ದೇಶದ ಜನತೆ ಆರ್ಥಿಕ ಸಂಕಷ್ಟವನ್ನು ಎದುರಿಸುತಿದ್ದಾರೆ, ಸಮಾಜವಾದಿ ರಾಷ್ಟ್ರಗಳ ವಿಘಟನೆಯ ಸಂದರ್ಭದಲ್ಲಿ ಬಂಡವಾಳಶಾಹಿ ವ್ಯವಸ್ಥೆಯೇ ಶ್ರೇಷ್ಠ ವ್ಯವಸ್ಥೆಯೆಂದು ಕೊಚ್ಚಿಕೊಳ್ಳುತಿದ್ದವರ ಭ್ರಮೆಗಳು ಇಂದು ಕರಗಿ ಹೋಗಲಾರಂಭಿಸಿವೆ, ಬಂಡವಾಳಶಾಹಿ ರಾಷ್ಟ್ರಗಳು ಹಿಂದೆಂದೂ ಕಾಣದಂತಹ ಆರ್ಥಿಕ ದುರಂತವನ್ನು ಎದುರಿಸುತ್ತಿದ್ದು, ಸಮಾಜವಾದಿ ವ್ಯವಸ್ಥೆಯೇ ಮಾನವನ ಸಂಕಷ್ಟವನ್ನು ದೂರಗೊಳಿಸಬಲ್ಲದು ಎಂದು ಹೇಳಿ, ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಭ್ರಷ್ಟಾಚಾರ ಹಗರಣಗಳ ಕುಖ್ಯಾತಿಯ ಕಾಂಗ್ರೆಸ್ ಮತ್ತು ಜನತೆಯ ಐಕ್ಯತೆಯನ್ನು ಒಡೆಯುವ ಕೋಮುವಾದಿಗಳನ್ನು ಪರಾಭವಗೊಳಿಸಿ ಎಡ ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸುವಂತೆ ಜಿಲ್ಲೆಯ ಜನತೆಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಬಿ. ಮಾಧವರವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂದು ಹಿಂದೆಂದಿಗಿಂತಲೂ ಕಮ್ಯುನಿಸ್ಟರ ಪ್ರಭಾವ, ಪ್ರತಿಷ್ಠೆ ಹೆಚ್ಚುತ್ತಿದೆಯೆಂದು ಹೇಳಿದರು. ಪಿ. ರಾಮಚಂದ್ರರಾವ್‌ರವರು ಸಮ್ಮೇಳನದ ವಿಶೇಷ ಪುರವಣಿಯನ್ನು ಬಿಡುಗಡೆ ಮಾಡಿದರು.

ಪ್ರತಿನಿಧಿ ಸಮ್ಮೇಳನ

ಪರಿಸ್ಥಿತಿಗಳ ಬಗ್ಗೆ, ಪಕ್ಷದ ಚಟುವಟಿಕೆಗಳ ಬಗ್ಗೆ ಕರಡು ವರದಿಯನ್ನು ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್ ಮಂಡಿಸಿದರು.

ಉಡುಪಿ ಜಿಲ್ಲೆಯನ್ನು ಒಳಗೊಂಡು ಅವಿಭಜಿತ ದ.ಕ. ಜಿಲ್ಲೆಯ ವಿವಿಧ ಪ್ರದೇಶಗಳಿಂದ ಬಂದಿದ್ದ 147 ಮಂದಿ ಪ್ರತಿನಿಧಿಗಳ ಪೈಕಿ 32 ಮಂದಿ ಸಂಗಾತಿಗಳು ಕರಡು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದರು. ಪಕ್ಷವನ್ನು ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ಬೆಳೆಸಬೇಕೆನ್ನುವ ನಿಟ್ಟಿನಲ್ಲಿ ತಮ್ಮ ಅನುಭವದ ಆಧಾರದಲ್ಲಿ ಪ್ರಬುದ್ಧವಾದ ವಿಮರ್ಶೆ ನಡೆಸಿದರು. ಸ್ವಯಂ ಟೀಕೆಯನ್ನು ಮಾಡಿದರು. ಒಟ್ಟಿನಲ್ಲಿ ಜಿಲ್ಲೆಯಲ್ಲಿ ಪಕ್ಷವನ್ನು ಪ್ರಬಲ ಶಕ್ತಿಯನ್ನಾಗಿ ಮಾಡಬೇಕೆಂಬ ಗುರುತರವಾದ ಹೊಣೆಗಾರಿಕೆಯಿಂದ ಚರ್ಚೆ ನಡೆಸಿದರು.

ಎಂಟು ತಾಸುಗಳ ಸುದೀರ್ಘ ಚರ್ಚೆಯ ನಂತರ ಕೆ.ಆರ್. ಶ್ರೀಯಾನ್ ಉತ್ತರಿಸಿದರು.

ಕೆ.ಆರ್. ಶ್ರೀಯಾನ್‌ರವರನ್ನು ಮತ್ತೆ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಕಾಂ|| ಸೂರಿ, ಕಾಂ|| ಪಿ. ರಾಮಚಂದ್ರರಾವ್, ಕಾಂ|| ಜಿ.ಎಸ್. ನಾಗರಾಜ್, ಕಾಂ|| ಸಿ. ನಂಜುಂಡಪ್ಪ ಸಮ್ಮೇಳನದುದ್ದಕ್ಕೂ ಹಾಜರಿದ್ದು ಮಾರ್ಗದರ್ಶನ ನೀಡಿದರು.

ನಿರ್ಣಯಗಳು

ಲೋಕ ಸಭೆ ಚುನಾವಣೆಯಲ್ಲಿ ಭ್ರಷ್ಟಾಚಾರಿ ಕಾಂಗ್ರೆಸ್ ಮತ್ತು ಕೋಮುವಾದಿ ಬಿ.ಜೆ.ಪಿ.ಯನ್ನು ಸೋಲಿಸಿ ಎಡ ಪ್ರಜಾಪ್ರಭುತ್ವ ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸಬೇಕು, ಹಾಸನ ಮಂಗಳೂರು ಬ್ರಾಡ್ ಗೇಜ್ ರೈಲ್ವೇ ಹಳಿ ಕೆಲಸ ಕೂಡಲೇ ಪೂರ್ತಿಗೊಳಿಸಬೇಕು, ರೋಗಗ್ರಸ್ಥ ಕೈಗಾರಿಕೆಗಳನ್ನು ಪುನರ್ರೂಪಿಸಬೇಕು, ಖಾಸಗಿ ಸಾರಿಗೆ ರೂಟ್‌ಗಳನ್ನು ರಾಷ್ಟ್ರೀಕರಣಗೊಳಿಸಬೇಕು, ಕೆರೆ, ನದಿ, ತೋಡುಗಳ ದುರಸ್ತಿ ಮಾಡಬೇಕು, ವರಾಹಿ ನೀರಾವರಿ ಯೋಜನೆಯನ್ನು ಪೂರ್ತಿಗೊಳಿಸಬೇಕು, ವಿಮಾ ಖಾಸಗೀಕರಣ ಕೈ ಬಿಡಬೇಕು, ಕರಾವಳಿ ಉದ್ದಕ್ಕೂ ಶಾಶ್ವತ ತಡೆಗೋಡೆ ನಿರ್ಮಿಸಬೇಕು, ಬೈಂದೂರು, ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗಳನ್ನು ಚತುಷ್ಪಥದ ರಸ್ತೆಯಾಗಿ ಮಾಡಬೇಕು ಮುಂತಾದ ನಿರ್ಣಯಗಳನ್ನು ಸಮ್ಮೇಳನವು ಕೈಗೊಂಡಿತು.

ಕೆಂಪು ನಗರವಾದ ಬಹಿರಂಗ ಸಭೆ

ಡಿ. 16ರ ಚಾರಿತ್ರಿಕ ಸಭೆಗೆ ಬೆಳಿಗ್ಗೆಯಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಜನರು ನಗರಕ್ಕೆ ಆಗಮಿಸಲಾರಂಭಿಸಿದರು. ಸಂಜೆ ನಾಲ್ಕಕ್ಕೆ ಬಾವುಟಗುಡ್ಡೆಯಿಂದ ಆರಂಭಗೊಂಡ ವರ್ಣರಂಜಿತ ಮೆರವಣಿಗೆ ಶಿಸ್ತುಬದ್ಧವಾಗಿತ್ತು. ಆಕರ್ಷಣೀಯವಾಗಿತ್ತು.

ಮೆರವಣಿಗೆಯ ಎದುರಿನಲ್ಲಿ ಕೆಂಬಾವುಟಗಳನ್ನು ಹೊತ್ತು 25 ಮಂದಿ ದ್ವಿಚಕ್ರವಾಹನ ಸವಾರರು. ಅವರ ಹಿಂದೆ ರಿಕ್ಷಾಗಳ ಸಾಲು. ಅವರ ಹಿಂದೆ ಬ್ಯಾಂಡ್ ವಾದ್ಯಧಾರಿ ಬಿಳಿ-ಕೆಂಪು ಸೈನಿಕ ಪಡೆ. ಅದರ ಹಿಂದೆ ಒಂದು ಸಾವಿರ ಮಂದಿ ಖಾಕಿ ಪ್ಯಾಂಟು, ಕೆಂಪು ಷರಟುಧಾರಿ ಪುರುಷ ಸ್ವಯಂಸೇವಕರು, ಅವರ ಹಿಂದೆ ಬಿಳಿ ಸೀರೆ ಕೆಂಪು ಕುಪ್ಪಸಧಾರಿ ಮಹಿಳಾ ಸ್ವಯಂ ಸೇವಕರು ವರ್ಣಮಯ ಬೃಹತ್ ಕೊಡೆಗಳನ್ನು ಹಿಡಿದಿದ್ದರು. ಅವರ ಹಿಂದೆ ವೇಷಧಾರಿಗಳು, ಹುಲಿವೇಷಧಾರಿಗಳು, ಇವೆಲ್ಲಕ್ಕೂ ಕಳಸವಿಟ್ಟಂತೆ ಕಾರ್ಮಿಕರ ಮುನ್ನಡೆ ಸೂಚಿಸುವ ಉಳ್ಳಾಲ ವಲಯ ಸಿ.ಪಿ.ಐ.(ಎಂ) ನಿರ್ಮಿತ ಆಕರ್ಷಕ ಟ್ಯಾಬ್ಲೋ. ಬಳಿಕ ಆವೇಶಭರಿತ, ಉತ್ಸಾಹದಿಂದ ಘೋಷಣೆ ಕೂಗುವ ಜನಸಹಸ್ರರು. ನಿಜಕ್ಕೂ ಅದೊಂದು ಜನೋತ್ಸವವಾಗಿತ್ತು. ಮಂಗಳೂರಿನ ಜನತೆ ಅಂದು ಸಿ.ಪಿ.ಐ.(ಎಂ)ನ ಹೊಸ ರೂಪವನ್ನು ಕಂಡರು. ಮಧ್ಯಮ ವರ್ಗದ ಜನರೂ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದುದು ಗಮನೀಯ. ಹಾದಿಹೋಕರನೇಕರು ಸ್ವಯಂ ಸ್ಫೂರ್ತಿಯಿಂದ ಮೆರವಣಿಗೆಯೊಂದಿಗೆ ಸೇರಿಕೊಂಡರು.

ಕೇರಳ ಮುಖ್ಯಮಂತ್ರಿ ನಾಯನಾರ್‌ರವರ ಅನುಪಸ್ಥಿತಿಯಲ್ಲಿ ಕಾಸರಗೋಡು ಟಿ. ಗೋವಿಂದನ್ ತಮ್ಮ ಆವೇಶಭರಿತ ಭಾಷಣ ಶೈಲಿಯಿಂದ ಸಭೆಗೆ ಮೆರಗು ನೀಡಿದರು. ಕಾಂಗ್ರೆಸ್‌ನ 'ಲವ್ ಇನ್ ರೋಮ್' ಮತ್ತು ಬಿ.ಜೆ.ಪಿ.ಯ 'ಲವ್ ಇನ್ ರಾಮ್' ಕನಸುಗಳನ್ನು ಜನರು ಧ್ವಂಸಗೊಳಿಸಲಿದ್ದಾರೆಂದು ಅವರು ಹೇಳಿದಾಗ ಬೃಹತ್ ಸಭೆಯಿಂದ ಪ್ರಚಂಡ ಕರತಾಡನ ಮತ್ತು ನಗುವಿನ ಅಲೆ.

ಸಭೆಯನ್ನು ಉದ್ದೇಶಿಸಿ ಪಿ.ಆರ್. ರಾವ್, ಸೂರಿ, ಶ್ರೀಯಾನ್, ಜಿ.ಎಸ್. ನಾಗರಾಜ್, ಶ್ರೀರಾಮರೆಡ್ಡಿ, ಬಿ. ಮಾಧವ ಮುಂತಾದವರು ಮಾತನಾಡಿದರು.

'ವಿ ಶಲ್ ಓವರ್‌ಕಮ್' ಗೀತೆಯೊಂದಿಗೆ ಜಿಲ್ಲೆಯಲ್ಲಿ ಬೃಹತ್ ಜನಪರ ಆಂದೋಲನವನ್ನು ಕಟ್ಟುವ ಹುಮ್ಮಸ್ಸಿನೊಂದಿಗೆ ಸಭೆಯು ಮುಕ್ತಾಯವಾಯಿತು.

- ವರದಿ : ನಾಗೇಶ್ ಕುಮಾರ್



ಬಿಜಾಪುರ ಜಿಲ್ಲಾ 14ನೇ ಸಮ್ಮೇಳನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಿಜಾಪುರ ಪ್ರಾದೇಶಿಕ ಸಮಿತಿಯ 14ನೆಯ ಸಮ್ಮೇಳನ ಡಿಸೆಂಬರ್ 23-24 ರಂದು ದಿ.ಬಸವಂತಪ್ಪ ಕಲ್ಲೊಳ್ಳಿ ನಗರದಲ್ಲಿ ನಡೆಯಿತು. ಸಮ್ಮೇಳನದ ಉದ್ಘಾಟನಾ ಸಮಾರಂಭ ದಿ. 23 ರಂದು ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ತಾನು ಕೊಡುತ್ತಿದ್ದ ಬೆಂಬಲವನ್ನು ಕಾಂಗ್ರೆ ವಾಪಸ್ ತೆಗೆದುಕೊಂಡದ್ದರಿಂದುಂಟಾದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಸ್ವಾತಂತ್ರ್ಯ ಗಳಿಸಿದ ನಂತರ ಕಾಂಗ್ರೆಸ್ ಯಾವ ರೀತಿ ಜನತೆಯ ಆಶೋತ್ತರಗಳನ್ನು ಭಗ್ನಗೊಳಿಸುತ್ತಾ ಬಂದಿದೆ, ಬೆಲೆಯೇರಿಕೆ, ನಿರುದ್ಯೋಗ, ಬಡತನಗಳನ್ನು ನಿವಾರಿಸಲು ವಿಫಲವಾಗಿದೆಂಬುದನ್ನು ತಿಳಿಸಿ, ಉದಾರೀಕರಣ ನೀತಿಯಿಂದಾಗಿ ವಿದೇಶಿ ಬಂಡವಾಳ ದೇಶವನ್ನು ಆಕ್ರಮಣ ಮಾಡಲಿಕ್ಕೆ ಅವಕಾಶಮಾಡಿಕೊಟ್ಟು, ದೇಶದ ಸ್ವಾತಂತ್ರ್ಯಕ್ಕೆ ಅಪಾಯ ತಂದಿರುವುದನ್ನು ಎಲ್ಲರ ಗಮನಕ್ಕೆ ತಂದು ಅದರ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿಯವರು ಮುಖ್ಯ ಅತಿಥಿಯಾಗಿ ಮಾತನಾಡುತ್ತಾ ಕಾಂಗ್ರೆಸ್ ದೇಶವನ್ನು ಹಾಳು ಮಾಡಿ, ತಾನೂ ಛಿದ್ರಗೊಳ್ಳುವುದರತ್ತ ಗಮನ ಸೆಳೆದರು. ಅವರು ಬಿಜೆಪಿಯ ಅಪಾಯಕಾರಿ ಧೋರಣೆಯನ್ನು ಬಯಲಿಗೆಳೆಯುತ್ತ, ಇತ್ತೀಚಿಗೆ ಉತ್ತರ ಪ್ರದೇಶದಲ್ಲಿ ಪಕ್ಷಾಂತರಕ್ಕೆ ಅಧಿಕಾರದ ಆಮಿಷ ಒಡ್ಡಿ, ಅವರಗೆಲ್ಲಾ ಮಂತ್ರಿ ಸ್ಥಾನವನ್ನು ಕೊಟ್ಟು, ದರೋಡೆಕೋರರಿಗೆ, ಸಮಾಜ ದ್ರೋಹಿಗಳಿಗೆ ಅವಕಾಶ ಮಾಡಿಕೊಟ್ಟ ನೀತಿಯನ್ನು ಖಂಡಿಸುತ್ತದೆಂದು ಎಚ್ಚರಿಸಿದರು. ಸಂಯುಕ್ತ ರಂಗ ರಚನೆಯಲ್ಲಿ ಎಡ ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸುವುದರಲ್ಲಿ ಸಿಪಿಐ(ಎಂ) ಪಕ್ಷ ಶ್ರಮಿಸಿದ್ದನ್ನು ವಿವರಿಸಿ, ಪಕ್ಷವನ್ನು ಬಲಿಷ್ಠಗೊಳಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅತಿಥಿಯಾಗಿ ಬಂದ ಬಿ.ಡಿ.ಎ. ಅಧ್ಯಕ್ಷರಾದ ರಿಯಾಜ್ ಫರೂಕಿಯವರು ಮತಭೇದಗಳನ್ನು ಮರೆತು ಒಗ್ಗಟ್ಟಾಗಿ ಬಡವರ ಸಲುವಾಗಿ ದುಡಿಯಬೇಕೆಂದು ಹೇಳಿ ಸಮ್ಮೇಳನಕ್ಕೆ ಶುಭಕೋರಿದರು. ಅಣ್ಣಾರಾಯ ಇಳಿಗೇರ ಆಭಾರ ಮನ್ನಿಸಿದರು. ನೂರಕ್ಕೂ ಹೆಚ್ಚು ಮಹಿಳೆಯರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ನಂತರ ನಡೆದ ಪ್ರಾದೇಶಿಕ ಸಮ್ಮೇಳನವನ್ನು ಶ್ರೀಧರಕುಲಕರ್ಣಿ ಡಿ.ಎಂ.ಖಲಾಸಿ, ಸುರೇಖಾ ರಜಪುತ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ನೆರವೇರಿಸಿತು. ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಭೀಮಸಿ ಕಲಾದಗಿಯವರು 3 ವರ್ಷಗಳ ವರದಿ ಮಂಡಿಸಿದರು. ಒಟ್ಟು 67 ಪ್ರತಿನಿಧಿಗಳ ಪೈಕಿ (ಹನ್ನೆರಡು ಮಹಿಳೆಯರು) 17 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಕಾರ್ಯದರ್ಶಿಯವರು ಚರ್ಚೆಗೆ ಉತ್ತರ ನೀಡಿದ ನಂತರ ವರದಿ ಸರ್ವಾನುಮತದಿಂದ ಪಾಸಾಯಿತು. ವರದಿಯಲ್ಲಿ ಪ್ರಾದೇಶಿಕ ಕೇಂದ್ರವನ್ನು ಬಲಿಷ್ಠಗೊಳಿಸಬೇಕು, ಕೇಂದ್ರದಲ್ಲಿ ಒಬ್ಬ ಪೂರ್ಣಕಾಲದ ಕಾರ್ಯಕರ್ತ ಇರಬೇಕು, ಅವನಿಗೆ ಸರಿಯಾದ ಅಲೋಯೆನ್ಸ್ ಕೊಡಬೇಕು, ರೈತ ಸಂಘ, ಕಾರ್ಮಿಕ ರಂಗ ವಿದ್ಯಾರ್ಥಿ, ಯುವಜನ ರಂಗದ ಕಾರ್ಯಕ್ಕೆ ಹೆಚ್ಚು ಗಮನ ನೀಡಬೇಕು. ಮಹಿಳಾ ಸಂಘಟನೆಗೆ ಮಾರ್ಗದರ್ಶನ ನೀಡಬೇಕು. ಕನಿಷ್ಟ 250 ಐಕ್ಯರಂಗ ತರಿಸಿ ಮಾರಬೇಕೆಂಬ ನಿರ್ದೇಶನ ಒಳಗೊಂಡಿದೆ. 5 ಹೊಸ ಸದಸ್ಯರನ್ನೊಳಗೊಂಡ 12 ಜನರ ಹೊಸ ಪ್ರಾದೇಶಿಕ ಸಮಿತಿಯನ್ನು ಆರಿಸಲಾಯಿತು. ಒಂದು ಖಾಲಿ ಇಡಲಾಯಿತು. ಭೀಮಸಿ ಕಲಾದಗಿಯವರನ್ನು ಪುನಃ ಕಾರ್ಯದರ್ಶಿಯವರನ್ನಾಗಿಯೂ, ಅಣ್ಣಾರಾಯ ಇಳಿಗೇರ ಅವರನ್ನು ಜೊತೆ ಕಾರ್ಯದರ್ಶಿಯವರನ್ನಾಗಿಯೂ, ಡಿ.ಎಂ.ಖಲಾಸಿ, ಶ್ರೀಧರ ಕುಲಕರ್ಣಿ, ಸ್ಯಾಬಣ್ಣ ಹಂದಿಗನೂರು, ಸಿದ್ದಣ್ಣ ಐಗೋಡಗಿ, ಮಳಸಿದ್ದ ನ್ಯಾಕೊಡಿ (ಎಲ್ಲಾ ಹಳೇ ಸದಸ್ಯರು)ಸುರೇಖಾ ರಜಪೂತ, ಬಿ.ಡಿ.ಪಾಟೀಲ್, ಎಂ.ಎಲ್. ನದಾಫ್, ನಭೀಸಾ ಧವಳಗಿ, ಪಿ.ಎಂ. ಸೊನ್ನದ ಅವರನ್ನು ಸದಸ್ಯರನ್ನಾಗಿಯೂ ಆರಿಸಲಾಯಿತು. ನೀರಾವರಿ, ನೇಕಾರ ಸಮಸ್ಯೆಗಳ ಕುರಿತು 20 ನಿರ್ಣಯಗಳನ್ನು ಪಾಸು ಮಾಡಲಾಯಿತು.

24 ರ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ನಿತ್ಯಾನಂದ ಸ್ವಾಮಿ, ಎನ್.ಕೆ. ಉಪಾಧ್ಯಾಯ, ಭೀಮಸಿ ಕಲಾದಗಿ, ಸುರೇಖಾ ರಜಪುತ ಮೊದಲಾದವರು ಭಾಷಣ ಮಾಡಿದರು. ಅಣ್ಣಾರಾಯ ಇಳಿಗೇರ ಸ್ವಾಗತಿಸಿದರು, ಎಂ.ಎಲ್. ನಧಾಪ ಆಭಾರ ಮನ್ನಿಸಿದರು. ○

ಹೀಗೊಂದು ಸೀತಾ..... ರಾಂಪ ಜೋಕು

ಸೀತಾರಾಂ ಕೇಸರಿಯವರ ಈ ವಾರದ ಅವಸ್ಥೆಗಳನ್ನು ನೋಡಿದರೆ, ನನ್ನ ಮಿತ್ರರೊಬ್ಬರು ಹೇಳಿದ ರಾಂಪ ಜೋಕು ನೆನಪಾಗುತ್ತದೆ. ಈ ರಾಂಪ ಯಾರು ಎಂದಿರಾ? ನೀವು ಕರ್ನಾಟಕದಲ್ಲಿದ್ದೀರಾ? ಎಲ್ಲಿದ್ದೀರಾ ಸಾರ್! ರಾಂಪ ಗೊತ್ತಿಲ್ವೆ? ರಾಂಪ ಜೋಕುಗಳನ್ನು ಕೇಳಿಲ್ವೆ? ಗೊತ್ತಿಲ್ಲದಿದ್ದರೆ ಮುಂದೆ ಓದಿ.

ರಾಂಪ ನಮ್ಮ ' ಸಾಲ ಮೇಳ' ದ ಪ್ರಸಿದ್ಧ ಕಾಂಗ್ರೆಸ್ ಪುಢಾರಿ ಜನಾರ್ಧನ ಪೂಜಾರಿಯವರ ಮ್ಯಾನೇಜರ್, ಬಂಟ, ಬಲಗೈ ಇತ್ಯಾದಿಯಂತೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಸ್ಸಾರಿ.... ಈಗ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ) ಹೇಗೋ ಸರ್ದಾರ್ಜಿ ಜೋಕುಗಳಂತೆ, ಎಲ್ಲರೂ ತಮ್ಮ ಜೋಕುಗಳನ್ನು ರಾಂಪನ ಸುತ್ತ ಹೆಣೆಯತೊಡಗಿದ್ದಾರೆ. ಈಗ ಸಂಬಂಧ ಪಟ್ಟ ರಾಂಪ ಜೋಕು ಹೇಳ್ತೀನಿ ಕೇಳಿ.

ಕೈ!! .....ಜೈ!!!.....

ರಾಂಪ ಪಕ್ಕಾ ಕಾಂಗ್ರೆಸ್ಸಿಗ-ಅದೂ ಐ. ಕಾಂಗ್ರೆಸ್ಸಿಗ ಅಥವಾ ಕೈ ಕಾಂಗ್ರೆಸ್ಸಿಗ ಅನ್ನೋಣವೇ? ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಚುನಾವಣೆ ಪ್ರಚಾರಕ್ಕೆ ಒಂದು ಪಟಾಲಂ ಕಟ್ಟಿಕೊಂಡು ವ್ಯಾನ್‌ನಲ್ಲಿ ಹೊರಟನಂತೆ. ಹೊರಡುವ ಮೊದಲು ಎಲ್ಲೆಲ್ಲಿ ಯಾವ ಸ್ಲೋಗನ್ನು ಕೂಗಬೇಕು ಎಂದು ಪಟಾಲಂಗೆ ವಿವರಿಸಿದನಂತೆ. ಅದರಲ್ಲಿ ಒಂದು ಸ್ಲೋಗನ್ನು-ರಾಂಪ 'ಕೈ' ಎನ್ನುವಾಗ ಪಟಾಲಂನವರೆಲ್ಲ 'ಜೈ' ಅನ್ನಬೇಕು. ಸರಿ ಹೀಗೆ ಇನ್ನೂ ಹಲವಾರು ಸ್ಲೋಗನ್ನುಗಳು.

ಸರಿ! ವ್ಯಾನ್ ಹೊರಟಿತು. ಪ್ರಚಾರ ಮಾಡಿ ಸುಸ್ತಾಗಿ ರಾಂಪ ಮತ್ತು ಪಟಾಲಾಂನವರು ಒಂದು ಹೋಟೇಲಲ್ಲಿ ಚಾ ಕುಡಿಯಲು ಹೋದರು. ಚಾ ಕುಡಿದ ಮೇಲೆ ಪಟಾಲಂನವರು ವ್ಯಾನ್ ಹತ್ತಿದರಂತೆ. ರಾಂಪನು ಕೊನೆಗೆ ಹತ್ತಿದನಂತೆ. ರಾಂಪ ಹತ್ತಿದ ಮೇಲೆ ಒಳಗಿದ್ದವನೊಬ್ಬ ವ್ಯಾನ್ ಬಾಗಿಲು ಜೋರಾಗಿ ಹಾಕಿದನಂತೆ. ರಾಂಪನ ಬೆರಳೊಂದು ಸಿಕ್ಕಿ ಹಾಕಿಕೊಂಡಿತಂತೆ. ರಾಂಪ ನೋವಿನಿಂದ 'ಕೈ'.... ಎಂದನಂತೆ. ಆಗ ಪಟಾಲಾಂನವರೆಲ್ಲ 'ಜೈ' ಎಂದರಂತೆ. ರಾಂಪನ ಬೆರಳಿನಿಂದ ರಕ್ತ ಸುರಿಯಲಾರಂಭಿಸಿತ್ತು. ರಾಂಪ ' ಜೈ ಅಲ್ಲಾ ಕೈ.....' ಎಂದು ಬೊಬ್ಬೆ ಇಟ್ಟನಂತೆ . ಎಲ್ಲರೂ ಇನ್ನೂ ಜೋರಾಗಿ 'ಜೈ' .....ಎಂದರಂತೆ. ಹೀಗೆ ಎರಡು ಮೂರು ಬಾರಿ ಆದ ಮೇಲೆ ಪಟಾಲಂ ನವರಿಗೆ ರಾಂಪನ'ಕೈ' ಸಿಕ್ಕಿಕೊಂಡದ್ದು ಗೊತ್ತಾಯ್ತಂತೆ. ಆ ಮೇಲೆ ಉದ್ದಕ್ಕೂ 'ಜೈ' ಕಾರ ಆಗುತ್ತಿದ್ದಂತೆ, ರಾಂಪ 'ಕೈ'...... ನೋಡುತ್ತಾ ಕಾಲ ಕಳೆಯಬೇಕಾಯಿತಂತೆ.

ಇದಕ್ಕೂ ಸೀತಾರಾಂ ಕೇಸರಿಯವರ ಅವಸ್ಥೆಗೂ ಏನು ಸಂಬಂಧ ಎಂದಿರಾ? ಎಂಥಾ ಮಾರಾಯ್ರೆ! ಇಷ್ಟು 'ಅಣಕ' ಓದಿಯೂ ಗೊತ್ತಾಗ್ಲಿಲ್ವ? ಸೀತಾರಾಂ ಕೇಸರಿಯವರು ದೇವೇಗೌಡರ ಸರಕಾರ ಉರುಳಿಸಿ, 'ಕೈ' ಎಂದಾಗ ಎಲ್ಲರೂ 'ಜೈ' ....ಎಂದರು. ಅವರು ಹೇಳಿದ ಹಾಗೆ ಪ್ರಧಾನಿ ಬದಲಾಯಿಸಿದರು. ಗುಜ್ರಾಲ್ ಸರ್ಕಾರ ಉರುಳಿಸಿದಾಗ, ಬೆರಳು ಸಿಕ್ಕಿ ಹಾಕಿಕೊಂಡು 'ಕೈ....... ಎಂದಾಗ ಎಲ್ಲರೂ 'ಜೈ.......' ಅನ್ನಿಲ್ವೇ? ಚುನಾವಣೆ ಎದುರಿಸಲು ಬೆದರಿಕೊಂಡು 'ಕೈ....' ಎಂದಾಗ ಎಲ್ಲರೂ 'ಜೈ...' ಅನ್ನಿಲ್ವೇ. ಆಮೇಲೆ ಕಾಂಗ್ರೆಸ್ ಯುಎಫ್ ಗೆ ವಿರುದ್ಧವಾಗಿ ಜಾತ್ಯಾತೀತ ರಂಗ ಕಟ್ತೇನೆ ಅಂತ ಓಡಾಡ್ತಾ 'ಕೈ' ಇಟ್ಟಲ್ಲೆಲ್ಲಾ ಸಿಕ್ಕಿಹಾಕಿಕೊಂಡು, ಬಹಳ ಕಾಂಗ್ರೆಸ್ಸಿಗರು 'ಜೈ' ಅಂತ ಕಾಂಗ್ರೆಸ್ ಬಿಟ್ಟು ಬಿಜೆಪಿ ಇತರ ಪಕ್ಷ ಸೇರ್ತಾ ಇಲ್ವೇ. ತಮಿಳುನಾಡಿನಲ್ಲಿ, ಬಂಗಾಳದಲ್ಲಿ ಸೀತಾರಾಂ 'ಜೈ' ಎನ್ನಲು ಹೋದ್ರೆ. ಜಯಲಲಿತಾ ಮಮತಾ 'ಕೈ' ಕೊಡೋದೇ! ಕೈ...... ಜೈ..... ಸ್ವಲ್ಪ ಉಲ್ಟಾ ಆಗ್ತಾ ಇದ್ಯೆ? ಕುಮಾರ ಮಂಗಳಂ, ಮಣಿ ಶಂಕರ ಐಯ್ಯರ್, ಎಲ್ಲಾರೂ 'ಜೈ' ಎನ್ನುತ್ತಾ 'ಕೈ' ಕೊಡ್ಲಿಲ್ವೆ? ಸೀತಾರಾಂ ಕೇಸರಿಯವರ ಸಿಕ್ಕಿಕೊಂಡ 'ಕೈ' ಬೆರಳು ಬಿಡಿಸುವವರು ಇದ್ದಾರೆಯೆ ಯಾರಾದರೂ.... ಕಾಂಗ್ರೆಸ್ಸಲ್ಲಿ? ಅಥವಾ ಎಲ್ಲಾರೂ 'ಜೈ' ಅನ್ನುತ್ತಿದ್ದಾರೆಯೇ?

'ಜೈ...... ಸೀತಾ...... ರಾಂಪ!'

(ಕೃಪೆ: ಈ ರಾಂಪ ಜೋಕು ಕಟ್ಟಿದವರು ಅಜ್ಞಾತ ಜಾನಪದ ಅಣಕಕಾರರು)

ಬಿ.ಜೆ.ಪಿ.-ಏಐಏಡಿಎಂಕೆ ಮೈತ್ರಿ ಪತ್ರಿಕೆಗಳು ಕಂಡಂತೆ

'ಒಂದು ಸಾಮೂಹಿಕ ನೀತಿ ಬಾಹಿರ ಮೈತ್ರಿ' ಎಂಬ ಶಿರೋನಾಮೆಯಲ್ಲಿ 'ಹಿಂದೂ' ಪತ್ರಿಕೆಯ ಸಂಪಾದಕೀಯ, ಇದರಿಂದಾಗಿ ಈಗ ಇದುವರೆಗೆ ಕೋಮು ಸೌಹಾರ್ದದ ಒಂದು ಮಾದರಿಯಾಗಿ ರುವ ಈಗ ತಮಿಳುನಾಡಿನ, ಆ ಮೂಲಕ ಇಡೀ ದೇಶದ ತಲೆಯ ಮೇಲೆ ಭಯದ ಕತ್ತಿ ತೂಗಾಡುತ್ತಿದೆ ಎಂದಿದೆ.

''ಸಂಕುಚಿತ ರಾಜಕೀಯ ಲೆಕ್ಕಾಚಾರದಿಂದ ಕೂಡಿದೆಯೆಂಬುದು ಸ್ವಯಂವೇದ್ಯ. ಇದು ಪಕ್ಕಾ ಸಮಯಸಾಧಕತನ. ಏಕೆಂದರೆ, ತಕ್ಷಣದ ಲಾಭಗಳಿಗೆ ಮೂಲಭೂತ ನೀತಿಗಳನ್ನು ತ್ಯಜಿಸುವ ಕ್ರಮ. ಇದು ದ್ರಾವಿಡ ಆಂದೋಲನದ ಪ್ರಧಾನ ನೀತಿಗಳಿಗೆ ಮಾಡಿರುವ ವಿಶ್ವಾಸ ಘಾತ. ದ್ರಾವಿಡ ಆಂದೋಲನ ತಮಿಳುನಾಡಿನ ಮೇಲೆ ಇದುವರೆಗೂ ಪ್ರಭಾವ ಹೊಂದಿದ್ದರೆ ಅದಕ್ಕೆ ಕಾರಣ ಅದರ ಬಲವಾದ ಜಾತ್ಯಾತೀತ ನೆಲೆ........ ಈ ಬೆಳವಣಿಗೆಯ ಕಳವಳಕಾರಿ ಪರಿಣಾಮಗಳು ಜಾತಿವಾದಿ ಹಾಗೂ ಕೋಮುವಾದಿ ಧ್ರುವೀಕರಣದ ಹೆಚ್ಚುತ್ತಿರುವ ಪ್ರವೃತ್ತಿಯ ಹಿನ್ನೆಲೆಯಲ್ಲಿ ನೋಡಿದಾಗ ಸ್ಪಷ್ಟವಾಗುತ್ತದೆ. ಕೊಯಮತ್ತೂರು ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇತ್ತೀಚಿನ ರಕ್ತರಂಜಿತ ಘರ್ಷಣೆಗಳು ಇದರ ಸೂಚನೆ........''.

'' ಶತ್ರುಗಳೊಂದಿಗೆ ಶಯ್ಯೆ'' ಎಂಬರ್ಥದ 'ಟೈಂಸ್ ಆಫ್ ಇಂಡಿಯಾ' ಸಂಪಾದಕೀಯ (೧೮-೧೨-೯೭) ಹೀಗೆಂದಿದೆ-


ಎ.ಐ.ಎ.ಡಿ.ಎಂ.ಕೆ., ಬಿ.ಜೆ.ಪಿ., ಸುಬ್ರಮಣ್ಯ ಸ್ವಾಮಿ ನೇತೃತ್ವದ ಜನತಾ ಪಾರ್ಟಿ ಹಾಗೂ ಗೋಪಾಲಸ್ವಾಮಿ ನೇತೃತ್ವದ ಎಂ.ಡಿ.ಎಂ.ಕೆ.ಯ ...ಜಯಲಲಿತಾ ರಂಗ ವೈರುಧ್ಯಗಳಿಂದ ಸಾಕಷ್ಟು ತುಂಬಿ ತುಳುಕುತ್ತಿದೆ. ಈ ಮಹಾ ಮೈತ್ರಿಯನ್ನು ಪ್ರಕಟಿಸಿದ ದಿನವೇ ಜಯಲಲಿತಾ ಸರಕಾರ ಮದ್ರಾಸ್ ಹೈಕೋರ್ಟ್ ಶೇರುಗಳ ಮಾರಾಟದಲ್ಲಿ ಅಧಿಕಾರದ ದುರುಪಯೋಗ ಮಾಡಿಕೊಂಡ ಅಪರಾಧ ಎಸಗಿದೆ ಎಂದು ಹೇಳಿದೆ. ನ್ಯಾಯಾಲಯ ಆಕೆಯ ವಿರುದ್ಧ ಬಳಸಿದ ಭಾಷೆ- ಆಕೆಯ ವರ್ತನೆ ಪ್ರಜಾಪ್ರಭುತ್ವಕ್ಕೊಂದು ಕಳಂಕ ಎನ್ನುತ್ತಾ ಆಕೆಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಲಯ ಪ್ರತಿಪಾದಿಸಿದೆ- ಹಾಗೂ ಸಿ.ಬಿ.ಐ. ವಿಚಾರಣೆಗೆ ಅದು ಆದೇಶ ನೀಡಿರುವುದು ಇವಿಷ್ಟೆ ಸಾಕು ಅದರೊಡನೆ ಮೈತ್ರಿ ಬಯಸುವ ಯಾರನ್ನಾದರು ದೂರ ಸರಿಯುವಂತೆ ಮಾಡಲು, ವಿಶೇಷವಾಗಿ ಸ್ಥಿರತೆ ಮತ್ತು ಉತ್ತಮ ಆಡಳಿತದ ತನ್ನ ಪ್ರಚಾರ ವಿಷಯಗಳನ್ನುಳ್ಳ ಬಿ.ಜೆ.ಪಿ.ಯಂತಹವನ್ನು. ಆದರೆ ಇಂದು ಹತಾಶ ಬಿ.ಜೆ.ಪಿ.ಗೆ ಹೇಗಾದರೂ ಮಿತ್ರರನ್ನು ಪಡೆಯಬೇಕಾಗಿದೆ ಎಂಬುದು ಸ್ವಯಂ ವೇದ್ಯ.

''ಅವಕಾಶವಾದಿ ಹೊಂದಾಣಿಕೆ'' ಎಂಬ ಸಂಪಾದಕೀಯದಲ್ಲಿ 'ಪ್ರಜಾವಾಣಿ' (೧೯-೧೨-೯೭) ಹೀಗೆ ಟಿಪ್ಪಣಿ ಮಾಡಿದೆ-

''.... ಈ ಬಾರಿ ಬಲಪಂಥೀಯ ಪಕ್ಷವೊಂದರ ಜೊತೆಗೆ ಹೊಂದಾಣಿಕೆಗೆ ಮುಂದಾಗಿದ್ದು ವಿಚಿತ್ರವು ಆಗಿದೆ. .... ಹೇಳಿ ಕೇಳಿ ಬಿ.ಜೆ.ಪಿ. ಹಿಂದೂವಾದ ಪ್ರತಿಪಾದಿಸುವ ಪಕ್ಷ. ಮೊದಲಿಂದಲೂ ಎ.ಐ.ಎ.ಡಿ.ಎಂ.ಕೆ. ಬಿ.ಜೆ.ಪಿ. ಪ್ರತಿಪಾದಿಸುವ ನೀತಿಗಳನ್ನು ವಿರೋಧಿಸುತ್ತಾ ಬಂದಿರುವ ದ್ರಾವಿಡರ ಪಕ್ಷ. ಈ ಎರಡೂ ಪಕ್ಷಗಳ ನೀತಿಗಳು ಪರಸ್ಪರ ವಿರುದ್ಧ ನಿಲುವುಳ್ಳದ್ದು. ಹೀಗಿದ್ದು ಹೊಂದಾಣಿಕೆ ಸಾಧ್ಯವಾಗಿರುವುದು ವಿಪರ್ಯಾಸವೇ ಸರಿ. ಬಿ.ಜೆ.ಪಿ.ಗೆ ತಮಿಳುನಾಡಿನಲ್ಲಿ ದೃಢವಾದ ನೆಲೆಯಿಲ್ಲ. ಎ.ಐ.ಎ.ಡಿ.ಎಂ.ಕೆ. ನೆಲೆ ಕಳೆದುಕೊಂಡಿದೆ. ಬಹುಶಃ ಎರಡೂ ಪಕ್ಷಗಳ ಈ ಸ್ಥಿತಿ ಈ ಮೈತ್ರಿಗೆ ಕಾರಣವಾಗಿರಬಹುದು.

ತಮಿಳುನಾಡಿನ ನಾಲ್ಕು ಪಕ್ಷಗಳ ಮೈತ್ರಿ 'ಎಂತಹ ಕಲಸುಮೇಲೋಗರದ ಮೈತ್ರಿ ಎಂದು ಆಶ್ಚರ್ಯ ವ್ಯಕ್ತಪಡಿಸಿದೆ. ಬಿ.ಜೆ.ಪಿ.ಯ ಬಗ್ಗೆ ವಿರೋಧಭಾವನೆ ಏನೂ ಇಲ್ಲದ 'ಇಂಡಿಯನ್ ಎಕ್ಸ್‌ಪ್ರೆಸ್' ಕೂಡಾ ಬಿ.ಜೆ.ಪಿ. - ಜಯ ಮೈತ್ರಿ ಹಲವು ನಟನೆಗಳನ್ನು ಬಯಲಿಗೆಳೆದಿದೆ ಎನ್ನುವ ಆ ಸಂಪಾದಕೀಯದ ಕೆಲವು ವಾಕ್ಯಗಳು-

''ತನ್ನ ಈ ಚತುರ ಕಾರ್ಯತಂತ್ರದ ಬಗ್ಗೆ ಆತ್ಮ ಪ್ರಶಂಸೆಯ ನಡುವೆ ಬಿ.ಜೆ.ಪಿ.ಗೆ ಯೋಚನೆ ಮಾಡುವ ಪುರುಸೊತ್ತಿರಲಿಕ್ಕಿಲ್ಲ. ಆದರೆ ಇದು ಅದರ ಕಾರ್ಯತಂತ್ರಕ್ಕೊಂದು ಹಿನ್ನಡೆ ಆಗುವ ಸಾಧ್ಯತೆಯಿದೆ. ಜೆ.ಜಯಲಲಿತಾ ರಂಗ ಅಖಿಲ ಭಾರತ ಅಣ್ಣಾ ಡಿ.ಎಂ.ಕೆ. ಯೊಂದಿಗೆ ಅದು ಮಾಡಿಕೊಂಡ ಚುನಾವಣಾ ಮೈತ್ರಿ, ಇತ್ತೀಚೆಗೆ ಉತ್ತರ ಪ್ರದೇಶಗಳಲ್ಲಿನ ರಾಜಕೀಯ ಕಸರತ್ತುಗಳಿಂದ ಅದರ ಪ್ರತಿಷ್ಠೆಗೆ ಆದಂತಹ ಕಳಂಕವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇದು ಅಸ್ಥಿರತೆಯನ್ನು ನಿವಾರಿಸಲು ಅಪೇಕ್ಷಣೀಯವಾದ ಒಂದು ವ್ಯಾಪಕ ಮರು ಸಂಘಟನೆಯ ಭಾಗವೆಂದು ನಂಬಿಸುವ ಅದರ ಪ್ರಯತ್ನ ಇದರ ಹಿಂದಿರುವ ಪಕ್ಕಾ ಸಮಯ ಸಾಧಕತನವನ್ನು ಮರೆಮಾಚಲಾರದು. ಜಯಲಲಿತಾ ಆಳ್ವಿಕೆಯ ಅಭೂತಪೂರ್ವ ಭ್ರಷ್ಟಾಚಾರದ ಬಗ್ಗೆ ತಮಿಳುನಾಡು ಜನತೆಯು ನೀಡಿದ ತೀರ್ಮಾನ ಅತ್ಯಂತ ಸ್ಪಷ್ಟವಾಗಿತ್ತು. ಆದರೆ ಬಿ.ಜೆ.ಪಿ. ಇದನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ''.



ಪುಸ್ತಕ ಪರಿಚಯ

ವಿಮೋಚನಾ ಸಮರಕ್ಕೊಂದು ಕ್ರಾಂತಿಕಾರಿ ಸ್ವರೂಪ
(ಸ್ವಾತಂತ್ರ ಹೋರಾಟದಲ್ಲಿ ಕಮ್ಯುನಿಸ್ಟರು)
ಲೇ: ಬಿ.ಟಿ.ರಣದಿವೆ. ಬೆಲೆ: 5 ರೂ
ಪ್ರ : ಅಧ್ಯಯನ ಪ್ರಕಾಶನ,
ವಿತರಕರು ಕ್ರಿಯಾ ಪ್ರಕಾಶನ

ಸ್ವಾತಂತ್ರ್ಯ ಹೋರಾಟದ ಪ್ರಮುಖ ಪ್ರವಾಹವೊಂದರ ಪರಿಚಯ

ಸ್ವಾತಂತ್ರ್ಯದ ಸುವರ್ಣಮಹೋತ್ಸವದ ಆಚರಣೆ ವಿವಿಧ ರೀತಿಯಿಂದ ನಡೆಯುತ್ತಿದೆ. ತ್ಯಾಗಬಲಿದಾನಗಳ ಮೂಲಕ ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿ ಬೆಳಸಿದ ಕ್ರಾಂತಿಕಾರಿಗಳ ಬಗ್ಗೆ, ಕಮ್ಯುನಿಸ್ಟರ ಬಗ್ಗೆ ಅವಹೇಳನಕಾರಿ ಅಪಪ್ರಚಾರ ಮತ್ತು ಇತರರನ್ನು ಹಾಡಿ ಹೊಗಳುವ ಕೆಲಸವನ್ನು ಬೂರ್ಜ್ವಾ ವರ್ಗ ವ್ಯವಸ್ಥಿತವಾಗಿ ನಡೆಸುತ್ತಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ವಿವಿಧ ಪ್ರವಾಹಗಳು ಪಾಲ್ಗೊಂಡ ಬಗ್ಗೆ, ಅದರ ಸಾಧನೆ, ವಿಫಲತೆಗಳ ಬಗ್ಗೆ ವಸ್ತುನಿಷ್ಟವಾಗಿ ವಿಶ್ಲೇಷಿಸಿ, ರಾಷ್ಟ್ರೀಯ ಆಂದೋಲನದ ತಾಯಿಬೇರಾದ ಧರ್ಮನಿರಪೇಕ್ಷತೆ ಮತ್ತು ದೇಶಪ್ರೇಮದ ಸಂದೇಶವನ್ನು ಜನರ ಬಳಿಗೆ ಒಯ್ಯ ಬೇಕಾಗಿತ್ತು. ಬದಲಾಗಿ ಆಳುವ ವರ್ಗ ಹಸಿ ಹಸಿ ಸುಳ್ಳುಗಳನ್ನೊಳಗೊಂಡ ದೇಶಪ್ರೇಮದ ಮುಖವಾಡವನ್ನು ಜನರೆದುರು ಪ್ರದರ್ಶಿಸು ತ್ತಿದೆ. ಇದೇ ಪರಮಸತ್ಯವೆಂದು ಬಿಂಬಿಸಲು ಪ್ರಯತ್ನಿಸುತ್ತಿದೆ.

ಕೋಮುವಾದಿ ಪಕ್ಷವಾದ ಬಿಜೆಪಿ ಮತ್ತು ಅದರ ನಾಯಕಮಣಿಗಳೆಲ್ಲಾ ಕಮ್ಯುನಿಸ್ಟರನ್ನು ಸ್ವಾತಂತ್ರ್ಯ ಚಳುವಳಿಯ ವಿರೋಧಿಗಳನ್ನಾಗಿ ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇಂದು ಪಾರ್ಲಿಮೆಂಟ್‌ನಲ್ಲಿರುವ ಎಲ್ಲಾ ಆಧುನಿಕ ವಿಚಾರ ವನ್ನು ಹುಟ್ಟು ಹಾಕಿದವರು ಕಮ್ಯುನಿಸ್ಟರು ಮತ್ತು ಅದನ್ನು ಚಳುವಳಿ ಕ್ರಮೇಣ ಒಪ್ಪಿಕೊಂಡಿತು ಎನ್ನುವುದನ್ನು ಮರೆ ಮಾಚು ತ್ತಾರೆ. ವಾಜಪೇಯಿಯಂಥವರು ಇತರ ಹೋರಾಟಗಾರರ ಬಗ್ಗೆ ಅಧಿಕಾರಿಗಳಿಗೆ ಸುಳಿವು ಕೊಟ್ಟು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಭಗತ್‌ಸಿಂಗ್‌ರಂಥವರು ನೇಣಿಗೆ ಕುತ್ತಿಗೆ ಕೊಟ್ಟ ಸತ್ಯವನ್ನು ಹುಗ್ಗಿಸಿಬಿಡುತ್ತಾರೆ.


ಇಂಥಹ ಅನೇಕ ಸುಳ್ಳುಗಳಿಗೆ ಉತ್ತರ ಹಿರಿಯ ನಾಯಕ ಬಿ.ಟಿ.ರಣದಿವೆ ಅವರ ವಿಮೋಚನಾ ಸಮರಕ್ಕೊಂದು ಕ್ರಾಂತಿಕಾರಿ ಸ್ವರೂಪ ಎನ್ನುವ ಕಿರುಪುಸ್ತಕ. ಇಡೀ ಸ್ವಾತಂತ್ರ್ಯ ಚಳುವಳಿಯಲ್ಲಿ ಕಮ್ಯುನಿಸ್ಟರು ಪಾಲ್ಗೊಂಡರು. ಸಾಮ್ರಾಜ್ಯಶಾಹಿ ವಿರೋಧ ವಾಗಿ ಒಂದೆಡೆ ತಮ್ಮ ಪ್ರಾಣವನ್ನು ಬಲಿ ಕೊಡುತ್ತಾ ಇನ್ನೊಂದೆಡೆ ಸಂಪೂರ್ಣ ಸ್ವರಾಜ್ಯ ವನ್ನು ಘೋಷಿಸಿ ಮುನ್ನಡೆಯುತ್ತಿದ್ದ ಹೋರಾಟದ ಸ್ವರೂಪ ಎಂಥದು ಎಂಬುದನ್ನು ದಾಖಲೆಯೊಂದಿಗೆ ವಿವರಿಸುವ ಈ ಪುಸ್ತಕ ವನ್ನು ಅಧ್ಯಯನ ಪ್ರಕಾಶನ ಹೊರತಂದಿದೆ. ಸ್ವರ್ಣ ಮಹೋತ್ಸವ ಮಾಲಿಕೆಯಲ್ಲಿ ಹೊರಬಂದ ಮೊದಲ ಪುಸ್ತಕವೇ ಎಷ್ಟೊಂದು ಅರ್ಥಪೂರ್ಣವಾಗಿದೆ.

ವಿರೋಧಿಗಳು ಎತ್ತುವ ಎಲ್ಲಾ ಸಂಶಯಗಳನ್ನು ವಸ್ತುನಿಷ್ಟವಾಗಿ ಇಲ್ಲಿ ವಿವರಿಸಲಾಗಿದೆ. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಮೊದಲು ಮತ್ತು ನಂತರದ ಬೆಳವಣಿಗೆಯನ್ನು ಲೇಖಕರು ಇಲ್ಲಿ ವಿವರಿಸಿದ್ದಾರೆ. ಕಾಂಗ್ರೆಸ್ ಸಭೆಯಲ್ಲಿ ಸಂಪೂರ್ಣ ಸ್ವರಾಜ್ಯದ ಬೇಡಿಕೆ ಇಡಲು ಒತ್ತಾಯಿಸಿತ್ತು. ಅದಕ್ಕೆ ಗಾಂಧೀಜಿಯವರ ವಿರೋಧ, ಇತರ ಸಮಾಜವಾದಿ ದೇಶಗಳ (ಸೋವಿಯತ್) ಸಂಪರ್ಕ, ಕಮ್ಯುನಿಸ್ಟ್ ಕ್ರಿಯಾ ವೇದಿಕೆ , ಜಾತಿಪದ್ಧತಿ, ಗುಲಾಮಿ ಪದ್ಧತಿ, ಜೀತ ಪದ್ಧತಿಯ ವಿರೋಧಿ ಹೋರಾಟ, ರಿನ್ ಬಂಡಾಯ, ಎಐಟಿಯುಸಿ ಸ್ಥಾಪನೆ, ವಿದ್ಯಾರ್ಥಿ ಸಂಘಟನೆಯ ಸ್ಥಾಪನೆ, ಮೀರತ್ ಪಿತೂರಿ, ಕಿಸಾನ ಸಭಾ ಹೋರಾಟ, ತೆಲಂಗಾಣ ಹೋರಾಟ ಇತರ ಅನೇಕ ಪಿತೂರಿ, ಬಂಧನ, ಭೂಗತ ಹೋರಾಟಗಳು...... ಹೀಗೆ ಕಮ್ಯುನಿಸ್ಟರು ಬಹುಮುಖ್ಯ ಪಾತ್ರ ವಹಿಸಿದ ಎಲ್ಲಾ ಹೋರಾಟಗಳ ಧನಾತ್ಮಕ ಮತ್ತು ಋಣಾತ್ಮಕ ವಿಶ್ಲೇಷಣೆಯನ್ನು ಲೇಖಕರು ಇಲ್ಲಿ ನಡೆಸಿದ್ದಾರೆ. ಸ್ವತಃ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಇಂಗ್ಲೀಷರ ಕೆಂಗಣ್ಣಿಗೆ ಗುರಿ ಆದ ಬಿ.ಟಿ.ಆರ್. ಅವರು ಇದರೊಂದಿಗೆ ಭಗತ್‌ಸಿಂಗ್ ಸಂಗಾತಿಗಳು, ಶಿವವರ್ಮ, ಅಜಾದ್ .... ಹೀಗೆ ಹತ್ತಾರು ಜನ ಕ್ರಾಂತಿಕಾರಿಗಳ ಹೋರಾಟದ ಚಿತ್ರವನ್ನು ಕೊಡುತ್ತಾರೆ. ನೇಣಿಗೆ ಕೊರಳು ಕೊಟ್ಟವರ ವೀರಗಾಥೆಯನ್ನು ವಿವರಿಸುತ್ತಾರೆ.

ಇಲ್ಲಿ ಮಂದಿಮಾಗದರಂತೆ ಕಮ್ಯುನಿಸ್ಟರನ್ನು ಹಾಡಿಹೊಗಳುವ ಕ್ರಿಯೆ ನಡೆದಿಲ್ಲ. ಅಂತರ್ರಾಷ್ಟ್ರೀಯ ಸಂದರ್ಭದಲ್ಲಿಟ್ಟು ಲೇಖಕರು ಚರ್ಚಿಸಿದ್ದಾರೆ. ಇದನ್ನೆಲ್ಲ ವಿವರಿಸುತ್ತಾ 'ಕಮ್ಯುನಿಸ್ಟ್ ಪಕ್ಷ ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಣಾಯಕ ಪಾತ್ರವಹಿಸಿಲ್ಲ ಎಂಬುದು ದಿಟ. ಒಂದು ವೇಳೆ ಆ ಪಕ್ಷ ನಿರ್ಣಾಯಕ ಪಾತ್ರ ವಹಿಸಿದ್ದರೆ (ಇಡೀ ಚಳುವಳಿಯ ನಾಯಕತ್ವ) ಭಾರತದ ಜನತೆ ಇಂದು ದಾರಿದ್ರ್ಯ, ನಿರುದ್ಯೋಗ, ವಿಚ್ಛಿದ್ರಕಾರಿ ಮನಸ್ಥಿತಿಯನ್ನು ತಲುಪುತ್ತಿರಲಿಲ್ಲ' ಎಂದು ಖಚಿತವಾಗಿ ಹೇಳುತ್ತಾರೆ.


ಪಕ್ಷ ಬೆಳೆಯುತ್ತಿರುವ ಸಂದರ್ಭದಲ್ಲಿ ಎದುರಾಗುವ ನೂರಾರು ಪ್ರಶ್ನೆಗಳಿಗೆ ಈ ಪುಸ್ತಕ ಓದಲೇಬೇಕಾದ ಮತ್ತು ಇತರರಿಗೆ ಓದಿಸಲೇ ಬೇಕಾದ ಪುಸ್ತಕಗಳಲ್ಲಿ ಒಂದು. ಓದಿ ಮುಗಿಸುವುದರೊಳಗೆ ಒಂದು ಪ್ರಮುಖ ಕ್ರಾಂತಿಕಾರಿ ಪ್ರವಾಹದ ಪರಿಚಯ ಆಗುವುದಷ್ಟೇ ಅಲ್ಲ ಒಂದು ಹೆಮ್ಮೆಯ ಭಾವನೆ ಮೂಡುತ್ತದೆ.

- ವಿಠ್ಠಲ ಭಂಡಾರಿ



'ದಿ ಹಿಂದು' ನಲ್ಲಿ ಕೇಶವ್

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ಜಿಲ್ಲಾದ್ಯಂತ ರಾಜಕೀಯ ಚೈತನ್ಯ ಸಾಂಸ್ಕೃತಿಕ ಜಾಥಾಗಳು

"ಜನರ ಹೃದಯದೊಂದಿಗೆ ಬೇರೂರಿರುವ ಸಂಸ್ಕೃತಿ ಮೂಲಕ ಅವರೊಂದಿಗೆ ಸಂವಾದಿ ಸಬೇಕು. ಆದರೆ ಬಹುತೇಕ ರಾಜಕೀಯ ಪಕ್ಷಗಳಿಗೆ ಇದು ಬೇಕಾಗಿಯೇ ಇಲ್ಲ. ಜನಪರ ಸಂಸ್ಕೃತಿಯೇ ಭವಿಷ್ಯದಲ್ಲಿ ಫಲ ನೀಡೀತು ಎಂದು ಖ್ಯಾತ ಲೇಖಕಿ, ಪತ್ರ ಕರ್ತೆ ಡಾ|| ವಿಜಯಾರವರು ನುಡಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಕೋಲಾರ ಜಿಲ್ಲೆಯಾದ್ಯಂತ ನಡೆದ ನಾಲ್ಕು ಕಲಾ ತಂಡಗಳ ರಾಜಕೀಯ ಚೈತನ್ಯ ಸಾಂಸ್ಕೃತಿಕ ಜಾಥದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಕೋಲಾರದ ಮಹಾತ್ಮ ಗಾಂಧಿ ವೃತ್ತದ ಬಳಿ ಡಿಸೆಂಬರ್ 15ರಂದು ಸಂಜೆ ಕಾರ್ಯಕ್ರಮವನ್ನು ನಿಯೋಜಿಸಲಾಗಿತ್ತು. ಬೀದಿಯೇ ರಂಗಸ್ಥಳವಾಗಿ ಪ್ರೇಕ್ಷಕ ಜನ ಸಮೂಹ ಕಿಕ್ಕಿರಿದು ಸೇರಿತ್ತು.

ತುರ್ತು ಸ್ಥಿತಿ ಪರಿಸ್ಥಿತಿಯ ಅತಿರೇಕ, ಸರ್ವಾಧಿಕಾರದ ವಿರುದ್ಧ ಜನ ಜಾಗೃತಿ ಗೊಳಿಸಲು ಚಿಕ್ಕಮಗಳೂರಿನಲ್ಲಿ ಬೀದಿ ನಾಟಕಗಳ ಮೂಲಕ ಜನರ ನಡುವೆ ಓಡಾಡಿದ್ದನ್ನು ನೆನಪಿಸಿಕೊಂಡ ವಿಜಯಮ್ಮ ಪಕ್ಷದ ಮುಖವಾಣಿಯಾಗಿ ಜನರ ನಡುವೆ ಹೋಗಿರುವ ಕಲಾವಿದರ ಅನುಭವಗಳನ್ನು ತಿಳಿಯ ಬಯಸಿದರು. ಒಂದು ಕಾರ್ಯಕ್ರಮದ ಬಳಿಕ ಮುದುಕನೊಬ್ಬ ನೀಡಿದ ಕಳ್ಳೇಕಾಯಿ ಬೀಜ ಮಹತ್ವದ್ದು. ಜನರಲ್ಲೇ ಬೆರೆತು, ಕಲಿತು ಕಲಿಸುವ ಕ್ರಿಯೆ ಶ್ಲಾಘನೀಯ ಎಂದರು. ಸಿ.ಪಿ.ಐ.(ಎಂ) ಪಕ್ಷ ಇಂತಹದ್ದು. ಜನ ಸಂವಾದದ ಮೂಲಕ ಬೆಳೆಯ ಬಯ ಸಿದೆ ಎಂದರು. ನಾವು ಜನ ಪರ ಆದಾಗ ನಮ್ಮನ್ನು ಹತ್ತಿಕ್ಕುವ ವ್ಯವಸ್ಥೆ ಇದೆ. ದೊಡ್ಡವರ ಪ್ರಶಂಸೆಗಿಂತ ಜನರ ಹೃದಯದ ಕ್ರಿಯೆಗೆ ಇಂಬು ಕೊಡಿ ಎಂದು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು. ಇಂತಹುಗಳ ಬಗ್ಗೆ ಪ್ರಸಾರ ಮಾಧ್ಯಮಗಳು ನಾಲ್ಕು ಒಳ್ಳೆ ಮಾತು ಆಡುವುದಿಲ್ಲ. ಪುಟ ಗಟ್ಟಲೇ ವರದಿ ಕಳಿಸಿದರೂ ಕತ್ತರಿಸುವ ಕೈಗಳಿ ರುತ್ತವೆ. ಇಂತಹ ತೊಡಕುಗಳ ನಡುವೆ ಅರಳುತ್ತಿರುವ ಮನಸ್ಸುಗಳೂ ಈ ಕ್ರೂರ ವಾಸ್ತವವನ್ನು ಜೀರ್ಣಿಸಿಕೊಳ್ಳುತ್ತಿರಬೇಕು ಎಂಬ ಸಲಹೆಯುವ ಕಲಾವಿದರಿಗೆ ನೈತಿಕ ಬದ್ಧತೆಯನ್ನು ಇನ್ನೂ ದೃಢಗೊಳಿಸುವ ಮಾತು.

ರಾಜಕೀಯ ಮತ್ತು ಬದುಕಿಗೆ ನಿಕಟ ಸಂಬಂಧ ಇದೆ. ನಾವು ದೂರವಾದರೆ ಕೆಟ್ಟ ಶಕ್ತಿಗಳು ತಮ್ಮ ಬಲ ಹೆಚ್ಚಿಸಿಕೊಳ್ಳುತ್ತವೆ ಎಂದು ವಿಶ್ಲೇಷಿಸಿದರು. ಲೋಕಸಭಾ ಚುನಾವಣೆಗಳು ಘೋಷಿತವಾದ ಹಿನ್ನೆಲೆ ವಿವರಿಸಿ ಬಂಡವಾಳಗಾರ ಪಕ್ಷಗಳು ದುಡ್ಡು ಕೊಡಬಹುದು, ಆದರೆ ಸಾಮಾನ್ಯರಿಗೆ ಇದರ ಭೀತಿ ಇದ್ದೇ ಇರುತ್ತದೆ. ಇತ್ತ ಬವಣೆಗಳು ಹೆಚ್ಚುತ್ತವೆ. ಆದ್ದರಿಂದ ಆಳವವರು ಎಂತಹವರಿರಬೇಕೆಂದು ಯೋಚಿಸಬೇಕು.

ರಾಜಕೀಯದಲ್ಲಿನ ದರೋಡೆ ಗಮನಿಸಿದರೆ ಚಂಬಲ್ ಕಣಿವೆ ದರೋಡೆಕಾರರನ್ನು ಮೀರಿಸುವವರು ಎನ್ನಿಸುತ್ತದೆ. ಇತ್ತೀಚೆಗೆ ಸಿನಿಮಾ ತಾರೆಯರ ಗ್ಲಾಮರ್ ರಾಜಕೀಯ ಬೆಳೆಯುತ್ತಿದೆ. ಅಂತಹವರು ಜನರಿಗೆ ಸ್ಪಂದಿಸುತ್ತಾರೆಯೇ ಎಂದು ಪ್ರಶ್ನಿಸಿದರು.

ಜಾತಿವಾದದ ಒಡಕು ತರುವ ರಾಜಕೀಯ ತಿರಸ್ಕರಿಸಿ ಕೋಮುವಾದದ ಫ್ಯಾಸಿಸ್ಟ್ ಸಂಚುಗಳನ್ನು ಸೋಲಿಸಿ. ಅಂತಹವರು ನಿಮ್ಮ ಬಳಿಗೆ ಬಂದಾಗ ಅವರು ದೇವಸ್ಥಾನದ ಬಗ್ಗೆ ಮಾತನಾಡ ಬಹುದು, ಆದರೆ ಶಾಂತಿ ಬೇಕು ಎಂಬುದು ನಿಮ್ಮ ಮಾತಾಗಿರಲಿ ಎಂದರು. ಉತ್ತರ ಪ್ರದೇಶದಲ್ಲಿ ಈ ಮೂಲಭೂತವಾದಿಗಳು ಮಾಡಿದ್ದಾದರೂ ಏನು? ಮುಂದೆ ಮಾಡುವುದಾದರು ಏನು? ಮಸೀದಿ ಕೆಡವಿದವರೇ ಮಹಿಳೆಯರನ್ನು ಸೀತೆ ಸಾವಿತ್ರಿಗಳನ್ನಾಗಿ, ಅವರು ಜನ ಸಮೂಹದ ಜೊತೆಗೆ ಬೆರೆಯದಂತೆ ತಡೆಯುವ ಹುನ್ನಾರವಿದೆ. ಈ ಹಿಂಸೆ, ದೌರ್ಜನ್ಯ, ಭ್ರಷ್ಟತೆ ದ್ವೇಷ ಸಹಿಸಲಾರೆವು ಎಂದು ಹೇಳಬೇಕು ಎಂದು ಕರೆ ನೀಡಿದರು.

'ಎಡ ಪಂಥೀಯರಿಗೆ ನಾನು ಮನಸ್ಸು ನೀಡಿದ್ದೇನೆ' ಎಂದು ವೈಚಾರಿಕ ಸಾಮ್ಯತೆ ಗುರುತಿಸಿಕೊಂಡ ವಿಜಯಮ್ಮ ಅವರು ಬೇರೆ ಪಕ್ಷದ ನಾಯಕರುಗಳಂತೆ ನಗೆಪಾಟಲಿಗೆ ಈಡಾಗಿಲ್ಲ. ಸದಾ ಜನಪರವಾದ ಕೆಲಸಗಳಲ್ಲಿ ತೊಡಗಿದ್ದಾರೆ. ಕೆಲವು ಸಂದರ್ಭಗಳಲ್ಲಿ ಮೌನ ವಹಿಸಿರಬಹುದು. ಆದರೆ ತಪ್ಪು ಮಾರ್ಗಕ್ಕೆ ಇಳಿದಿಲ್ಲ' ಎಂದರು. ಬೀದಿ ನಾಟಕ ಹಾಗೂ ಸಾಂಸ್ಕೃತಿಕ ಲೋಕಕ್ಕೆ ಸಮುದಾಯದ ಕೊಡುಗೆಗಳನ್ನು ಸ್ಮರಿಸಿದರು.

ಪರ್ಯಾಯ
ಸಾಂಸ್ಕೃತಿಕ ಚಳುವಳಿ ಅಗತ್ಯ :

ಮುಖ್ಯ ಅತಿಥಿಯಾಗಿ ಮಾತನಾಡಿದ ಶಾಸಕರು ಪಕ್ಷದ ಮುಖಂಡರೂ ಆಗಿರುವ ಕಾಂ|| ಜಿ.ವಿ. ಶ್ರೀರಾಮರೆಡ್ಡಿಯವರು 'ದೂರದರ್ಶನದ ಚಾನಲ್‌ಗಳು ಎಳೆಯರನ್ನು ಒಳಗೊಂಡಂತೆ ಎಲ್ಲರ ಮೇಲೆ ಉಂಟು ಮಾಡುತ್ತಿರುವ ಸಾಂಸ್ಕೃತಿಕ ಪರಿವರ್ತನೆಯನ್ನು ಬಿಡಿಸಿಟ್ಟರು. ಕೆಟ್ಟ ಸಾಂಸ್ಕೃತಿಕ ಪರಿಸರ ನಿರ್ಮಾಣ ಆಗುತ್ತಿರು ವಾಗ ಜನರ ನೋವು ನಲಿವುಗಳನ್ನು ಯಥಾವತ್ತಾಗಿ ಚಿತ್ರಿಸುವ ಸಾಂಸ್ಕೃತಿಕ ಪರಿಸರ ನಿರ್ಮಾಣವಾಗಬೇಕು. ಇದು ಪರ್ಯಾಯ ಸಾಂಸ್ಕೃತಿಕ ಚಳುವಳಿ ಯಿಂದಲೇ ಸಾಧ್ಯ ಎಂದರು.

ದೇಶದ ಸಮಗ್ರತೆಯನ್ನು ಪ್ರಾಮಾಣಿಕತೆಯಿಂದ ರಕ್ಷಿಸುವ ಪಕ್ಷ ಸಿ.ಪಿ.ಐ.(ಎಂ). ದೇಶಪ್ರೇಮಿಗಳ ಕಣ್ಮಣಿ ಸಿ.ಪಿ.ಐ.(ಎಂ). ದುಡಿಯುವ ಜನರ, ದುರ್ಬಲರ ಆಶಾಕಿರಣ ಸಿ.ಪಿ.ಐ.(ಎಂ). ಹುಲ್ಲು, ಗೊಬ್ಬರ, ಸಕ್ಕರೆ, ಸಗಣಿ ಏನೆಲ್ಲ ತಿಂದು ಜೈಲು ಸೇರಿದರು. ಭ್ರಷ್ಟತೆಯಿಂದ ಸದಸ್ಯರನ್ನು ಖರೀದಿಸಿ ಸರ್ಕಾರ ಮಾಡಿದರು. ಆದರೆ ಯಾವುದೇ ರಾಜಕೀಯ ಭ್ರಷ್ಟಾಚಾರ ಇಲ್ಲದ ಪಕ್ಷ ಸಿ.ಪಿ.ಐ.(ಎಂ). ತ್ಯಾಗ ಬಲಿದಾನ ಮಾಡಿದವರು ಸಿ.ಪಿ.ಐ.(ಎಂ). ಸಿ.ಪಿ.ಐ.(ಎಂ)ನದು ಕೇವಲ ಚುನಾವಣಾ ರಾಜಕೀಯ ಅಲ್ಲ, ದೇಶ ಆಮೂಲಾಗ್ರವಾಗಿ ಬದಲಾಗ ಬೇಕೆಂದು, ಜನಪರ ಪರ್ಯಾಯದೊಂದಿಗೆ ಶ್ರಮಿಸುತ್ತಿದೆ ಎಂದು ಪಕ್ಷದ ಕೆಲಸಗಳನ್ನು ಜನಸ್ತೋಮದ ಎದುರು ಬಿಡಿಸಿಟ್ಟರು. ಸಾಮ್ರಾಜ್ಯಶಾಹಿಗಳನ್ನು ಎದುರಿಸುವ ಆಂತರಿಕ ಶಕ್ತಿ ಜನತೆಗೆ ಇದೆ. ದೇಶದ ಸ್ವಾತಂತ್ರ್ಯ, ಈ ಸ್ವಾವಲಂಬನೆ, ಸಾರ್ವ ಭೌಮತೆ ರಕ್ಷಣೆಗೆ, 'ಜನತೆಗೆ ಮನವಿ ಮಾಡಿದರು.ಕಲಾ ತಂಡದಲ್ಲಿರುವವರು ಜನಸಾಮಾನ್ಯರ ಮಕ್ಕಳು. ನಿಮ್ಮ ಕಷ್ಟ ತಿಳಿಸಲು ನಿಮ್ಮ ಬಳಿ ಬಂದಿದ್ದಾರೆ. ಬೆಂಬಲಿಸಿ, ಹಾರೈಸಿ' ಎಂದರು.

ಪಕ್ಷದ ಜಿಲ್ಲಾ ಸೆಕ್ರಟಾರಿಯೇಟ್ ಸದಸ್ಯರಾದ ಕಾಂ|| ಜಿ.ಸಿ. ಬಯ್ಯಾರೆಡ್ಡಿಯವರು ಡಿಸೆಂಬರ್ ೩೦ರ ರ‍್ಯಾಲಿ ಐತಿಹಾಸಿಕವಾದುದು, ಜನತೆ ಸಾವಿರ ಸಾವಿರ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿಮಾಡಿ ಸಮ್ಮೇಳನದ ಸಿದ್ಧತೆ, ಉದ್ದೇಶಗಳನ್ನು ವಿವರಿಸಿದರು.

ಸಭೆಯಲ್ಲಿ ಪಕ್ಷದ ನಾಯಕರಾದ ಕಾಂ|| ಟಿ.ಎಸ್. ಮಣಿ, ಪ್ರಚಾರ ಸಮಿತಿಯ ಸಂಚಾಲಕ ಪಿ. ಶ್ರೀನಿವಾಸ್, ಸ್ವಾಗತ ಸಮಿತಿಯ ಸಂಚಾಲಕರಾದ ಗಾಂಧಿನಗರ ನಾರಾಯಣಸ್ವಾಮಿ, ಯುವಮುಖಂಡ ಕಾಂ|| ಎಂ.ವಿ. ನಾರಾಯಣಸ್ವಾಮಿ, ಸಮುದಾಯದ ಗುಂಡಣ್ಣ, ಸುರೇಂದ್ರರಾವ್, ಅಚ್ಚುತನ್, ಬೊಕ್ಕಲಿಂಗಂ, ಹಾಗೂ ರಾಜ್ಯ ಸಮಿತಿ ಸದಸ್ಯ ಎಸ್.ವೈ. ಗುರುಶಾಂತ್ ಮುಂತಾದವರು ಉಪಸ್ಥಿತರಿದ್ದರು. ನಂತರ ಹಾಡು ಹಾಗೂ ನಾಟಕಗಳ ಪ್ರದರ್ಶನವಾಯಿತು. ಇದರ ಮೊದಲು ಕಲಾ ತಂಡಗಳ ನಾಯಕರು ತಮ್ಮ ಅನುಭವಗಳನ್ನು ಎಲ್ಲರೊಂದಿಗೆ ಹಂಚಿಕೊಂಡರು.

16ನೇ ರಾಜ್ಯ ಸಮ್ಮೇಳನ
ಕೋಲಾರ
ಸಿ.ಪಿ.ಐ.(ಎಂ)

ನಮ್ಮೂರಿಗೆ ಬನ್ನಿ ನಮ್ಮ ಬೀದಿಗೆ ಬನ್ನಿ !

ಇಡೀ ಕೋಲಾರ ಜಿಲ್ಲೆ ನಗರ ಹಳ್ಳಿಗಳೆನ್ನದೆ ಜಿಲ್ಲೆಯಾದ್ಯಂತ ಸಿ.ಪಿ.ಐ.(ಎಂ)ನ 16ನೇ ರಾಜ್ಯ ಸಮ್ಮೇಳನಕ್ಕೆ ಭರದಿಂದ ಶೃಂಗಾರಗೊಳ್ಳುತ್ತಿದೆ. ಅಂತೆಯೇ ಸಮ್ಮೇಳನದ ಪ್ರಚಾರ ಹಾಗೂ ಮಹತ್ವವನ್ನು ಜಿಲ್ಲೆಯಾದ್ಯಂತ ಸಾರಲು ಗೆಜ್ಜೆನಾದದೊಂದಿಗೆ 'ಸಪ್ದರ್ ಹಷ್ಮಿ', 'ಮಳ್ಳೂರು ಪಾಪಣ್ಣ', 'ನವೆಂಬರ್ ಹುತಾತ್ಮ ಸಂಗಾತಿಗಳು', 'ಭಗತ್ ಸಿಂಗ್' ಕಲಾ ತಂಡಗಳಾಗಿ ಜಿಲ್ಲೆಯ ಸುಮಾರು ಒಂದು ಸಾವಿರ ಹಳ್ಳಿಗಳಲ್ಲಿ ಸಿ.ಪಿ.ಐ.(ಎಂ)ನ ಕೆಂಪು ಧ್ವಜ ಹೊತ್ತ ಕಲಾ ತಂಡಗಳು ಸಂಚರಿಸಿ ಜನಮನ ತಲುಪಿ ಯಶಸ್ವಿಯತ್ತ ನಡೆಯುತ್ತಿವೆ. ಇದರಲ್ಲಿ ಒಂದಾದ, ಕೋಲಾರದ ಆನೇ ತರಗತಿ ವಿದ್ಯಾರ್ಥಿನಿ ಎಂ.ಗೀತಾ ಸೇರಿದಂತೆ ೮ ಜನರು ಕಲಾವಿದರಿದ್ದ ಕಾಂ.ಮಳ್ಳೂರು ಪಾಪಣ್ಣ ಕಲಾ ತಂಡದ ಸಂಚಾಲಕರಾದ ಕೆ.ಎಸ್. ನಾರಾಯಣ ಸ್ವಾಮಿಯವರ ಅನುಭವ ಈ ರೀತಿ ಇದೆ.

ಡಿಸೆಂಬರ್ ಒಂದರಂದು ಕೈವಾರದಲ್ಲಿ ಉದ್ಘಾಟನೆಗೊಂಡ ಕಾಂ|| ಮಳ್ಳೂರು ಪಾಪಣ್ಣ ಕಲಾ ತಂಡ ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು ಮತ್ತು ಕೋಲಾರ ತಾಲೂಕುಗಳಲ್ಲಿ ಇಲ್ಲಿಯವರೆಗೆ 1162 ಕಿ.ಮೀ ಪ್ರಯಾಣಿಸಿ 104 ಹಳ್ಳಿಗಳಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ಹಾಡಿ, ನಾಟಕಗಳ ಮೂಲಕ ಸುಮಾರು 30 ಸಾವಿರ ಜನಕ್ಕೆ ಸಮ್ಮೇಳನದ ಮಹತ್ವ ಮತ್ತು ಕಲಾ ಜಾಥಾದ ಧ್ಯೇಯೋದ್ದೇಶವನ್ನು ಸಾರಿದೆ.

ಪ್ರಸ್ತುತ ರಾಜಕೀಯ ವಿಷಯವನ್ನೊಳ [illegible] ಆಟವಾ" 24 ಪ್ರದರ್ಶನಗಳನ್ನು ಕಂಡಿದೆ. ಬೆಲೆಯೇರಿಕೆಯ ವಿಷಯವನ್ನೊಳಗೊಂಡ ತೆಲುಗು ನಾಟಕ "ಗೊಲ್ಲಲು ತಿರುಗ ಬಡ್ಡಾಯಿ" 58 ಯಶಸ್ವಿ ಪ್ರದರ್ಶನಗಳನ್ನು ನೀಡಿ, ಹಾಡುಗಳನ್ನು ಹಾಡಿ, ಜನತೆ ಮನರಂಜನೆಯ ಜೊತೆ ವಿಚಾರ ಮಂಥನಕ್ಕೆ ಒಳಗಾಗುವಂತೆ ಮಾಡುವಲ್ಲಿ ಕಲಾ ತಂಡ ಯಶಸ್ವಿಯಾಗಿದೆ.

"ಬಹುತೇಕ ಹಳ್ಳಿಗಳಲ್ಲಿ ನಮ್ಮ ಹಾಡುಗಳ ಕೇಳಿ, ನಮ್ಮ ಕೊರಳುಗಳಿಗೆ, ಶರ್ಟ್‌ಗಳಿಗೆ ಜನ ಹಣ ಹಾಕಿದ್ದಾರೆ. ನಮ್ಮ ನಾಟಕದ ದೃಶ್ಯಗಳನ್ನು ಕೆಲವರು ಕ್ಯಾಮರಾಗಳಲ್ಲಿ ಸೆರೆ ಹಿಡಿದರೆ, ಕೆಲವು ಹಳ್ಳಿಗಳಲ್ಲಿ ಕಾರ್ಯಕ್ರಮ ಮುಗಿಸಿ ತಂಡ ಹೊರಡುವವರೆಗೂ ಜನರು ಹಾಗೆಯೇ ನಿಲ್ಲುತ್ತಿದ್ದರು. ಮತ್ತೆ ಕೆಲವೆಡೆ 'ಇನ್ನೂ ಕೆಲವು ನಾಟಕ ಮಾಡಿ, ನಮ್ಮೂರಿಗೆ ಬನ್ನಿ, ನಮ್ಮ ಬೀದಿಗೆ ಬನ್ನಿ' ಎಂಬಿತ್ಯಾದಿಯಾಗಿ ಜನ ಕರೆಯುತ್ತಿದ್ದರು."

ತೆಲುಗು ನಾಟಕ "ಗೊಲ್ಲಲು ತಿರುಗ ಬಡ್ಡಾಯಿ" ಪ್ರದರ್ಶನ ಮಾಡುವಾಗಂತೂ ಕೆಲವು ಹಳ್ಳಿಗಳಲ್ಲಿನ ಕೂಲಿಕಾರ ಮಹಿಳೆಯರು ತಮ್ಮ ಸ್ವಂತ ಬದುಕು ತಮ್ಮ ಕಣ್ಣೆದುರು ಬಂದಂತೆ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತಿದ್ದರು. ನಾಟಕ ಮುಗಿದ ಮೇಲೆ ತಮ್ಮ ಕೈಲಾದಷ್ಟು ಸಹಾಯವನ್ನು ನೀಡುತ್ತಿದ್ದರು. ಇದು ಕಲಾ ತಂಡದ ಸದಸ್ಯರಿಗೆ ಸಾರ್ಥಕತೆಯ ಭಾವನೆ ನೀಡುತ್ತಿತ್ತು. ಕೆಲವರಂತೂ ನಮ್ಮ ಮನೆಗೆ ಊಟಕ್ಕೆ ಬನ್ನಿ, ಕಾಫಿ ಕುಡಿಯ ಬನ್ನಿ ಎಂದು ಹಠ ಹಿಡಿಯುತ್ತಿದ್ದರೆ, ಮುಳಬಾಗಿಲು ಮತ್ತು ವಿಜಯಪುರಗಳಲ್ಲಿ ಬಿ.ಜೆ.ಪಿ.ಯ ಬೆಂಬಲಿಗರು ಗಲಾಟೆ ನಡೆಸಿದರೂ ನಮ್ಮ ಸ್ಫೂರ್ತಿಗೆ ಯಾವುದೇ ಧಕ್ಕೆಯುಂಟಾಗಲಿಲ್ಲ. ಕಾರ್ಯಕ್ರಮ ನೀಡಿದಲ್ಲೆಡೆ ಸಮ್ಮೇಳನಕ್ಕೆ ನಿಧಿ ಸಂಗ್ರಹಿಸುವ ಉದ್ದೇಶದಂತೆ ಒಟ್ಟು 7885 ರೂಗಳು ಸಂಗ್ರಹವಾಗಿದೆ. ತಂಡದಲ್ಲಿದ್ದ ಎಲ್ಲಾ ಸದಸ್ಯರು ಜನ ಸಾಮಾನ್ಯರ [illegible] ಅರಿತೆವು. ಇಂತಹ ಸಮಸ್ಯೆಗಳ ಪರಿಹಾರ ಕೈಗೊಳ್ಳುವ ಮಾರ್ಗ ಹಾಗೂ ಸಮ್ಮೇಳನದ ಘೋಷಣೆಯನ್ನು ಜನರ ಬಳಿಗೆ ತಲುಪಿಸುವಲ್ಲಿ ಜಾಥಾ ಯಶಸ್ವಿಯಾಗಿದೆ ಎಂದು ನಾರಾಯಣ ಸ್ವಾಮಿ ಹೇಳುತ್ತಾರೆ.

'ನೀವು ಬಂದಿರಿ-ನಮ್ಮೊಡನೆ ಒಂದಾದಿರಿ ಆಡಿದ್ದು ನಾಟಕವಲ್ಲ ಹಾಡಿದ್ದು ಕರುಳು ಹಿಂಡಿದ ಕಥೆ'

4 ತಂಡಗಳು ಸುಮಾರು 1000 ಹಳ್ಳಿಗಳನ್ನು 1 ಲಕ್ಷದಷ್ಟು ಜನರನ್ನು ತಲುಪಿವೆ. ಆ ಸಂಗಾತಿಗಳು ತಮ್ಮ ಅನುಭವಗಳನ್ನು ಸಂಕ್ಷಿಪ್ತವಾಗಿ ಹೇಳಿದರು.

ಕಾಂ|| ಸಪ್ದರ್ ಹಷ್ಮಿ ತಂಡ 120 ಮುಖ್ಯ ಕಾರ್ಯಕ್ರಮಗಳಿಂದ ಸುಮಾರು 30 ಸಾವಿರ ಜನರನ್ನು ತಲುಪಿದೆ. ಜನಮನ ತಟ್ಟಿದ್ದೇವೆ. ಬೇರೆ ಪಕ್ಷಗಳ ಬಗ್ಗೆ ಆಕ್ರೋಶ ಇದೆ. ಹಣ, ಊಟ ನೀಡಿ ಸಹಕರಿಸಿದ್ದಾರೆ. ನಮ್ಮ ನಡುವೆ ಒಂದಾದವರು ನೀವು ಎಂದು ಮನತುಂಬಿ ಹರಸಿದ್ದಾರೆ ಎನ್ನುತ್ತಾರೆ ತಂಡದ ನಾಯಕ ವೆಂಕಟರಾಂ.

ಕಾಂ|| ಭಗತ್ ಸಿಂಗ್ ಕಲಾ ತಂಡದ ನಾಯಕ ಓಬಳರಾಜು(ವಿಧುರಾಶ್ವತ್ಥದಿಂದ ಆರಂಭ) ಚುನಾವಣೆ ಅಂತಾ ಬಂದಿದ್ದೀವಿ ಎಂದೇ ಸ್ವಾಗತಿಸಿದರು. ಆದರೆ ನಾಟಕ ಹಾಡು ಕೇಳಿದ ಬಳಿಕ ಜನರ ಅಭಿಪ್ರಾಯ ಬದಲಾಯಿತು. ನಾಟಕ ನಡೆಯುವಾಗ ಭ್ರಷ್ಟ ನಾಯಕರ ಬಗ್ಗೆ ಜನ ಮಾತನಾಡಿದರು. ನಾಟಕದ ಬಳಿಕ ನಮ್ಮ ಮನೆಗೆ ಬನ್ನಿ ನಮ್ಮ ಮನೆಗೆ ಬನ್ನಿ ಎಂದು ಊಟಕ್ಕೆ ಆಹ್ವಾನಿಸಿದರು. ಹಣ ನೀಡಿ ಆದರದ ಅಭಿಮಾನ ತೋರಿದರು. ಕೆಂಬಾವುಟದ ಬಗ್ಗೆ ತುಂಬಾ ಗೌರವ ಇದೆ. 165 ಗ್ರಾಮಗಳಲ್ಲಿ (ಬಾಗೇಪಲ್ಲಿ, ಗುಡಿಬಂಡೆ ತಾಲೂಕು)ಗಳಲ್ಲಿ ಪ್ರದರ್ಶನ ನೀಡಿದೆವು. ಜನರಿಂದ ನಮ್ಮ ಮನೋಬಲ ಹೆಚ್ಚಿದೆ ಎಂದರು.

ಕಾಂ|| ಮಳ್ಳೂರು ಪಾಪಣ್ಣ ತಂಡದ ನಾಯಕ ಕೆ.ಎಸ್. ನಾರಾಯಣ ಸ್ವಾಮಿಯವರು ವಿವರಿಸಿದ್ದು ಹೀಗೆ. (ಕೈವಾರದಿಂದ) 58 ಪ್ರದರ್ಶನಗಳು. ಅದರಲ್ಲಿ ಆದ ಅನುಭವಗಳು ಅಪಾರ. ತೆಲುಗು ನಾಟಕ ಪ್ರದರ್ಶನ, 361 ಹಾಡುಗಳನ್ನು ಹಾಡಲಾಯಿತು. 18 ಸ್ಥಳಗಳಲ್ಲಿ ಎರಡು ಬಾರಿ ನಾಟಕಗಳು. ಸಂಗ್ರಹವಾದ ಹಣ ರೂ. 7,988.45. ಒಂದು ನಾಟಕದ ವಸ್ತು- ಬೆಲೆಯೇರಿಕೆಯಿಂದ ತತ್ತರಿಸಿದ ಕೂಲಿಕಾರ ಕುಟುಂಬದ ಹೆಣ್ಣು ಮಗಳು ಅನುಭವಿಸುವ ಸಂಕಟದ ಬಗ್ಗೆ ಆಡುವಾಗ ಕೆಲವು ಮಹಿಳೆಯರು ಕಣ್ಣೀರಿಡುತ್ತಿದ್ದುದು ಅನೇಕ ಕಡೆ ನೋಡಿದೆವು. ಸ್ಥಳ ತಲುಪಲು ತಡವಾದರೆ ಹಾದಿ ನೋಡುತ್ತಿದ್ದರು. ಕೆಲವು ಹಳ್ಳಿಗಳಲ್ಲಿ ರಸ್ತೆಮೇಲೆ ಕುಳಿತು ನಮ್ಮನ್ನು ತಡೆದು ನಾಟಕ ಆಡಿಸಿದ್ದಾರೆ. ಸಿ.ಪಿ.ಐ.(ಎಂ) ಜನಪರ ಅಂತಾ ಜನಮನದಲ್ಲಿ ಮೂಡಿದೆ.'

ಕಾಂ|| ಕೆ.ಎಸ್. ವಾಸನ್ ತಂಡದ ನಾಯಕ ಬೊಕ್ಕಲಿಂಗರವರು ಡಿಸೆಂಬರ್ 10ರಂದ ಆರಂಭಗೊಂಡ ತಂಡದ ಅನುಭವಗಳನ್ನು ಬಿಡಿಸಿದರು. ಈಗ 23 ಪ್ರದರ್ಶನ ಆಗಿದೆ. ಕನಿಷ್ಠವೆಂದರೂ 200 ರಿಂದ 300 ಜನ ಸೇರುತ್ತಾರೆ. ಪ್ರತೀಬಾರಿ 75ರಿಂದ 100 ರೂಪಾಯಿ ನಿಧಿ ಸಂಗ್ರಹ ಆಗುತ್ತಿದೆ. ಜನಮನವನ್ನು ಹೊಕ್ಕಿದ್ದೇವೆ' ಎಂದರು.

ಕೋಲಾರ: ಎತ್ತ ನೋಡಿದರತ್ತ ಆಕರ್ಷಕ ಗೋಡೆಬರಹ, ಬ್ಯಾನರುಗಳು, ಬಾವುಟಗಳು

ಎತ್ತ ನೋಡಿದರತ್ತ ಜನರನ್ನು ಆಕರ್ಷಿಸುವಂತೆ ಕಾಣುವ ವರ್ಣರಂಜಿತ ಗೋಡೆ ಬರಹ, ಬೀದಿ ಬದಿಗಳಲ್ಲಿ ನಗರದ ಮುಖ್ಯ ದ್ವಾರಗಳಲ್ಲಿ ನಗರಕ್ಕೆ ಆಗಮಿಸುತ್ತಿ ರುವ ಪ್ರತಿನಿಧಿಗಳನ್ನು ಹಾಗೂ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಕೋಲಾರದತ್ತ ಧಾವಿಸುತ್ತಿರುವ ಜನಸ್ತೋಮವನ್ನು ಸ್ವಾಗತಿಸುವ ಬ್ಯಾನರುಗಳು, ಕೆಂಬಾವುಟಗಳನ್ನೊತ್ತ ವಿದ್ಯುತ್ ಹಾಗೂ ಟೆಲಿಫೋನ್ ಕಂಬಗಳು ಕೋಲಾರದ ಜನತೆಯನ್ನು ಆಯಸ್ಕಾಂತದಂತೆ ಆಕರ್ಷಿಸುತ್ತಿದೆ. ಇದು ಡಿಸೆಂಬರ್ 30, 31, ಜನವರಿ 1, 2 ರಂದು ನಡೆಯುವ ಸಿಪಿಐ(ಎಂ) ನ 16ನೇ ರಾಜ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಯಲ್ಲಿ ಕೋಲಾರ ನಗರ ಶೃಂಗಾರಗೊಳುತ್ತಿರುವ ಪರಿ.

ಡಿಸೆಂಬರ್ 30 ರಂದು ನಡೆಯುವ ಜಿಲ್ಲೆಯ ಐತಿಹಾಸಿಕ ಬೃಹತ್ ಮೆರವಣಿಗೆಗೆ ಜನರನ್ನು ಆಹ್ವಾನಿಸುವಲ್ಲಿ ಸಾವಿರಾರು ಭಿತ್ತಿ ಪತ್ರಗಳು ಹಾಗೂ ಲಕ್ಷಾಂತರ ಕರಪತ್ರಗಳು ಯಶಸ್ವಿಯಾಗಿವೆ. ಮುಳಬಾಗಿಲು ಸೇರಿದಂತೆ ಹಲವೆಡೆ ಭಿತ್ತಿಪತ್ರ, ಕರಪತ್ರ ನೋಡುತಿದ್ದಂತೆಯೇ ನಾವು ಈ ರ‍್ಯಾಲಿಯಲ್ಲಿ ಖಂಡಿತವಾಗಿಯೂ ಭಾಗವಹಿಸುತ್ತೇವೆ 'ಇದು ನಮಗೆ ತಾಯಿ ಸಮಾನ' (ಕುಡುಗೋಲುಸುತ್ತಿಗೆ) ಇದನ್ನು ನಾವು ಎಂದೆಂದಿಗೂ ಮರೆಯುವ ಪ್ರಶ್ನೆಯೇ ಇಲ್ಲ ಎಂದು ಜನರು ತಮ್ಮ ಹಿಂದಿನ ಚಳುವಳಿಯ ಪರ್ವವನ್ನು ಸ್ಮರಿಸುತ್ತಾರೆ.

ಕೋಲಾರ ನಗರ ಹಾಗೂ ಬಾಗೇಪಲ್ಲಿಯಲ್ಲಿ ಸೋವಿಯತ್ ಒಕ್ಕೂಟದ ನಿರ್ಮಾತೃ ಲೆನಿನ್, ಹಿಟ್ಲರ್‌ನ ಫ್ಯಾಸಿಸಂನ್ನು ಮರ್ದಿಸಿದ ಜೋಸೆಫ್ ಸ್ಟಾಲಿನ್, ಭಾರತದ ರೈತ ಚಳುವಳಿಯ ರೂವಾರಿಗಳಾದ ಪಿ.ಸುಂದರಯ್ಯ ಹಾಗೂ ಎ.ಕೆ. ಗೋಪಾಲನ್, ಕಾರ್ಮಿಕ ನೇತಾರ ಬಿ.ಟಿ.ರಣದಿವೆ ಹಾಗೂ ಕೋಲಾರದ ಮೊದಲಕ್ರಾಂತಿ ಕಿಡಿ ಮಳ್ಳೂರು ಪಾಪಣ್ಣ ಇವರುಗಳನ್ನೊತ್ತ ವರ್ಣರಂಜಿತ ಕಟ್‌ಔಟ್‌ಗಳು ಈ ಕ್ರಾಂತಿಕಾರಿಗಳ ಸಾಹಸಮಯ ಬದುಕಿನ ಇತಿಹಾಸವನ್ನು ಪ್ರತಿಬಿಂಬಿಸುತ್ತಿವೆ. ಇವುಗಳಲ್ಲಿ ನಗರದ 15 ಪ್ರಮುಖ ಸ್ಥಳಗಳಲ್ಲಿ ಹಾಗೂ ಬಾಗೇಪಲ್ಲಿ ಯಲ್ಲಿ ಜನರು ನಿಂತು ತಲೆಎತ್ತಿ ನೋಡುವಂತೆ ಆಕರ್ಷಿಸುತ್ತಿವೆ.

ಕಾಲ್ನಡಿಗೆ ಜಾಥಾ

ಸಮ್ಮೇಳನದ ಪೂರ್ವಭಾವಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರ ನೆನಪಿನ ಸ್ಥಳಗಳಾದ ವಿದುರಾಶ್ವಥ ಹಾಗೂ ಕೆ.ಜಿ.ಎಫ್.ನಿಂದ ಎರಡು ಕಾಲ್ನಡಿಗೆ ಜಾಥಾಗಳು ಹೊರಟಿವೆ. ಈ ಜಾಥಾದಲ್ಲಿ ದೇಶದ ಸ್ವಾತಂತ್ರ್ಯ ಸ್ವರ್ಣ ಜಯಂತಿ ಅಂಗವಾಗಿ ಪ್ರತಿತಂಡದಲ್ಲಿ 50 ಸದಸ್ಯರಿದ್ದು ಇವು ಡಿಸೆಂಬರ್ 30 ರಂದು ಕೋಲಾರ ತಲುಪುತ್ತವೆ.

ವಿದುರಾಶ್ವಥದಲ್ಲಿ ಡಿ.26 ರಂದು ಪಕ್ಷದ ಹಿರಿಯ ಮುಖಂಡರೂ ಸ್ವಾತಂತ್ರ್ಯ ಹೋರಾಟಗಾರರಾದ ಕಾಂ|| ಎನ್.ಕೆ.ಉಪಾಧ್ಯಾಯರು ಕಾಲ್ನಡಿಗೆಯ ಜಾಥಾ ಉದ್ಘಾಟಿಸಿದ್ದಾರೆ. ಸಿದ್ದಗಂಗಪ್ಪ, ಶ್ರೀನಿವಾಸ ಕರ್ಣ, ಪ್ರೇಮಲತ, ಅಶ್ವತ್ಥಪ್ಪ ಈ ತಂಡದ ಮುಂಚೂಣಿಯಲ್ಲಿದ್ದಾರೆ.

1946 ರಲ್ಲಿ ಗೋಲಿಬಾರಿನಲ್ಲಿ ಹುತಾತ್ಮರಾದ ಕಾರ್ಮಿಕ ಸಂಗಾತಿಗಳ ನೆನಪಿಗಾಗಿ ಡಿಸೆಂಬರ್ 27 ರಂದು ಕೆ.ಜಿ.ಎಫ್.ನಲ್ಲಿ ಉದ್ಘಾಟನೆಗೊಳ್ಳುತ್ತಿರುವ ಈ ತಂಡದಲ್ಲಿ ಮಾಜಿ ಶಾಸಕರಾದ ಟಿ.ಎಸ್.ಮಣಿ, ಜಿ.ಅರ್ಜುನನ್, ಶ್ರೀನಿವಾಸ್ ಇರುತ್ತಾರೆ.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಸಮ್ಮೇಳನಕ್ಕೆ ನಿಧಿ ಸಂಗ್ರಹವಾಗುತ್ತಿದ್ದು ಪಕ್ಷದ ಶಾಖೆಗಳಿರುವ ಕಡೆ ಪ್ರತಿ ಮನೆಗಳಿಂದಲೂ ನಿಧಿ ಸಂಗ್ರಹಿಸಲಾಗುತ್ತಿದೆ. ಜನರು ಉದಾರ ಮನಸ್ಸಿನಿಂದ ಸಹಾಯ ಕೊಟ್ಟು ಜಿಲ್ಲೆಗೆ ಉತ್ತಮ ರಾಜಕೀಯ ನೀಡಿ, ಜಿಲ್ಲೆಯನ್ನು ಪ್ರಗತಿಯತ್ತ ಕೊಂಡೊಯ್ಯಿರಿ ಎಂದು ಆಶಿಸುತ್ತಿದ್ದಾರೆ ಎಂದು ತಂಡದ ಸದಸ್ಯರು ಹೆಮ್ಮೆಯಿಂದ ಹೇಳುತ್ತಾರೆ.

ಸಮ್ಮೇಳನದ ಯಶಸ್ವಿಗಾಗಿ ಹಗಲು ರಾತ್ರಿಯೆನ್ನದೆ ನೂರಾರು ಕಾರ್ಯಕರ್ತರು ದುಡಿಯುತ್ತಿದ್ದು, ಒಟ್ಟಾರೆಯಾಗಿ ಸ್ವಾಗತ ಸಮಿತಿಯಡಿಯಲ್ಲಿ ಎಲ್ಲಾ ಸಿದ್ಧತಾ ಸಮಿತಿಗಳು 16ನೇ ರಾಜ್ಯ ಸಮ್ಮೇಳನದ ಯಶಸ್ವಿಗಾಗಿ ಭರದಿಂದ ಸಕಲ ಸಿದ್ಧತೆ ನಡೆಸುತ್ತಿವೆ.

ವರದಿ : ಜಯರಾಂ

ಮಧ್ಯಾವಧಿ ಚುನಾವಣೆಗಳು ಸಮೀಪಿಸಲಾರಂಭಿಸಿದಂತೆ ಬಿಜೆಪಿಯ ಅರ್ಭಟ ಹೆಚ್ಚುತ್ತಿದೆ. ಪ್ರತಿದಿನಪತ್ರಿಕೆಗಳಲ್ಲಿ ಸುದ್ದಿಗಳು ಬರುವಂತೆ ಅದು ನೋಡಿಕೊಳ್ಳುತ್ತಿದೆ. ಅದನ್ನೊಂದು ಗೌರವಾನ್ವಿತ ಪಕ್ಷ ಎಂದು ಬಿಂಬಿಸಲು ಪ್ರಯತ್ನ ನಡೆಸಿದೆ. ಈ ರಾಜಕೀಯ ಆಕ್ರೋಷವನ್ನು ರಚಿಸಿದ ಆರ್.ಎಸ್.ಎಸ್.ಗೆ ವಂಚನೆ ಎಂಬುದು ಹೊಸತೇನಲ್ಲ. ಇದೀಗ ನಮ್ಮ ಮುಂದಿರುವ ಪ್ರಶ್ನೆ - ಆಧುನಿಕ ಭಾರತ ಜಾತ್ಯಾತೀತ ಪ್ರಜಾಸತ್ತಾತ್ಮಕ ತಳಪಾಯವನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತದೋ ಅಥವಾ ಇಂತಹ ಕುಟಿಲ ಕೋಮುವಾದಿ ಶಕ್ತಿಗಳು ಭಾರತವನ್ನು ಮತ್ತೆ ಕತ್ತಲ ಯುಗಕ್ಕೊಯ್ಯುವುದೋ?

ಭಾರತವನ್ನು ಮತ್ತೆ ಕತ್ತಲ ಯುಗಕೊಯ್ಯಲು ಕಾವಿ ಪಡೆಗಳಿಗೆ ಅವಕಾಶ ಕೊಡಬೇಕೆ?

- ಸೀತಾರಾಂ ಯೆಚೂರಿ

ದಿಲ್ಲಿಯಲ್ಲಿ ಅಧಿಕಾರ ಗಿಟ್ಟಿಸಲು ಹತಾಶವಾಗಿರುವ ಬಿಜೆಪಿ ಎಲ್ಲಾ ತರದ ಕಪಟೋಪಾಯಗಳಿಗಿಳಿದಿದೆ. ಅದು ಇದಕ್ಕಾಗಿ ಅನುಸರಿಸುವ ಸಾಧನಗಳಲ್ಲಿ ಬಹಳ ಮುಖ್ಯವಾದದ್ದು. ವ್ಯವಸ್ಥಿತವಾದ ಸುಳ್ಳು ಮಾಹಿತಿ ಪ್ರಸಾರ, ನೀವು ದೊಡ್ಡ ಸುಳ್ಳೊಂದನ್ನು ಸಾಕಷ್ಟು ಸಲ ಹೇಳಿದರೆ ಅದು ಸತ್ಯವಾಗುತ್ತದೆ ಎಂಬ ಹಿಟ್ಲರನ ಪ್ರಚಾರ ಮಂತ್ರಿ ಗೋಬೆಲ್ಸ್‌ನ ವಿಧಾನ ಬಿಜೆಪಿಯ ಕೋಮುವಾದಿ ಪ್ರಚಾರದ ಹಿಂದಿರುವ ಬಲವಾದ ತತ್ವ . ಈ ಸುಳ್ಳು ಮಾಹಿತಿಗಳ ಬಗ್ಗೆ ಈಗಾಗಲೇ ಹಿಂದೆ ನಾವು ಬರೆದಿದ್ದೇವೆ.

ಇಂದು ಚುನಾವಣೆ ಸಮೀಪಿಸಲಾರಂಭಿಸಿದಂತೆ ಹರಡುತ್ತಿರುವ ಸುಳ್ಳು ಮಾಹಿತಿಯೆಂದರೆ 1996ರ ಚುನಾವಣೆಗಳ ಜನಾದೇಶವನ್ನು ಸಂಯುಕ್ತ ರಂಗ ಹೈಜಾಕ್ ಮಾಡಿತು ಎಂದು. ಜನ ಕಾವಿಪಡೆಗಳಿಗೆ ಮತ ನೀಡಿದ್ದರು. ಆದರೆ ಒಂದು ಪಿತೂರಿಯಿಂದಾಗಿ ಅದು ತನ್ನ ಹಕ್ಕಿನ ಪಾತ್ರ ವಹಿಸಲಾಗಲಿಲ್ಲ. ನಿಜ ಸಂಗತಿಯೇನು?

ತಲೆ ತಗ್ಗಿಸಿ ನಿರ್ಗಮಿಸಿದವರಾರು?

1996 ರ ಚುನಾವಣೆಗಳಲ್ಲಿ 161 ಸ್ಥಾನ ಪಡೆದು ದೊಡ್ಡ ಪಕ್ಷವಾಗಿ ಮೂಡಿ ಬಂದರೂ ಬಹುಮತಕ್ಕೆ ಬೇಕಾದ 272 ಕ್ಕೆ ಬಹಳ ಕಮ್ಮಿಬಿತ್ತು. ಅದಕ್ಕೆ ಸಿಕ್ಕೆ ಮತ 20.29%. ಕಾಂಗ್ರೆಸ್ಸಿಗೆ ಸಿಕ್ಕಿದ್ದು 28.8% ಹಾಗೂ ಸಂಯುಕ್ತ ರಂಗದ ಪ್ರಮುಖ ಅಂಗ ಪಕ್ಷಗಳಿಗೆ ಒಟ್ಟಾಗಿ 29.45%(ಎಂ.ಪಿ.ಗಳ ಸಂಖ್ಯೆ 187). ಹೀಗೆ ಸ್ಥಾನಗಳ ಲೆಕ್ಕದಲ್ಲಾಗಲೀ, ಮತಗಳ ಶೇಕಡಾವಾರಿನಲ್ಲಾಗಲೀ ಸಂಯುಕ್ತ ರಂಗ 11ನೇ ಲೋಕಸಭೆಯ ಅತಿದೊಡ್ಡ ಸಂಘಟನೆಯಾಗಿತ್ತು. ಆದ್ದರಿಂದ ಜನ ಕಾವಿಪಡೆಗಳಿಗೆ ಆಳುವ ಹಕ್ಕು ನೀಡಿದ್ದರೆಂಬುದು ಶುದ್ಧ ಸುಳ್ಳು.

ಅಲ್ಲದೆ, ಬಹುಮತವಿಲ್ಲದಿದ್ದರೂ ಬಿಜೆಪಿ ಸರಕಾರ ರಚಿಸಿತು. ಆದರೆ ವಿಶ್ವಾಸಮತ ಗಳಿಸುವವರೆಗೂ ಉಳಿಯಲಿಲ್ಲ. ಹದಿಮೂರು ದಿನಗಳ ನಂತರ ತಲೆತಗ್ಗಿಸಿಕೊಂಡು ಜಾಗ ಖಾಲಿ ಮಾಡಿತು. ಹೀಗೆ ಬಿಜೆಪಿಗೆ ಸರಕಾರ ರಚಿಸಲು ಅವಕಾಶ ಕೊಡಲಿಲ್ಲ ಎಂಬುದೂ ಸುಳ್ಳು. ಸತ್ಯಸಂಗತಿಯೆಂದರೆ ಸರಕಾರ ರಚಿಸುವ ಅದರ ಪ್ರಯತ್ನ ವಿಫಲವಾಯಿತು.

ಅದೇನೇ ಇರಲಿ. ದಿಲ್ಲಿಯ ಗದ್ದುಗೆಯೇರಲು ಅದರ ಪ್ರಯತ್ನದ ಅತ್ಯಂತ ಹೇಸಿಗೆ ತರುವ ಅಂಶವೆಂದರೆ ಸ್ವಾತಂತ್ರ್ಯ ಹೋರಾಟವನ್ನೇ ಹೈಜಾಕ್ ಮಾಡುವ ಅದರ ಪ್ರಯತ್ನ. ಭಾರತ ತನ್ನ ಸ್ವಾತಂತ್ರ್ಯದ ಹಾಗೂ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ 50ನೇ ವರ್ಷಕ್ಕೆ ಕಾಲಿಡುತ್ತಿದ್ದಂತೆ ಬಿಜೆಪಿಯ ಅಧ್ಯಕ್ಷರು ಇನ್ನೊಂದು ರಥಯಾತ್ರೆ ಆರಂಭಿಸಿದರು - ಸ್ವರ್ಣ ಜಯಂತಿ ರಥಯಾತ್ರೆ. ಈಗಿನ ಬಿಜೆಪಿ ಹಿಂದೆ ಇರಲಿಲ್ಲ. ಆದರೆ ಅದರ ಹಿಂದಿನ ಅವತಾರಗಳಾಗಲೀ, ಇವೆಲ್ಲದರ ಆತ್ಮವಾದ ಆರ್.ಎಸ್.ಎಸ್. ಆಗಲೀ ಸ್ವಾತಂತ್ರ್ಯ ಹೋರಾಟಕ್ಕೆ ಏನಾದರೂ ಕಾಣಿಕೆ ನೀಡುವುದು ಒತ್ತಟ್ಟಿಗಿರಲಿ, ಹಲವು ಸಂದರ್ಭಗಳಲ್ಲಿ ಬ್ರಿಟಿಶರೊಂದಿಗೆ ಸಕ್ರಿಯವಾಗಿ ಶಾಮೀಲಾಗಿದ್ದರು ಕೂಡಾ. ಇಂತಹ ಕಟುವಾಸ್ತವವನ್ನೂ ಹುಸಿಗೊಳಿಸುವ ನಿರ್ಲಜ್ಜತನವನ್ನು ಅದು ಪ್ರದರ್ಶಿಸಿತು. ಕಾವಿಪಡೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಇರಲಿಲ್ಲ, ಬದಲಾಗಿ ಹಲವು ಸಂದರ್ಭಗಳಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ವಿರುದ್ಧವಾಗಿ ಕೆಲಸ ಮಾಡಿದರು ಎಂದು ಸಾಬೀತು ಪಡಿಸುವ ಹಲವು ದಾಖಲೆಗಳು ಬ್ರಿಟಿಶ್ ಆಳ್ವಿಕೆಯ ಕಡತಗಳಲ್ಲಿವೆ. ಇಲ್ಲಿ ಒಂದು ಉದಾಹರಣೆ ಕೊಟ್ಟರೆ ಸಾಕು - *"ಸಂಘ ಭಾರೀ ಮುತುವರ್ಜಿಯಿಂದ ಕಾನೂನಿನ ಚೌಕಟ್ಟಿನಲ್ಲಿಯೇ ತನ್ನನ್ನು ಇರಿಸಿಕೊಂಡಿತು. ವಿಶೇಷವಾಗಿ ಆಗಸ್ಟ್ 1942 ರ ಗಲಭೆಗಳಲ್ಲಿ ಭಾಗವಹಿಸದೆ ದೂರ ನಿಂತಿತು."* -ಇದು ಮುಂಬೈಯ ಗೃಹ ಇಲಾಖೆಯ ಕಡತಗಳಲ್ಲಿನ ಒಂದು ಟಿಪ್ಪಣಿ.

ನಾಚಿಕೆಹೀನ ಪ್ರಯತ್ನ

ತಮಾಷೆಯೆಂದರೆ ಮಹಾರಾಷ್ಟ್ರದ ಬಿಜೆಪಿ-ಶಿವಸೇನಾ ಸರಕಾರ ಇಂತಹ 1942 ರ ಕ್ವಿಟ್ ಇಂಡಿಯಾ ಆಂದೋಲನವನ್ನು ಆರಂಭಿಸಿದ ಮೈದಾನದಲ್ಲೇ ಒಂದು ಸ್ಮಾರಕ ಸಭೆ ಏರ್ಪಡಿಸಿತು! ಸ್ವಾತಂತ್ರ್ಯ ಹೋರಾಟದಿಂದ ದೂರ ನಿಂತುದಷ್ಟೇ ಅಲ್ಲ, ಆಗಾಗ ಅದಕ್ಕೆ ವಿಶ್ವಾಸಘಾತ ಬಗೆದ ಕಾವಿ ಪಡೆಗಳೇ ಇಂದು ನಿಜವಾಗಿ ಜನತೆಗೆ ಸಲ್ಲುವ ಪರಂಪರೆಯನ್ನು ತಮ್ಮದೆಂದು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದೆ.

ಮಹಾತ್ಮಾ ಗಾಂಧೀಜಿಯ ಪರಂಪರೆಯನ್ನು ಕಿತ್ತುಕೊಳ್ಳುವ ಪ್ರಯತ್ನವಂತೂ ಕಾವಿಪಡೆಗಳ ಅತ್ಯಂತ ದುಷ್ಟ ಪ್ರಯತ್ನಗಳಲ್ಲೊಂದು. ಮಹಾತ್ಮಾ ಗಾಂಧೀಜಿಯ ಕೊಲೆಗಡುಕರು ಈಗ ನಾಚಿಕೆಯಿಲ್ಲದೆ ಅವರ ಹೆಸರನ್ನೇ ಬಳಸಿ ತಮ್ಮ ಅಧಿಕಾರದ ಆಕಾಂಕ್ಷೆಗಳನ್ನು ಈಡೇರಿಸಿ ಕೊಳ್ಳಲು ಹೊರಟಿರುವುದು ನಿಜಕೂ ಭಾರತೀಯ ಜನಗಳಿಗೆ ಮಾಡಿರುವ ಅವಮಾನ.

ಗಾಂಧೀ ಜಯಂತಿಯ ದಿನ ಕಾವಿಪಡೆಗಳ ಈ ಠಕ್ಕ ತನ ಆರಂಭ ವಾಯಿತು. ಅಂದು ಆರ್.ಎಸ್.ಎಸ್. ತನ್ನ ಎಂದಿನ ಸಂಪ್ರದಾಯವನ್ನು ಬಿಟ್ಟು ಅಕ್ಟೋಬರ್ 2 ರಂದು ನವದೆಹಲಿಯ ನೆಹರೂ ಸ್ಟೇಡಿಯಂನಲ್ಲಿ ತನ್ನ ಸಾರ್ವಜನಿಕ ಕವಾಯತು ಪ್ರದರ್ಶಿಸಿತು. ಈ ವಾರ್ಷಿಕ ಕವಾಯತನ್ನು ವಿಜಯದಶಮಿಯ ದಿನ ನಾಗಪುರದ ಆರ್.ಎಸ್.ಎಸ್. ಮುಖ್ಯಾಲಯದಲ್ಲಿ ನಡೆಸುವುದು ಅದರ ವಾಡಿಕೆ. ಅಂದು ಆರ್.ಎಸ್.ಎಸ್. ಮುಖ್ಯಸ್ಥ ರಾಷ್ಟ್ರವನ್ನುದ್ದೇಶಿಸಿ ಭಾಷಣ ಕೊಡುತ್ತಾರೆ - ವಿವಿಧ ರಂಗಗಳಲ್ಲಿ ಆರ್.ಎಸ್.ಎಸ್. ನ ಆ ವರ್ಷದ ಕಾರ್ಯಕ್ರಮದ ಮಾರ್ಗದರ್ಶಕ ಸೂತ್ರಗಳನ್ನು ಕೊಡುತ್ತಾರೆ. ಈ ಬಾರಿ ಬಹಳಷ್ಟು ಪ್ರಚಾರ ನೀಡಿದ ಈ ಸಮಾರಂಭ ದಿಲ್ಲಿಯಲ್ಲಿ ಗಾಂಧೀ ಜಯಂತಿಯಂದು ನಡೆದಾಗ ಆರ್.ಎಸ್.ಎಸ್. ಮತ್ತು ಬಿಜೆಪಿಯ ಘಟಾನುಘಟಿಗಳೆಲ್ಲಾ ಖಾಕಿ ಚಡ್ಡಿಗಳಲ್ಲಿ ಕಾಣಿಸಿಕೊಂಡು ಪ್ರತಿಜ್ಞೆ ಸ್ವೀಕರಿಸಿದರು. ವಾಜಪೇಯಿಯವರು ಮಾತ್ರವೇ ಕುರ್ತಾ-ಧೋತಿಯಲ್ಲಿದ್ದರು - ಪ್ರಧಾನ ಮಂತ್ರಿಯಾಗಲು ವ್ಯಾಪಕ ಬೆಂಬಲ ಗಳಿಸಲಿಕ್ಕಾಗಿ ಅಗತ್ಯವಾದ ಸಾರ್ವಜನಿಕ ಇಮೇಜಿಗಾಗಿ ಎಂದು ಕಾಣುತ್ತದೆ.

ವಾಕರಿಕೆ ತರುವ ಗೋಳಾಟ

ಆರ್.ಎಸ್.ಎಸ್. ನ ಮುಖ್ಯಸ್ಥರು ತಮ್ಮ ಭಾಷಣದಲ್ಲಿ ಆರ್.ಎಸ್.ಎಸ್. ಗಾಂಧೀಜಿಯ ವಾರಸುದಾರರಾಗಬೇಕು ಎಂದು ಉಪದೇಶಿಸಿದರು. ಸ್ವಾತಂತ್ರ್ಯದ ನಂತರ ಗಾಂಧೀಜಿಯ ಅನುಯಾಯಿಗಳೇ ದೇಶವನ್ನಾಳಿದರೂ ಅವರು ಗಾಂಧೀಜಿಯನ್ನು ಅಸಂಬದ್ಧಗೊಳಿಸಿದ್ದಾರೆ. ಇಂದು ಮಹಾತ್ಮಜೀಯವರ ಕನಸುಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಎಲ್ಲೂ ಕಾಣುತ್ತಿಲ್ಲ ಎಂದು ಗೋಳಿಟ್ಟರು!

ನಿಜಕೂ ಈ ಶ್ರದ್ಧಾಂಜಲಿ ವಾಕರಿಕೆ ತರುವಂತದ್ದು! ಮಹಾತ್ಮ ಗಾಂಧಿಯನ್ನು ಕೊಂದ ಶಕ್ತಿಗಳೇ, ದೇಶದ ಉದ್ದಗಲಕ್ಕೂ ಕೋಮು ವಿಷವನ್ನು ಹರಡಿಸಿ ಸಾಮಾಜಿಕ ಐಕ್ಯತೆಯನ್ನು ಧ್ವಂಸ ಮಾಡಿ ದೇಶವನ್ನು ಕೋಮು ಅನಾಹು ತಕ್ಕೆ ತಳ್ಳಿದ ಶಕ್ತಿಗಳೇ, ಹಿಂದೂ-ಮುಸ್ಲಿಂ ಐಕ್ಯತೆಯ ಗಾಂಧೀಜಿಯ ಪ್ರಿಯ ಗುರಿಯನ್ನು ನಿರಾಕರಿಸಿದ ಶಕ್ತಿಗಳೇ ಈಗ ಅವರ ವಾರಸುದಾರರಾಗಲು ಹೊರಟಿದ್ದಾರೆ - ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು ಇದಕ್ಕಿಂತ ದೊಡ್ಡ ವಂಚನೆ ಬೇರಿಯಿದೆಯೇ?

ಈ ಸಂದರ್ಭಗಳಲ್ಲಿ ಮಹಾತ್ಮ ಗಾಂಧಿಯವರ ಹತ್ಯೆಯಾದಾಗ ಭಾರತ ಸರಕಾರದ ಹೇಳಿಕೆಗಳು ಏನನ್ನು ಹೇಳಿದ್ದವು ಎಂಬುದನ್ನು ನೆನಪಿಸಿಕೊಳ್ಳುವುದೊಳ್ಳೆಯದು. ಆರ್.ಎಸ್.ಎಸ್.ನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಿದ ಫೆಬ್ರವರಿ 4, 1948 ರ ಸರಕಾರದ ಹೇಳಿಕೆ ನೋಡಿ -

"ಸಂಘದ ಆಕ್ಷೇಪಾರ್ಹ ಹಾಗೂ ತೊಂದರೆಯುಂಟು ಮಾಡುವ ಚಟುವಟಿಕೆಗಳು ನಿಲ್ಲದೆ ಸಾಗಿವೆ. ಸಂಘ ಪ್ರಾಯೋಜಿಸಿದ ಮತ್ತು ಅದರಿಂದ ಸ್ಫೂರ್ತಿ ಪಡೆದ ಹಿಂಸಾಚಾರದ ಪಂಥ ಹಲವು ಜೀವಗಳ ಬಲಿ ತೆಗೆದುಕೊಂಡಿದೆ. ಇದಕ್ಕೆ ಇತ್ತೀಚಿನ ಹಾಗೂ ಅತ್ಯಂತ ಅಮೂಲ್ಯವಾದ ಬಲಿಯೆಂದರೆ ಸ್ವತಃ ಗಾಂಧೀಜಿಯವರೇ. ಇಂತಹ ಸನ್ನಿವೇಶಗಳಲ್ಲಿ ಹಿಂಸಾಚಾರ ಅತ್ಯಂತ ವಿಷಕಾರಿ ರೀತಿಯಲ್ಲಿ ಮತ್ತೆ ಕಾಣಿಸಿಕೊಳ್ಳದಂತೆ ತಡೆಯಲು ಪರಿಣಾಮ ಕಾರಿ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಆದ್ಯ ಕರ್ತವ್ಯ. ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ಸಂಘವನ್ನು ಒಂದು ಕಾನೂನು ಬಾಹಿರ ಸಂಘಟನೆಯೆಂದು ಘೋಷಿಸಲು ಸರಕಾರ ನಿರ್ಧರಿಸಿದೆ. ಇಂತಹ ಒಂದು ಕ್ರಮ ಕೈಗೊಳ್ಳುವಾಗ ಕಾನೂನನ್ನು ಗೌರವಿಸುವ ಎಲ್ಲಾ ನಾಗರಿಕರ, ದೇಶದ ಒಳಿತನ್ನು ಮನಸಾ ಬಯಸುವ ಎಲ್ಲರ ಬೆಂಬಲ ಇದೆಯೆಂಬ ವಿಶ್ವಾಸ ಸರಕಾರಕ್ಕಿದೆ."

ವಂಚಕ ಕಸರತ್ತು

ಇದಾದ ನಂತರ ಆರ್.ಎಸ್.ಎಸ್. ಹಲವು ವಂಚಕ ಕಸರತ್ತುಗಳಿಗಿಳಿಯಿತು. ಆಗಿನ ಸರಸಂಚಾಲಕ ಗೋಲ್ವಾಲ್ಕರ್‌ರವರು ರಾಜಿ ಮಾಡಿಕೊಳ್ಳಲು ಮತ್ತೆ-ಮತ್ತೆ ಸರಕಾರದ ಬಳಿಸಾರಿದರು. ಈಗ ಕಾವಿ ಪಡೆಗಳು ಆರಾಧಿಸುವ ಸರ್ದಾರ್ ಪಟೇಲರವರೇ ಆಗ ಗೃಹಮಂತ್ರಿಯಾಗಿ ಆರಂಭದ ಒಂದು ಸಂದರ್ಶನದ ನಂತರ ಆರ್.ಎಸ್.ಎಸ್. ಮುಖ್ಯಸ್ಥರಿಗೆ ಭೇಟಿ ಕೊಡಲು ಹಲವು ಬಾರಿ ನಿರಾಕರಿಸಿದರು. ನವಂಬರ್ 14, 1948 ರಂದು ಗೃಹಮಂತ್ರಾಲಯ ನೀಡಿದ ಪತ್ರಿಕಾ ಹೇಳಿಕೆ ಆರ್.ಎಸ್.ಎಸ್. ಎಷ್ಟರ ಮಟ್ಟಿಗೆ ರಾಜಿ ಮಾಡಿಕೊಳ್ಳಲು ಸಿದ್ಧವಿತ್ತು ಎಂಬುದನ್ನು ಹೊರಗೆಡವುತ್ತದೆ.


"ಕಾನೂನು ವಿಧಿಸಿದ ಆರು ತಿಂಗಳ ಜೈಲು ವಾಸದ ನಂತರ ಬಿಡುಗಡೆಯಾದ ಕೂಡಲೇ ಶ್ರೀಯುತ ಗೋಲ್ವಾಲ್ಕರ್, ಆರ್.ಎಸ್.ಎಸ್.ನ ಮುಖ್ಯಸ್ಥರು, ಸರ ಕಾರದ ಬಳಿಸಾರಲು ಪ್ರಯತ್ನಿಸಿದರು. ಆ ಸಂಘಟನೆಯ ಚಟುವಟಿಕೆಗಳನ್ನು ದೇಶದ ಕೋಮು ಪರಿಸ್ಥಿತಿಯ ಮೇಲೆ ಉಪದ್ರವಕಾರಿ ಪರಿಣಾಮ ಬೀರದಂತಹ ದಾರಿಗಷ್ಟೇ ಸೀಮಿತಗೊಳಿಸುವ ಸಾಧ್ಯತೆಗಳನ್ನು ಇವು ಸೂಚಿಸಿವೆ. ಅದಕ್ಕೆ ಅನುವು ಮಾಡಿಕೊಡಲು ಭಾರತ ಸರ್ಕಾರ ಮಧ್ಯಪ್ರಾಂತ್ಯದ ಸರಕಾರಕ್ಕೆ ಶ್ರೀಯುತ ಗೋಲ್ವಾಲ್ಕರ್‌ರವರ ಚಲನ ವಲನಗಳನ್ನು ನಾಗಾಪುರ ನಗರಕ್ಕೆ ಸೀಮಿತಗೊಳಿಸುವ ಆದೇಶವನ್ನು ರದ್ದು ಮಾಡುವಂತೆ ಹಾಗೂ ಈ ಮೂಲಕ ಅವರು ನಿರ್ದಿಷ್ಟವಾಗಿ ಗೃಹ ಮಂತ್ರಿಗಳನ್ನು ಕಾಣಲು ದಿಲ್ಲಿಗೆ ನಿರ್ಗಮಿಸಲು ಅವಕಾಶ ಮಾಡಿ ಕೊಡುವಂತೆ ಕೇಳಿಕೊಂಡಿದೆ.

ಆ ಪ್ರಕಾರವೇ ಶ್ರೀಯುತ ಗೋಲ್ವಾಲ್ಕರ್ ದಿಲ್ಲಿಗೆ ಬಂದು ಕೂಡಲೇ ಗೃಹಮಂತ್ರಿಗಳೊಂದಿಗೆ ಪ್ರಥಮ ಸಂದರ್ಶನ ಪಡೆದರು. ಅಭಿಪ್ರಾಯಗಳ ವಿನಿಮಯದ ನಂತರ ಶ್ರೀಯುತ ಗೋಲ್ವಾಲ್ಕರ್ ತನ್ನ ಅನುಯಾಯಿಗಳೊಡನೆ ಸಮಾಲೋಚಿಸಿ ಸರಿಯಾದ ಮಾರ್ಗದಲ್ಲಿ ಅವರ ಮೇಲೆ ಪ್ರಭಾವ ಬೀರಲು ಸಮಯಾವಕಾಶ ಕೇಳಿದರು. ಕೆಲವು ದಿನಗಳ ನಂತರ ತನ್ನ ಎರಡನೇ ಸಂದರ್ಶನದಲ್ಲಿ ಅವರು ನಿಷೇಧ ತೆಗೆಯುವವರೆಗೆ ಯಾವುದೇ ಬದಲಾವಣೆಗೆ ಬದ್ಧವಾಗಲು ತನಗೆ ಸಾಧ್ಯವಾಗುತ್ತಿಲ್ಲ ಎಂದರು. ನಿಷೇಧ ತೆಗೆದರೆ ತನ್ನ ಅನುಯಾಯಿಗಳೊಂದಿಗೆ ವ್ಯವಹರಿಸಲು ತನ್ನ ಕೈಯನ್ನು ಗಟ್ಟಿಗೊಳಿಸಿದಂತಾಗುತ್ತದೆ ಎಂದವರು ಹೇಳಿದರು. ಆದರೆ ಅದೇ ವೇಳೆಗೆ ಭಾರತ ಸರಕಾರ ಪ್ರಾಂತೀಯ ಸರಕಾರಗಳನ್ನು ಸಂಪರ್ಕಿಸಿ ಆರ್.ಎಸ್.ಎಸ್.ನ ಚಟುವಟಿಕೆಗಳ ಬಗ್ಗೆ ಇತ್ತೀಚಿನ ಮಾಹಿತಿಗಳನ್ನು ಪಡೆಯಲು ಪ್ರಯತ್ನಿಸಿತು. ಭಾರತ ಸರಕಾರಕ್ಕೆ ದೊರೆತ ಮಾಹಿತಿಗಳ ಪ್ರಕಾರ ಆರ್.ಎಸ್.ಎಸ್. ಗೆ ಸಂಬಂಧಪಟ್ಟ ಜನಗಳು ವಿವಿಧ ರೀತಿಗಳಲ್ಲಿ ನಡೆಸುತ್ತಿರುವ ಚಟುವಟಿಕೆಗಳು ರಾಷ್ಟ್ರ-ವಿರೋಧಿ ಹಾಗೂ ಹಲವು ಬಾರಿ ಬುಡಮೇಲುಕಾರಿ ಮತ್ತು ಹಿಂಸಾತ್ಮಕವಾಗುವ ಪ್ರವೃತ್ತಿ ತೋರಿಸುತ್ತಿವೆ. ಹಿಂದಿನಂತೆ ವಿನಾಶಕಾರಿ ಪರಿಣಾಮಗಳನ್ನು ಉಂಟು ಮಾಡುವಂತಹ ಒಂದು ವಾತಾವರಣವನ್ನು ಮತ್ತೆ ಸೃಷ್ಟಿಸಲು ಆರ್.ಎಸ್.ಎಸ್. ಅವಿರತವಾಗಿ ಪ್ರಯತ್ನ ನಡೆಸಿದೆ ಎಂದೂ ತಿಳಿದು ಬಂದಿದೆ. ಈ ಕಾರಣಗಳಿಂದಾಗಿ ಪ್ರಾಂತೀಯ ಸರಕಾರಗಳು ತಾವು ನಿಷೇಧ ತೆಗೆಯುವುದನ್ನು ವಿರೋಧಿಸುತ್ತೇವೆ ಎಂದು ಸಾರಿದ್ದಾರೆ. ಭಾರತ ಸರ್ಕಾರ ಪ್ರಾಂತೀಯ ಸರಕಾರಗಳ ಅಭಿಪ್ರಾಯವನ್ನು ಸಮ್ಮತಿಸಿದೆ.

ಈ ನಿಲುವನ್ನು ಶ್ರೀಯುತ ಗೋಲ್ವಾಲ್ಕರ್‌ರವರಿಗೆ ಕಳೆದ ತಿಂಗಳ ಕೊನೆಯ ವೇಳೆಗೆ ತಿಳಿಸಲಾಗಿದೆ ಹಾಗೂ ಅವರಿಗೆ ದಿಲ್ಲಿಗೆ ಬರಲು ಅವಕಾಶ ನೀಡಿದ ಉದ್ದೇಶ ಈಡೇರಿರುವುದರಿಂದ ಅವರಿನ್ನು ನಾಗಪುರಕ್ಕೆ ಹಿಂದಿರುಗಬೇಕು ಎಂದು ತಿಳಿಸಲಾಯಿತು. ಶ್ರೀಯುತ ಗೋಲ್ವಾಲ್ಕರ್ ಈ ನಿಲುವನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಗೃಹಮಂತ್ರಿಗಳು ಮತ್ತು ಪ್ರಧಾನಮಂತ್ರಿಗಳು ದಿಲ್ಲಿಗೆ ಹಿಂದಿರುಗಿದಾಗ ಅವರನ್ನು ಕಾಣುವ ಅಪೇಕ್ಷೆ ವ್ಯಕ್ತಪಡಿಸಿದರು. ಗೃಹ ಮಂತ್ರಿಗಳು ಇನ್ನಷ್ಟು ಸಂದರ್ಶನ ನೀಡಲು ನಿರಾಕರಿಸಿದರು. ಆದರೆ ಪ್ರಧಾನ ಮಂತ್ರಿಗಳು ಹಿಂದಿರುಗಿದಾಗ ಅವರು ಬಯಸಿದರೆ ಅವರು ಸಂದರ್ಶನ ಪಡೆಯಲು ಶ್ರೀಯುತ ಗೋಲ್ವಾಲ್ಕರ್‌ರವರಿಗೆ ಅವಕಾಶ ನೀಡುವಂತಾಗಲು ದಿಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟ್ ಹೊರಡಿಸಿದ ಕೆಲವು ಆದೇಶಗಳ ಪ್ರಕಾರ ದಿಲ್ಲಿಯಲ್ಲಿ ಉಳಿಯಲು ಅವಕಾಶ ನೀಡಲಾಗಿದೆ. ಶ್ರೀಯುತ ಗೋಲ್ವಾಲ್ಕರ್ ತನ್ನ ಚಟುವಟಿಕೆಗಳಿಗೆ ಮಿತಿಹಾಕುವ ಆದೇಶಗಳನ್ನು ಸ್ವೀಕರಿಸಲು ನಿರಾಕರಿಸಿದರು. ಆದರೆ ಹೀಗೆ ಹೇರಿದ ಮಿತಿಗಳನ್ನು ಉಲ್ಲಂಘಿಸುವ ಪ್ರಯತ್ನಗಳನ್ನೇನೂ ಅವರು ಮಾಡಲಿಲ್ಲ. ಅವರು ಪ್ರಧಾನ ಮಂತ್ರಿಗಳು ಹಾಗೂ ಗೃಹ ಮಂತ್ರಿಗಳಿಗೆ ಪತ್ರ ಬರೆದು ಆರ್.ಎಸ್.ಎಸ್. ಭಾರತಕ್ಕೆ ಒಂದು ಜಾತ್ಯಾತೀತ ಪ್ರಭುತ್ವದ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಒಪ್ಪುತ್ತದೆ. ದೇಶದ ರಾಷ್ಟ್ರೀಯ ಧ್ವಜವನ್ನು ಒಪ್ಪುತ್ತದೆ, ಆದ್ದರಿಂದ ಫೆಬ್ರವರಿಯಲ್ಲಿ ಹೇರಿದ ನಿಷೇಧವನ್ನು ತೆಗೆಯಬೇಕು ಎಂದು ಮನವಿ ಮಾಡಿದ್ದರು. ಆದರೆ ಆರ್.ಎಸ್.ಎಸ್. ಮುಖಂಡರ ಈ ಪ್ರತಿಪಾದನೆಗಳು ಅವರ ಅನುಯಾಯಿಗಳ ಕೃತಿಗಳಿಗೆ ಅನುಗುಣವಾಗಿಲ್ಲ. ಈಗಾಗಲೇ ಮೇಲೆ ವಿವರಿಸಿದ ಕಾರಣಗಳಿಂದಾಗಿ ನಿಷೇಧವನ್ನು ತೆಗೆಯುವಂತೆ ಪ್ರಾಂತೀಯ ಸರಕಾರಗಳಿಗೆ ಸಲಹೆ ನೀಡಲು ಭಾರತ ಸರ್ಕಾರಕ್ಕೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಪ್ರಧಾನ ಮಂತ್ರಿಗಳು ಶ್ರೀಯುತ ಗೋಲ್ವಾಲ್ಕರ್ ಕೇಳಿದ ಸಂದರ್ಶನ ನೀಡಲು ನಿರಾಕರಿಸಿದ್ದಾರೆ.

ಆ ಪ್ರಕಾರ ಶ್ರೀಯುತ ಗೋಲ್ವಾಲ್ಕರ್‌ರವರು ತಕ್ಷಣವೇ ನಾಗಪುರಕ್ಕೆ ಹಿಂದಿರುಗಲು ವ್ಯವಸ್ಥೆ

>>



ಪ್ರಾಯೋಜಿತ ಪಕ್ಷದ ಸರಕಾರ ಪ್ರಾಯೋಜಿತ ಪ್ರಧಾನ ಮಂತ್ರಿ!

'ನೇ ಪಥ್ಯದಲ್ಲಿ ಕಾದಿರುವ ಪ್ರಧಾನ ಮಂತ್ರಿ'ಗಳ ೭೧ನೇ ಜನ್ಮದಿನ ಡಿಸೆಂಬರ್ ೨೫ ರಂದು ದೇಶದ ಒಂದು ಪ್ರಮುಖ ಗುತ್ತೇದಾರಿ ಒಡೆತನದ ಪತ್ರಿಕಾ ಸರಣಿ ೮ ಪುಟಗಳ ವಿಶೇಷ ಪ್ರಾಯೋಜಿತ ಪುರವಣಿಯನ್ನು ಪ್ರಕಟಿಸಿತು. ಅದರ ಬಣ್ಣದ ಮುಖಪುಟವನ್ನು ಪ್ರಾಯೋಜಿಸಿದವರು 'ವಿಡಿಯೋಕಾನ್', ಬಣ್ಣದ ಕೊನೆಯ ಪುಟವನ್ನು ಪ್ರಾಯೋಜಿಸಿದವರು ಮತ್ತೊಂದು ಗುತ್ತೇದಾರಿ ಗುಂಪು ಮಫತ್‌ಲಾಲ್. ಮಧ್ಯದ ೬ ಪುಟಗಳಲ್ಲಿ ಪ್ರತಿಯೊಂದನ್ನು ಎರಡೆರಡು ಕಂಪನಿಗಳು ಪ್ರಾಯೋಜಿಸಿದ್ದವು. ಈ ಪ್ರಾಯೋಜಿತ ಲೇಖನ - ಸಂದರ್ಶನಗಳಲ್ಲಿ ವಾಜಪೇಯಿಯವರ ವ್ಯಕ್ತಿತ್ವದ ವಿವಿಧ ಆಯಾಮಗಳ ಬಗ್ಗೆ ಭಟ್ಟಂಗಿ ಲೇಖನಗಳಿವೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರದ ಬಗ್ಗೆ ಏನೂ ಇಲ್ಲ, ಕಾರಣ 'ಲಕ್ಷ್ಮರಂಗ' ದ ಓದುಗರಿಗೆ ಗೊತ್ತು.

ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ. ಬಿಜೆಪಿಯೊಂದಿಗೆ ಮೈತ್ರಿ ಮುರಿದಾಗ ಕಲ್ಯಾಣ್ ಸಿಂಗ್ ಸರಕಾರವನ್ನು ಉಳಿಸಲು ದೊಡ್ಡ ಬಂಡವಾಳಿಗರ ಹಣದ ಥೈಲಿಗಳು ಲಕ್ನೌನಲ್ಲಿ ಜಮಾಯಿಸಿದ್ದವು ಎಂಬುದೀಗ ಹಳೆಯ ಸುದ್ದಿ. ನಂತರ ದಿಲ್ಲಿಯಲ್ಲೂ ಈ ಹಣದ ಥೈಲಿಗಳು ಕಾದು ಕುಳಿತಿದ್ದವಂತೆ.

ಲೋಕಸಭೆಯ ವಿಸರ್ಜನೆಯ ನಂತರ ಈ ಪಕ್ಷಾಂತರದ ಪ್ರಯತ್ನ ನಿಂತಿಲ್ಲ ಎಂಬುದಕ್ಕೆ ಪ್ರತಿದಿನ ಪತ್ರಿಕೆಗಳಲ್ಲಿ ಬರುವ ಸುದ್ದಿಗಳೇ ಸಾಕ್ಷಿ. ಈ ಹಣದ ಥೈಲಿಗಳ ಧಾಳಿಯ ಪ್ರಮುಖ ಗುರಿ ಈಗ ಜನತಾದಳ ಎಂದು ರಾಜಕೀಯ ವೀಕ್ಷಕರ ವಿಶ್ಲೇಷಣೆ. ಒರಿಸ್ಸಾದಲ್ಲಿ ಅದರ ವಿಭಜನೆ ಇದಕ್ಕೊಂದು ಉದಾಹರಣೆಯಂತೆ.

ಈಗ ಬಿಜೆಪಿಗೆ ಸಾಗಿರುವ ಕಾಂಗ್ರೆಸ್ಸಿನ ಕುಮಾರಮಂಗಳಂಗಳ, ಅಸ್ಲಾಂ ಶೇರ್‌ಖಾನ್‌ಗಳ, ಮಮತಾಗಳ 'ಮೆರವಣಿಗೆ'ಗೆ ಇನ್ನೊಂದು ಕಾರಣವೂ ಇದೆ ಎಂಬ ಸುದ್ದಿ ಹರಡಿದೆ. ಇವರೆಲ್ಲರ ಮೂಲಕ ಸೋನಿಯಾ ಗಾಂಧಿಯವರು ಬಿಜೆಪಿಯೊಂದಿಗೆ ಸಂಬಂಧ ಬೆಸೆಯುತ್ತಿದ್ದಾರೆ ಎಂಬುದೇ ಆ ಸುದ್ದಿ. ಕಾಂಗ್ರೆಸ್ ವಕ್ತಾರರು ಇದು ಕುಚೋದ್ಯವೆಂದಿದ್ದಾರೆ. ಆದರೆ ಈಗ ಬಿಜೆಪಿ-ಕಾಂಗ್ರೆಸ್‌ರಾಜಕೀಯದಲ್ಲಿ ಕುಚೋದ್ಯ ಯಾವುದು, ಗಂಭೀರ ಸಂಗತಿ ಯಾವುದು ಎಂದು ಪತ್ತೆ ಹಚ್ಚಲು ಸಾಧ್ಯವೇ ಎಂದು ಪ್ರಜ್ಞಾವಂತ ನಾಗರೀಕರು ಪ್ರಶ್ನಿಸುತ್ತಾರೆ. ಚಾಲ್, ಚಲನ್, ಚರಿತ್ರ್, ಚಿಂತನ್ ಎಲ್ಲಾ ಮುಖವಾಡಗಳು ತಾನೆ.'

ಬಿಜೆಪಿಗೆ ಈ ವಿಶೇಷ ಗುತ್ತೇದಾರಿಗಳ ಒಲವು ಏಕೆ? ಕಾರಣ ಸುಸ್ಪಷ್ಟ. ಎಡಶಕ್ತಿಗಳು ನಿರ್ಣಾಯಕ ಪಾತ್ರ ವಹಿಸುತ್ತಿರುವ ರಂಗವೊಂದು ಅಧಿಕಾರಕ್ಕೆ ಬರಬಾರದೆಂಬುದೇ ಅವರ ಪ್ರಥಮ ಉದ್ದೇಶ. ಕಾಂಗ್ರೆಸನ್ನಂತೂ ಇನ್ನು ಅವರು ಆಧರಿಸುವಂತಿಲ್ಲ!



ಕೋಮುವಾದಿ ಹಂತಕನ ಗುಂಡಿಗೆ ಬಲಿಯಾದ ಮಹಾತ್ಮ

ಮಹಾತ್ಮ ಗಾಂಧಿಯನ್ನು ಕೊಂದ ಶಕ್ತಿಗಳೇ, ದೇಶದ ಉದ್ದಗಲಕೂ ಕೋಮು ವಿಷವನ್ನು ಹರಡಿಸಿ ಸಾಮಾಜಿಕ ಐಕ್ಯತೆಯನ್ನು ಧ್ವಂಸ ಮಾಡಿ ದೇಶವನ್ನು ಕೋಮು ಅನಾಹುತಕೆ ತಳ್ಳಿದ ಶಕ್ತಿಗಳೇ, ಹಿಂದೂ-ಮುಸ್ಲಿಂ ಐಕ್ಯತೆಯ ಗಾಂಧೀಜಿಯ ಪ್ರಿಯ ಗುರಿಯನ್ನು ನಿರಾಕರಿಸಿದ ಶಕ್ತಿಗಳೇ ಈಗ ಅವರ ವಾರಸುದಾರರಾಗಲು ಹೊರಟಿದ್ದಾರೆ - ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು ಇದಕ್ಕಿಂತ ದೊಡ್ಡ ವಂಚನೆ ಬೇರಿಯದೆಯೇ?

▶▶

ಏರ್ಪಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ. ಶ್ರೀಯುತ ಗೋಲ್ವಾಲ್ಕರ್ ಸೂಚನೆಗಳನ್ನು ಪಾಲಿಸುವಂತೆ ಭಾರತ ಸರ್ಕಾರ ಸೂಕ್ತ ಕ್ರಮ ವಹಿಸುತ್ತಿದೆ"

ಕೊನೆಗೆ, ಬ್ರಿಟಿಶ್ ಆಳ್ವಿಕೆಯ ಕಾಲದಲ್ಲಿ ಜೈಲುವಾಸ ಅಥವಾ ತಲೆಮರೆಸಿಕೊಂಡು ಚಟುವಟಿಕೆಗಳನ್ನು ನಡೆಸಿದ ಪರಂಪರೆಯೇನೂ ಇಲ್ಲದ ತನ್ನ ಕಾರ್ಯಕರ್ತರ ಒತ್ತಡ ತಾಳಲಾರದೆ ಆರ.ಎಸ್.ಎಸ್. 1949 ರ ಜುಲೈನಲ್ಲಿ ತನ್ನ ನಿಲುವುಗಳನ್ನೆಲ್ಲಾ ಬಿಟುಕೊಟ್ಟು ಸಂಪೂರ್ಣ ರಾಜಿ ಮಾಡಿಕೊಂಡಿತು. ಇದರಿಂದಾಗಿ ಜುಲೈ 11, 1949 ರಂದು ಅದರ ಮೇಲಿನ ನಿಷೇಧವನ್ನು ತೆಗೆಯಲಾಯಿತು. ಆ ದಿನ ಭಾರತ ಸರಕಾರ ನೀಡಿದ ಹೇಳಿಕೆ ಹೀಗಿದೆ -

"ಆರ್.ಎಸ್.ಎಸ್. ಮುಖಂಡರು ಭಾರತದ ಸಂವಿಧಾನಕ್ಕೆ ವಿಧೇಯರಾಗಿರುವುದಾಗಿ, ರಾಷ್ಟ್ರೀಯ ಧ್ವಜವನ್ನು ಗೌರವಿಸುವ ಅಂಶವನ್ನು ಆರ್.ಎಸ್.ಎಸ್.ನ ಸಂವಿಧಾನದಲ್ಲಿ ಹೆಚ್ಚು ಸ್ಪಷ್ಟವಾಗಿ ಸೇರಿಸುವುದಾಗಿ ಹಾಗೂ ಹಿಂಸಾತ್ಮಕ ಹಾಗೂ ಗುಪ್ತ ವಿಧಾನಗಳನ್ನು ನಂಬುವ ಮತ್ತು ಆಚರಿಸುವ ವ್ಯಕ್ತಿಗಳಿಗೆ ಸಂಘದಲ್ಲಿ ಸ್ಥಾನವಿಲ್ಲವೆಂದು ಸ್ಪಷ್ಟವಾಗಿ ವಿಧಿಸುವುದಾಗಿ ಮಾತು ಕೊಟ್ಟಿದ್ದಾರೆ. ತಮ್ಮ ಸಂವಿಧಾನವನ್ನು ಒಂದು ಪ್ರಜಾಸತ್ತಾತ್ಮಕ ಆಧಾರದಲ್ಲಿ ರೂಪಿಸುವುದಾಗಿಯೂ, ಆರ್.ಎಸ್.ಎಸ್. ಮುಖಂಡರು ಸ್ಪಷ್ಟ ಪಡಿಸಿದ್ದಾರೆ. .... ಆರ್.ಎಸ್.ಎಸ್. ಮುಖಂಡರು ಮಾಡಿದ ಬದಲಾವಣೆಗಳು ಹಾಗೂ ನೀಡಿದ ಸ್ಪಷ್ಟೀಕರಣಗಳ ಬೆಳಕಿನಲ್ಲಿ ಆರ್.ಎಸ್.ಎಸ್. ಸಂಘಟನೆಗೆ ಭಾರತೀಯ ಸಂವಿಧಾನಕ್ಕೆ ವಿಧೇಯವಾಗಿರುವ, ರಾಷ್ಟ್ರೀಯ ಧ್ವಜವನ್ನು ಮಾನ್ಯ ಮಾಡುವ, ರಹಸ್ಯ ಚಟುವಟಿಕೆಗಳನ್ನು ವಿಸರ್ಜಿಸುವ, ಹಿಂಸಾ ಚಾರವನ್ನು ತ್ಯಜಿಸುವ ಒಂದು ಪ್ರಜಾ ಸತ್ತಾತ್ಮಕ, ಸಾಂಸ್ಕೃತಿಕ ಸಂಘಟನೆಯಾಗಿ ಕೆಲಸ ಮಾಡಲು ಒಂದು ಅವಕಾಶವನ್ನು ಕೊಡಬೇಕು ಎಂಬ ತೀರ್ಮಾನಕೆ ಭಾರತ ಸರ್ಕಾರ ಬಂದಿದೆ"

ವಚನ ಈಡೇರಿಸಿಲ್ಲ

ಈ ವಚನಗಳು, ರಾಜಿಗಳು ಕೇವಲ ಸಾರ್ವಜನಿಕ ತೋರಿಕೆಗೆ, ಕೇವಲ ನಿಷೇಧವನ್ನು ತಪ್ಪಿಸಿಕೊಳ್ಳಲು ಮಾತ್ರ ಎಂಬುದು ಈಗ ಎಲ್ಲರಿಗೂ ಗೊತ್ತಾಗಿದೆ. ಆರ್.ಎಸ್.ಎಸ್. ಸರಸಂಘಚಾಲಕ ನನ್ನು ಪ್ರಜಾಸತ್ತಾತ್ಮಕವಾಗಿ ಆರಿಸಲಾಗುವುದು ಎಂಬ ವಚನವನ್ನು ಪಾಲಿಸಿಲ್ಲ, ಸರಸಂಘಚಾಲಕ ಸಾಯುವವರೆಗೂ ಆ ಸ್ಥಾನದಲ್ಲಿರುತ್ತಾನೆ, ತನ್ನ ಉತ್ತರಾಧಿಕಾರಿಯನ್ನು ನೇಮಿಸುತ್ತಾನೆ.

ಇದೇ ರೀತಿ ಆರ್.ಎಸ್.ಎಸ್. ತನ್ನ ಕೋಮುವಾದಿ ಕಾರ್ಯಕ್ರಮವನ್ನು ಮುಂದುವರಿಸುತ್ತಲೇ ಇದೆ. ಭಾರತದಲ್ಲಿ ಒಂದು ಮತೀಯ ಫ್ಯಾಸಿಸ್ಟ್ ಮಾದರಿಯ ಹಿಂದೂ ರಾಷ್ಟ್ರ ಕಟ್ಟುವ ಅದರ ಅಂತಿಮ ಗುರಿಗಾಗಿ ಕೆಲಸ ಮಾಡುತ್ತಲೇ ಇದೆ. ಈ ಯೋಜನೆಯ ಸೈದ್ಧಾಂತಿಕ ಆಧಾರವನ್ನು ಅದೇ ಆರ್.ಎಸ್.ಎಸ್. ಮುಖಂಡ ಆ ನಿಷೇಧವನ್ನು ತೆಗೆಯುವ ಸರಿಯಾದ ಹತ್ತು ವರ್ಷಗಳ ಹಿಂದೆ ತನ್ನ ಪುಸ್ತಕ 'We or our Nationhood Defined' (ನಾವು ಅಥವಾ ನಮ್ಮ ರಾಷ್ಟ್ರೀಯತ್ವದ ನಿರ್ವಚನೆ) ರಲ್ಲಿ ವಿವರಿಸಿದ್ದರು. ಒಂದೆಡೆ ಒಂದು ಜಾತ್ಯಾತೀತ ಭಾರತೀಯ ಪ್ರಭುತ್ವದ ಪರಿಕಲ್ಪನೆಗೆ ವಿಧೇಯವಾಗಿರುವುದಾಗಿ ಭಾರತ ಸರಕಾರದೊಡನೆ ಅವರು ರಾಜಿ ಮಾಡಿಕೊಂಡರು. ಇನ್ನೊಂದೆಡೆಯಲ್ಲಿ ಈ ಜಾತ್ಯಾತೀತ ಪ್ರಭುತ್ವದ ಪರಿಕಲ್ಪನೆಗೆ ಸಂಪೂರ್ಣ ವಿರುದ್ಧವಾಗಿ ಧಾರ್ಮಿಕ ಅಲ್ಪಸಂಖ್ಯಾತರನ್ನು ದ್ವೇಷಿಸುವ ಒಂದು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವನ್ನು ಸ್ಥಾಪಿಸುವ ತಮ್ಮ ಆಶಯವನ್ನು ಸಾರ್ವಜನಿಕವಾಗಿಯೇ ಸಾರಿದರು. ಇಂತಹ ದಾಖಲೆ ಹೊಂದಿರುವ ಆರ್.ಎಸ್.ಎಸ್. ಗೆ ಕಾವಿಪಡೆಗೆ ವಂಚನೆಯೆಂಬುದು ಹೊಸದೇನಲ್ಲ.

☞ ಬ್ರಿಟಿಶ್ ಆಳ್ವಿಕೆಯ ಕಾಲದಲ್ಲಿ ಜೈಲುವಾಸ ಅಥವಾ ತಲೆಮರೆಸಿಕೊಂಡು ಚಟುವಟಿಕೆಗಳನ್ನು ನಡೆಸಿದ ಪರಂಪರೆಯೇನೂ ಇಲ್ಲದ ತನ್ನ ಕಾರ್ಯಕರ್ತರ ಒತ್ತಡ ತಾಳಲಾರದೆ ಆರ.ಎಸ್.ಎಸ್. ೧೯೪೯ ರ ಜುಲೈನಲ್ಲಿ ತನ್ನ ನಿಲುವುಗಳನ್ನೆಲ್ಲಾ ಬಿಟುಕೊಟ್ಟು ಸಂಪೂರ್ಣ ರಾಜಿ ಮಾಡಿಕೊಂಡಿತು. ಇದರಿಂದಾಗಿ ಜುಲೈ ೧೧, ೧೯೪೯ ರಂದು ಅದರ ಮೇಲಿನ ನಿಷೇಧವನ್ನು ತೆಗೆಯಲಾಯಿತು. ಆದರೆ ಅದು ಆಗ ನೀಡಿದ ವಚನಗಳನ್ನು ಈಡೇರಿಸಿಲ್ಲ.

ಒಂದು ಫ್ಯಾಸಿಸ್ಟ್ ಮಾದರಿಯ ಹಿಂದೂರಾಷ್ಟ್ರವನ್ನು ಸ್ಥಾಪಿಸುವ ತನ್ನ ದುಷ್ಟ ಅಜೆಂಡಾಕ್ಕೆ ಅನುಗುಣವಾಗಿ ಆರ್. ಎಸ್.ಎಸ್. ಒಂದು ರಾಜಕೀಯ ಅಕ್ಟೋಪಸ್‌ನ್ನು ಸೃಷ್ಟಿಸಿದೆ. ಅದೇ ಕಾವಿಪಡೆ ಅಥವಾ ಆರ್.ಎಸ್.ಎಸ್. ಹೇಳುವ ಸಂಘ ಪರಿವಾರ. ವಿಭಿನ್ನ ದಿಕ್ಕುಗಳಲ್ಲಿ ಭಯಾನಕ ವಿಷವನ್ನು ಹರಡಿ, ಭಾರತದ ಸಾಮಾಜಿಕ ಹಂದರದ ಐಕ್ಯತೆಯನ್ನು ಧ್ವಂಸ ಮಾಡುವ ಸಮಾನ ಗುರಿ ಹೊಂದಿರುವ ತನ್ನ ಕಬಂಧ ಬಾಹುಗಳನ್ನು ಅದು ಎಲ್ಲೆಡೆಗೆ ಹರಡಿದೆ. ಗೌರವಾನ್ವಿತವಾಗಿ ಕಾಣುವ ಅದರ ಮಾತುಗಳು ಮತ್ತು ಉಪದೇಶಗಳ ಹಿಂದೆ ಇರುವುದು ಇಂತಹ ದುಷ್ಟ ಕಾರ್ಯಕ್ರಮ - ಬೇರಾವ ಕಾರಣಕ್ಕಾಗಿ ಅಲ್ಲದಿದ್ದರೂ, ಈ ಒಂದೇ ಕಾರಣಕ್ಕಾಗಿ ಯಾದರೂ 1998ರ ಮಧ್ಯಾವಧಿ ಚುನಾ ವಣೆಗಳು ಭಾರತ ಮತ್ತು ಭಾರತೀಯ ಜನತೆಯ ಆಧುನಿಕ ಭಾರತದ ಜಾತ್ಯಾತೀತ ಪ್ರಜಾ ಸತ್ತಾತ್ಮಕ ತಳಪಾಯವನ್ನು ರಕ್ಷಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೋ ಅಥವಾ ಇಂತಹ ಕುಟಿಲ ಕೋಮುವಾದಿ ಶಕ್ತಿಗಳು ಭಾರತವನ್ನು ಕತ್ತಲ ಯುಗಕ್ಕೆ ಹಿಂದೊಯ್ಯುತ್ತದೋ ಎಂಬುದನ್ನು ನಿರ್ಧರಿಸಲಿದೆ.

□□□□

ಆರ್ಥಿಕ ಟಿಪ್ಪಣಿಗಳು

ಕೆ.ಎಸ್.ಮಣಿ

ಬಿತ್ತನೆ ಬೀಜಕ್ಕೂ ಈಗ ರಫ್ತಿನ ಭೂತದ ಕಾಟ

ಕೇಂದ್ರದ ಉಸ್ತುವಾರಿ ಸರ್ಕಾರ ಬರೀ ದಿನನಿತ್ಯದ ಆಡಳಿತಾತ್ಮಕ ನಿರ್ಧಾರಗಳನ್ನು ಮಾತ್ರ ಕೈಗೊಳ್ಳಬೇಕು. ನೀತಿಗಳನ್ನು ಬದಲಿಸುವ ದೀರ್ಘಕಾಲೀನ ಪರಿಣಾಮಗಳಿರುವ ನಿರ್ಧಾರಗಳನ್ನು ಅದು ತೆಗೆದುಕೊಳ್ಳಬಾರದು. ಆದರೆ ಸಂಯುಕ್ತರಂಗ ಸರ್ಕಾರದ ಹಣಕಾಸು ಅಂತಹ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ವಿಶ್ವ ವ್ಯಾಪಾರ ಸಂಸ್ಥೆಯೊಂದಿಗೆ ಭಾರತದ ಹಣಕಾಸು ವಲಯವನ್ನು ತೆರೆಯುವ ಒಪ್ಪಂದಕ್ಕೆ ಈ ಸರ್ಕಾರ ಸಹಿ ಹಾಕಿದೆ. ಈಗ ಮತ್ತೊಂದು ಮುಖ್ಯ ನಿರ್ಧಾರ ಭಾರತದಿಂದ ಬಿತ್ತನೆ ಬೀಜಗಳ ರಫ್ತಿಗೆ ಅನುಮತಿ ನೀಡಿರುವುದು ಈಗ ಕೇಂದ್ರ ಸರ್ಕಾರ ಎಲ್ಲ ತರಹದ ಬೆಳೆಗಳ ಬಿತ್ತನೆ ಬೀಜವನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುವುದಕ್ಕೆ ಅನುಮತಿ ನೀಡಿದೆ. ಈ ವರೆಗೆ ಬೀಜ ಪ್ರತಿಬಂಧಿತ ವಸ್ತುಗಳ ಪಟ್ಟಿಯಲ್ಲಿತ್ತು.

ಈಗ ರಫ್ತು ಮಾಡಲು ಲೈಸನ್ಸ್ ಬೇಕಾಗಿಲ್ಲ. ಯಾವುದೇ ರಫ್ತು ಬೇಡಿಕೆ ಪೂರೈಸುವ ಸಲುವಾಗಿ ಬೀಜದ ಉತ್ಪಾದನೆ ಮಾಡಿದ್ದಾದಲ್ಲಿ ಅದನ್ನು ಪೂರ್ತಿ ರಫ್ತು ಮಾಡಬಹುದು. ಇಲ್ಲವಾದಲ್ಲಿ ರಫ್ತು ಮಾಡಬಹುದಾದ ಬೀಜಗಳ ಗರಿಷ್ಠ ಪ್ರಮಾಣವನ್ನು ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ನಿರ್ಧರಿಸುತ್ತದೆ.

ಮುಖ್ಯವಾಗಿ ಇದರಿಂದ ಎರಡು ತರಹದ ದುಷ್ಪರಿಣಾಮಗಳು ನಮ್ಮ ದೇಶದ ಕೃಷಿಯ ಮೇಲೆ ಆಗುತ್ತವೆ. ಒಂದನೇಯದಾಗಿ ನಮ್ಮಲ್ಲಿನ ಅತ್ಯುತ್ತಮ ತಳಿಗಳ ಬೀಜಗಳಿಗೆ ಮಾತ್ರ ವಿದೇಶೀ ಬೇಡಿಕೆ ಇರುತ್ತದೆ ಹೊರತು ಎಲ್ಲ ತಳಿಗಳಿಗಲ್ಲ. ಉತ್ತಮವಾದದ್ದು ರಫ್ತಿಗೆ ಹೋಗುತ್ತದೆಂದಾರೆ ಭಾರತದ ರೈತನಿಗೆ ಅದು ಲಭ್ಯವಿಲ್ಲವೆಂದೇ ಅರ್ಥ. ಅವು ಲಭ್ಯವಿದ್ದರೂ ರಫ್ತು ಸಾಧ್ಯತೆಯಿಂದಾಗಿ ಅವುಗಳ ಬೆಲೆ ವಿಪರೀತವಾಗಿ ಏರುವುದರಿಂದ ನಮ್ಮ ರೈತ ಅದನ್ನು ಕೊಳ್ಳಲಾರ. ಇಲ್ಲಿ ನಾವು ಗಮನಿಸಬೇಕಾದ್ದು ಭಾರತದಲ್ಲಿ ಕೃಷಿಯ ಉತ್ಪಾದಕತೆ ಕಡಿಮೆಯಿರುವುದಕ್ಕೆ ಒಂದು ಬಹುಮುಖ್ಯ ಕಾರಣ. ಉತ್ತಮ ತಳಿಯ ಬೀಜಗಳು ಲಭ್ಯವಿಲ್ಲದೇ ಹೋಗಿರುವುದು.

ಎರಡನೇಯದಾಗಿ, ರಫ್ತಿಗಾಗಿಯೇ ಬೀಜೋತ್ಪಾದನೆ ಮಾಡುವ ಪ್ರವೃತ್ತಿ ಹೆಚ್ಚುತ್ತಾ ಹೋಗುತ್ತದೆ. ಹೀಗೆ ರಫ್ತಿಗಾಗಿ ಬೀಜೋತ್ಪಾದನೆ ಪ್ರವೃತ್ತಿ ಬೆಳೆದಾಗ ನಮ್ಮ ರೈತರಿಗಾಗಿ ಬಿಜೋತ್ಪಾದನೆ ಮಾಡುವವರ್‍ಯಾರು? ಸರ್ಕಾರೀ ಸಂಶೋಧನಾ ಕೇಂದ್ರಗಳು ಮತ್ತು ಬೀಜೋತ್ಪಾದನಾ ಕೇಂದ್ರಗಳಿಗೆ ತೀವ್ರವಾದ ಹಣಕಾಸಿನ ಕೊರತೆ. ಇನ್ನೂ ಹಲವು ತರಹದ ಆಡಳಿತಾತ್ಮಕ ಸಮಸ್ಯೆಗಳು. ಆದ್ದರಿಂದ ಅವು ಖಂಡಿತ ನಮ್ಮ ರೈತರ ಉತ್ತಮ ಬೀಜಗಳ ಅವಶ್ಯಕತೆಗಳನ್ನು ಪೂರೈಸಲಾರವು. ಕಂಪನಿಗಳು ಬೀಜೋತ್ಪಾದನೆಯಲ್ಲಿ ತೊಡಗುವುದಾದರೆ ಬಿಜಗಳ ಬೆಲೆಗಳೂ ಏರಲೇಬೇಕು. ಅದಕ್ಕೆ ತಕ್ಕಂತೆ ರೈತರ ಫಸಲಿನ ಬೆಲೆ ಏರುವುದಿಲ್ಲ, ಹಾಗೆ ಏರಿದರೆ ಜನಸಾಮಾನ್ಯನಿಗೆ ಉಪವಾಸವೇ ಗತಿ.

ಇಂತಹ ಪರಿಸ್ಥಿತಿ ಉಂಟಾದರೆ ನಮ್ಮ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ರೈತರು ಕಂಗಾಲಾಗಬೇಕಾಗುತ್ತದೆ. ಶ್ರೀಮಂತ ರೈತರಿಗೆ ಜಮೀನುದಾರರಿಗೆ ಲಾಭವಾಗಬಹುದು. 2000 ದ ಇಸವಿಯ ವೇಳೆಗೆ 225 ದಶಲಕ್ಷ ಟನ್ನುಗಳಷ್ಟು ಆಹಾರ ಧಾನ್ಯವನ್ನು ನಾವು ಬೆಳೆಯಬೇಕಾಗಿರುವಾಗ ದೇಶದ ಬಹುತೇಕ ಭೂಮಿಯನ್ನು ಸಣ್ಣ ಮತ್ತು ಅತಿಸಣ್ಣ ರೈತರೇ ಸಾಗುವಳಿ ಮಾಡುತ್ತಿರುವಾಗ ಈ ಸಾಧನೆಯನ್ನು ಬಹುತೇಕ ಈ ಮೂಲಕವೇ ಸಾಧಿಸಬೇಕಲ್ಲವೇ! ಅವರಿಗೇ ಉತ್ತಮ ತಂತ್ರಜ್ಞಾನ ಎಟುಕದೇ ಹೋದರೆ ಸಾಧನೆಯಾಗುವುದೇ ಇಲ್ಲ, ಸಣ್ಣ ಅತಿ ಸಣ್ಣ ಮತ್ತು ಸಣ್ಣ ರೈತರು ಪೂರ್ತಿ ದಿವಾಳಿಯೆದ್ದು ಹೋಗುವ ಪರಿಸ್ಥಿತಿ ಬರಬಹುದು. ಇದರಿಂದ ದೇಶದಲ್ಲಿ ಎಂತಹ ಅಲ್ಲೋಲ ಕಲ್ಲೋಲ ಉಂಟಾಗಬಹುದು? ನೀವೇ ಊಹಿಸಿ.

ಕುಸಿದ ಕೃಷಿ ರಫ್ತು

ಕೇಂದ್ರ ಸರ್ಕಾರ ಬೀಜಗಳ ರಫ್ತನ್ನು ಮುಕ್ತಗೊಳಿಸಿರುವುದಕ್ಕೆ ಇದೂ ಒಂದೂ ಕಾರಣವಿರಬಹುದು. ನಿಮ್ಮ ಒಟ್ಟಾರೆ ರಫ್ತಿನಲ್ಲಿ ಕೃಷಿಯ ರಫ್ತಿಗೆ ವಿಶೇಷ ಸ್ಥಾನವಿದೆ. ನಾವು ಬೆಳೆವ ಕಾಫಿ, ಚಹ, ಸಾಂಬಾರ, ಜಿನಸುಗಳು ಅನನ್ಯವಾದವು. ಜಗತ್ತಿನ ಬಹುತೇಕ ಪ್ರದೇಶಗಳಲ್ಲಿ ಬೆಳೆಯುವಂತಹವಲ್ಲ. ಆದ್ದರಿಂದಲೇ ಈ ಅನನ್ಯತೆ. ಈ ಬೆಳೆಗಳು ಕೃಷಿ ತಂತ್ರಜ್ಞಾನದಲ್ಲಿ ನಾವು ಅಂತಹ ಸುಧಾರಣೆ, ಮಾಡಿಲ್ಲವಾದರೂ ರಫ್ತು ಬೇಡಿಕೆಯಿರುವುದು ಈ ಕಾರಣಕ್ಕಾಗಿ ಮಾತ್ರ. ಸಾಂಪ್ರಾದಾಯಿಕ ರಫ್ತು ಸರಕುಗಳು ಇವು. ದೇಶಕ್ಕೆ ವಿದೇಶೀ ವಿನಿಮಯ ತಂದುಕೊಡುವ ಸರಕುಗಳು.

ಆದರೆ ಈ ಸಾರಿ ಕೃಷಿ ರಫ್ತಿನಲ್ಲಿ ಬೆಳವಣಿಗೆ ಆಗುವ ಬದಲು ರಫ್ತಿನ ಪ್ರಮಾಣ ಕುಸಿದಿದೆ. ಹಿಂದಿನ ವರ್ಷಕ್ಕಿಂತ ಅದರ ಪ್ರಮಾಣ ಈ ಸಾರಿ ಕಡಿಮೆಯಾಗಿದೆ. ಈ ಕುಸಿತ ಶೇ. 8.11 ರಷ್ಟು. 1997-98 ರ ಸಾಲಿನ ಮೊದಲರ್ಧದಲ್ಲಿ ಕಂಡುಬಂದ ಕುಸಿತ ಇದು. ಉತ್ತಮ ಮಳೆ ಬೆಳೆ ಆಗಿರುವ ವರ್ಷದಲ್ಲಿ ಕಂಡ ಕುಸಿತ ಇದು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಕಳೆದ ವರ್ಷದ ಇದೇ ಅವಧಿಯಲ್ಲಿ ರಫ್ತಿನ ಪ್ರಮಾಣ 11583.20 ಕೋಟಿ ರೂಪಾಯಿಗಳಷ್ಟಿದ್ದದ್ದು ಈ ವರ್ಷ 10643.80 ಕೋಟಿ ರೂಪಾಯಿಗಳಿಗೆ ಕುಸಿದಿದೆ.

ಉದಾರೀಕರಣವಾದಿಗಳು ಸರ್ಕಾರ ಕೃಷಿ ಉತ್ಪನ್ನಗಳ ರಫ್ತಿನ ಮೇಲೆ ಹೇರಿರುವ ನಿರ್ಬಂಧಗಳಿಂದಾಗಿಯೇ ಈ ಕುಸಿತ ಎನ್ನುತ್ತಿದ್ದಾರೆ. ಬಾಸುಮತಿಯೇತರ ಅಕ್ಕಿಯ ರಫ್ತನ್ನು ಮುಕ್ತಗೊಳಿಸಿದ್ದರೆ ರಫ್ತು ಹೆಚ್ಚಾಗುತ್ತಿತ್ತಂತೆ ಅಲ್ಲದೆ ಡಾಲರಿಗೆದುರು ರೂಪಾಯಿಯ ಬೆಲೆ ಪ್ರಬಲವಾಗಿದ್ದುದರಿಂದ ಈ ಕುಸಿತ ಉಂಟಾಯಿತು ಎಂದು ಅವರಗಳ ಅಂಬೋಣ. ಅಂದರೆ ನಮ್ಮ ಅಕ್ಕಿಯನ್ನು ಅಗ್ಗಕ್ಕೆ ಮಾರಿದ್ದರೆ ರಫ್ತು ಹೆಚ್ಚಾಗುತ್ತಿತ್ತು ಎಂದು ಅವರ ಮಾತಿನ ಅರ್ಥ. ಹೀಗೆ ಅಗ್ಗಕ್ಕೆ ನಮ್ಮ ಅಕ್ಕಿಯನ್ನು ರಫ್ತು ಮಾಡಿದರೆ ದೇಶದ ಜನರ ಅವಶ್ಯಕತೆಯನ್ನು ಹೇಗೆ ಪೂರೈಸಬೇಕು. ಉದಾರೀಕರಣ ಏಕಮುಖದ ಕಾಳಜಿಯನ್ನು ಮಾತ್ರ ಹೊಂದಿರುವಂತಹದ್ದು ಎಂಬುದು ಸ್ಪಷ್ಟವಲ್ಲವೆ?

ರಫ್ತುದಾರರ ಕುತಂತ್ರ

ರೂಪಾಯಿಯ ಬೆಲೆ ಕುಸಿಯುತ್ತಿರುವಂತೆ ರಫ್ತುದಾರರು ಈ ಕುತಂತ್ರ ಹೂಡಿಯೇ ಹುಡುತ್ತಾರೆ. ರಫ್ತು ಹಣ ದೇಶದೊಳಕ್ಕೆ ಬರುವುದನ್ನು ಮುಂದೂಡುತ್ತಾರೆ.

ಒಂದು ಡಾಲರಿಗೆ 36 ರೂಪಾಯಿಯಿರುವಾಗ ರಫ್ತು ಮಾಡಿ ಡಾಲರಿನ ಬೆಲೆ 38ಕ್ಕೇರಿದಾಗ ಡಾಲರುಗಳ ರೂಪದಲ್ಲಿ ರಫ್ತಿನ ಬೆಲೆ ಸಂದಾಯವಾದರೆ ಅವರಿಗೆ ಲಾಭವಲ್ಲವೆ? ಹೌದು. ಆದ್ದರಿಂದಲೇ ಅವರು ಈ ಹಣ ಸಂದಾಯವಾಗುವುದನ್ನು ಮುಂದೂಡುತ್ತಾರೆ.

ಕೊಂಡಾತನಿಗೆ ಇದು ಅನುಕೂಲ. ರಫ್ತುದಾರನಿಗೂ ಲಾಭವೇ. ಆದರೆ ದೇಶಕ್ಕೆ ಇದರಿಂದ ಹಾನಿ.

ಈಗ ರೂಪಾಯಿಯ ಬೆಲೆ ಡಾಲರಿಗೆದುರು ಕುಸಿಯುತ್ತಿರುವಾಗ ಇಂತಹ ಕುತಂತ್ರವನ್ನು ರಫ್ತುದಾರರು ಮಾಡುತ್ತಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಬಾಕಿಯಾದ ರಫ್ತು ಹುಂಡಿಗಳ ಸಾಲದ ಮೇಲಿನ ಬಡ್ಡಿಯನ್ನು ಏರಿಸಿದೆ. (ರಫ್ತು ಸಾಲದ ಮೇಲೆ ರಿಯಾಯಿತಿ ದರದ ಬಡ್ಡಿಯಿರುತ್ತದೆ)

ಈ ಆಜ್ಞೆ ಬಂದ ಕೂಡಲೇ ರಫ್ತುದಾರರು ಇದರಿಂದ ತಮಗೆ ಹೊಡೆತ ಬೀಳುತ್ತದೆಂದು ಬೊಬ್ಬೆ ಹೊಡೆದಿದ್ದಾರೆ. ಈ ಬೊಬ್ಬೆಗೆ ಕಿವಿ ನೀಡದ ಭಾರತೀಯ ರಿಸರ್ವ್ ಬ್ಯಾಂಕ್ ವಿಷಯವನ್ನು ಮತ್ತೆ ಪರಿಶೀಲಿಸುವುದಾಗಿಯೂ ಹೇಳಿಕೆ ನೀಡಿದೆ.

ಈಗ ರೂಪಾಯಿಯ ಬೆಲೆ ಕುಸಿಯುವುದನ್ನು ತಡೆಯುವ ಪ್ರಯತ್ನದಲ್ಲಿ ವಿದೇಶೀ ವಿನಿಮಯದ ಶಿಲ್ಕು ಸಹ ಕಡಿಮೆಯಾಗಿದೆಯಂತೆ.

ಉದಾರೀಕರಣ ತರುವ ಕಷ್ಟಗಳು ಸಾಲು ಸಾಲಾಗಿ ಕೂಗುತ್ತಿವೆಯಲ್ಲವೆ ಈಗ?

ವಿದೇಶಿ ಹಣ ಹೂಡಿಕೆಯೂ ಕಡಿಮೆ

ರಫ್ತು ಕಡಿಮೆಯಾಗಿರುವುದು ಆಗಲೇ ಗೊತ್ತಿರುವ ವಿಷಯ. ಔದ್ಯಮಿಕ ಬೆಳವಣಿಗೆಯ ದರವೂ ಕಡಿಮೆಯಾಗಿದೆ. ಹಾಗೆಯೇ ವಿದೇಶಿ ನೇರ ಹೂಡಿಕೆಯೂ ಕಡಿಮೆಯಾಗಿದೆ ಎಂಬುದು ಈಗ ಗೊತ್ತಾಗಿದೆ. ಇವೆಲ್ಲ ಒಂದಕ್ಕೊಂದು ತಳುಕು ಹಾಕಿಕೊಂಡಿರುವಂತಹವೆ. ಉದಾರೀಕರಣದಿಂದ ಆಗುತ್ತದೆ ಎಂದು ನಿರೀಕ್ಷಿಸಿದ ಲಾಭಗಳೆಲ್ಲ ಆಗದೇ ಇರುವುದು ಸ್ಪಷ್ಟ. ಆದರೆ ಉದಾರೀಕರಣವಾದಿಗಳು ಈಗ ಈ ಎಲ್ಲ ವಿಷಯಗಳಿಗೂ ಕಾರಣಗಳನ್ನು ಹುಡುಕುತ್ತಿದ್ದಾರೆ.

ಮತ್ತೊಂದು ಹಣಕಾಸು ಕಂಪನಿ ಹಗರಣ

ಉದಾರೀಕರಣದ ಆಗಮನವಾದ ನಂತರ ಹಣಕಾಸು ಕಂಪನಿಗಳ ಹಗರಣ ಸಾಮಾನ್ಯವಾದ ಮಾತಾಗಿದೆ. ನಮ್ಮ ಪಕ್ಕದ ರಾಜ್ಯವಾದ ತಮಿಳು ನಾಡಿನಲ್ಲಿ ಹಲವು ಕಂಪನಿಗಳು ಠೇವಣಿದಾರರಿಗೆ ಮೋಸ ಮಾಡಿದರು. ಅನಂತರ ಸಿ.ಆರ್.ಬಿ ಎಂಬ ಕಂಪನಿಯ ದೊಡ್ಡ ಹಗರಣವಾಯಿತು. ಸುದ್ದಿಯಾಗದೇ ಉಳಿದ ಹಗರಣಗಳು ಎಷ್ಟೋ ಗೊತ್ತಿಲ್ಲ. ಹಾಫ್‌ಲ್ಯಾಂಡ್ ಫೈನಾನ್ಶಿಯಲ್ ಸರ್ವಿಸಸ್ ಎಂಬ ಹಣಕಾಸಿನ ಕಂಪನಿಯದು ಇತ್ತೀಚಿಗಿನ ಹಗರಣ. ಈ ಕಂಪನಿಯ ಅಧ್ಯಕ್ಷ ಬಿ.ಬಿ. ಶರ್ಮಾ ಎಂಬಾತ ದೆಹಲಿಯ ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರೀಸ್‌ನ ಸಭಾಂಗಣದಲ್ಲಿ ಭೀಕರ ನಾಟಕವನ್ನೇ ಮಾಡಿದನಂತೆ. ಈತ ತನ್ನ ಕಂಪನಿಯ ಠೇವಣಿದಾರರನ್ನು ಕರೆದು ತನ್ನ ಕಂಪನಿಯಲ್ಲಿ ನಡೆದಿರುವ ಹಗರಣದ ಬಗ್ಗೆ ಪೂರ್ತಿಯಾಗಿ ಒಪ್ಪಿಕೊಂಡು ತಾನು ಜೈಲಿಗೆ ಹೋಗುವುದೂ ಖಂಡಿತವೆಂದು ಒಪ್ಪಿಕೊಂಡನಂತೆ. ಇದಲ್ಲದೆ ಆತ ನಾನು ಜೈಲಿಗೆ ಹೋದರೆ ಠೇವಣಿದಾರರಿಗೆ ಒಂದು ಕವಡೆಯೂ ಸಿಗದೇ ಹೋಗಬಹುದಾದ್ದರಿಂದ ನನ್ನೊಡನೆ ಸಹಕರಿಸಿ ತಾನು ನಿಮಗೆ ನಿಮ್ಮ ಹಣದ ಒಂದು ಭಾಗವಾದರೂ ಸಿಗುವಂತೆ ಮಾಡುತ್ತೇವೆ. ಆದ್ದರಿಂದ ನಾನು ಜೈಲಿಗೆ ಹೋಗದಂತೆ ನೋಡಿಕೊಳ್ಳಿ ಎಂದು ಠೇವಣಿದಾರರನ್ನೇ ಕೇಳಿಕೊಂಡನಂತೆ.

ಇದು ಸಣ್ಣ ಕಂಪನಿಯೇನೂ ಅಲ್ಲ. ದೆಹಲಿಯೊಂದರಲ್ಲೇ 8000 ಠೇವಣಿದಾರರಿದ್ದಾರಂತೆ. ಸುಮಾರು 70 ಕೋಟಿ ರೂಪಾಯಿಗಳ ಠೇವಣಿಯಿದೆಯಂತೆ. ಈ ಕಂಪನಿ ಕಳೆದ ಎಂಟು ವರ್ಷಗಳಿಂದ ಶೇ 24 ರಷ್ಟು ವಾರ್ಷಿಕ ಪ್ರತಿಫಲ ನೀಡುವ ಭರವಸೆಯ ಮೇಲೆ ಠೇವಣಿ ಸಂಗ್ರಹಿಸಿತ್ತಂತೆ. ಈಗ ಕಂಪನಿಯಲ್ಲಿನ ಅಪರಾ-ತಪರಾ ಬೆಳಕಿಗೆ ಬಂದಿರುವುದರಿಂದ ಈ ಅಧ್ಯಕ್ಷನ ಇಂತಹ ಬೇಡಿಕೆ.

ಹೇಗಿದೆ ಈ ಕಂಪನಿಯ ಅಧ್ಯಕ್ಷನ ಕರಾಮತ್ತು! ಇದಲ್ಲವೆ ಉದಾರೀಕರಣದ ಕೊಡುಗೆ?

ಐಕ್ಯರಂಗ ಕಂಡಂತೆ ಕರ್ನಾಟಕ ಕಳೆದ ಮೂರು ವರ್ಷಗಳಲ್ಲಿ

15ನೇ ರಾಜ್ಯ ಸಮ್ಮೇಳನದ ನಂತರ, ಈವರೆಗೆ ಸಿಪಿಐ(ಎಂ) ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ದುಡಿಯುವ ಜನರ ಸಮಸ್ಯೆಗಳಿಗೆ ಸ್ಪಂದಿಸಿವೆ, ಹೋರಾಟ ಮಾಡಿವೆ, ರಾಜ್ಯದ ರಾಜಕೀಯ ವಿದ್ಯಮಾನಗಳಲ್ಲಿ ಮಧ್ಯ ಪ್ರವೇಶ ಮಾಡಿವೆ. ಐಕ್ಯರಂಗ ಇಂತಹ ಚಳುವಳಿ, ಮಧ್ಯಪ್ರವೇಶಗಳ ಬಗ್ಗೆ ವರದಿ ಮಾಡುತ್ತಾ ಬಂದಿದೆ. ರೈತರ, ಕಾರ್ಮಿಕರ ಚಳುವಳಿಗಳು, ವಿದ್ಯಾರ್ಥಿ-ಯುವಜನರ ಹೋರಾಟ, ಸಾಂಸ್ಕೃತಿಕ ಕ್ಷೇತ್ರ ಮತ್ತು ರಾಜಕೀಯ ಬೆಳವಣಿಗೆಗಳಲ್ಲಿ ಪಕ್ಷದ ಪಾತ್ರ, ಸ್ಥಳೀಯ ಚುನಾವಣೆಗಳು, ರಾಜ್ಯದ ವಿದ್ಯಮಾನಗಳಲ್ಲಿ ಪಕ್ಷದ ಮಧ್ಯಪ್ರವೇಶ - ಐಕ್ಯರಂಗದಲ್ಲಿ ದಾಖಲಾದದ್ದರಲ್ಲಿ ಆಯ್ದ ಗಮನಾರ್ಹವಾದದ್ದನ್ನು ಇಲ್ಲಿ ಕೊಡಲಾಗಿದೆ.16 ನೇ ಸಮ್ಮೇಳನ ಈ ಹೋರಾಟಗಳನ್ನು ಕೂಲಂಕುಷ ವಿಮರ್ಶೆ ಮಾಡಲಿದೆ. ರಾಜ್ಯದ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ವಿಶ್ಲೇಷಣೆ ನಡೆಸಿ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಲಿದೆ.

ರಾಜಕೀಯ, ಇತರ ವಿದ್ಯಮಾನಗಳಲ್ಲಿ ಪಕ್ಷದ ಮಧ್ಯಪ್ರವೇಶ

ಐಕ್ಯರಂಗ ಮಾರ್ಚ್ 19 1995
ರಾಜ್ಯಸಮಿತಿ ಹೇಳಿಕೆ - ಮಹಾಚೈತ್ರ ಧರ್ಮಾಂಧತೆಗೆ ಸಾಹಿತ್ಯ ಕೃತಿಗಳು ಬಲಿಯಾಗಲು ಬಿಡಬಾರದು.

ಏಪ್ರಿಲ್ 2, 95
ವಿದ್ಯುತ್, ನೀರಾವರಿ, ಕುಡಿಯುವ ನೀರು, ಉದ್ಯೋಗ, ಭೂಮಿ, ಕೂಲಿ, ವಸತಿಯ ಪ್ರಶ್ನೆ ಬಗ್ಗೆ ಸಮಾವೇಶದಲ್ಲಿ ಚರ್ಚೆ -ಜನರ ಜ್ವಲಂತ ಪ್ರಶ್ನೆಗಳ ಪರಿಹಾರಕ್ಕಾಗಿ ಹೋರಾಟಕೆ ರಾಜ್ಯ ಸಮಿತಿ ಕರೆ.
. ದುಡಿಯುವ ಜನರಿಗೆ ನಿರಾಸೆ ತಂದಿರುವ 245 ಕೋಟಿ ರೂಪಾಯಿ ಕರಭಾರದ ಜನತಾ ಸರ್ಕಾರದ ಬಜೆಟ್

ಜೂನ್ 18, 95
. ಗೆಲುವು ನೀಡಿದ ಜನತೆಗೆ, ಹಾಲಿನದರ ಬೆಲೆ, ನೀರಿನ ದರ ಏರಿಕೆಯ ಉಡುಗೊರೆ!
- ಮಣ್ಣಿನ ಮಗ ದೇವೇಗೌಡರ ಆಡಳಿತ ಎತ್ತಸಾಗಿದೆ?

ಜುಲೈ 13, 95
. ಕೊಜೆಂಟ್ರಿಕ್ಸ್ ಯೋಜನೆ ರದ್ದಾಗಬೇಕು- ಆಗಸ್ಟ 14 ರಂದು ರಾಜ್ಯಾದ್ಯಂತ ಪಿಕೆಟಿಂಗ್‌ಗೆ ಕರೆ

ಜನವರಿ 8-14,96
ಸಂಧಾನದ ಮೂಲಕ ಸಮಾಧಾನದ ಹಾದಿಯಲ್ಲಿ ಇತ್ಯರ್ಥದತ್ತ ಸಾಗಲು ಎರಡೂ ರಾಜ್ಯಗಳ ಜನತೆಗೆ ಮನವಿ - ಕಾವೇರಿ ಜಲವಿವಾದ ಒಂದು ನಿರ್ಣಾಯಕ ಘಟ್ಟ ತಲುಪಿದೆ.

ಜನವರಿ 15-21, 96
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ.ಆರ್. ಪಿ.ಎಲ್ ಪೈಪ್ ಲೈನ್ ಹಾಕುವುದನ್ನು ತಡೆಯಲು ನಡೆದ ಮೀನುಗಾರರ ಚಳುವಳಿಯ ಹಿನ್ನೆಲೆಯಲ್ಲಿ ಕೈಗಾರಿಕಾಭಿವೃದ್ಧಿ, ಪರಿಸರ ಮಾಲಿನ್ಯ ಮತ್ತು ಎಂ.ಆರ್.ಪಿ.ಎಲ್ ಪ್ರಶ್ನೆ

ಫೆಬ್ರವರಿ 5-11, 96
ಕೇಂದ್ರದ ಹೊಸ ಆರ್ಥಿಕ ನೀತಿ ವಿರುದ್ಧ ಪ್ರರ್ಯಾಯ ನೀತಿ ರೂಪಿಸಲು ರಾಜ್ಯಾದ್ಯಂತ ಸಿಪಿಐ(ಎಂ) ನಡೆಸಿದ ಪ್ರಚಾರ-ಪ್ರಕ್ಷೋಭೆಯ ಅಂತಿಮ ಕಾರ್ಯಕ್ರಮವಾಗಿ ಹವಾಲಾ ಸರಕಾರ ಮಂತ್ರಿಗಳು ಹೋಗಬೇಕು ಎಂದು ಒತ್ತಾಯಿಸಿದ ಬೃಹತ್ ರ್‍ಯಾಲಿ.

ಫೆಬ್ರವರಿ 12-18, 96
ಕೆ..ಎಫ್ ಸಿ. ಮೇಲೆ ನಂಜುಂಡಸ್ವಾಮಿ ರೈತ ಸಂಘದ ಕಾರ್ಯಕರ್ತರ ದಾಳಿ ಮೇಲೆ ಹೇಳಿಕೆ
ವ್ಯೆಯಕ್ತಿಕ ದಾಂಧಲೆಗಿಂತ ಜನಸಾಮಾನ್ಯರ ಚಳುವಳಿಯಾಗಲಿ
. ಕೊಡಗು ರಾಜ್ಯಕ್ಕೆ ಬಿಜೆಪಿ ಬೆಂಬಲ-ಸೈದ್ಧಾಂತಿಕ ಗೊಂದಲವೇ ಅಥವಾ ಅಧಿಕಾರ ರಾಜಕೀಯವೇ?
ಬೆಂಗಳೂರಲ್ಲಿ ನಡೆದ ಜನತಾ ಅದಾಲತ್‌ನ ತೀರ್ಪು-ಹವಾಲಾ ಅಪರಾಧಿಗಳಿಗೆ ಜೀವಾವಧಿ ಸಜೆ!

ಏಪ್ರಿಲ್ 22-28, 96
ಮೂರನೇ ಪರ್ಯಾಯ ರೂಪಿಸುವಲ್ಲಿ ಬೀದರ್ ಸಿಪಿಐ(ಎಂ) ಅಭ್ಯರ್ಥಿ ದೃಢ ನಿರ್ಧಾರ-ಬೀದರ್ ಲೋಕ ಸಭಾ ಕ್ಷೇತ್ರ ಮತ್ತು ಕಾಮ್ರೇಡ್ ಮಾರುತಿ ಮಾನ್ಪಡೆ.

ಅಕ್ಟೋಬರ್ 28- ನವೆಂಬರ್ 3, 96
ಸ್ಪರ್ಧಿಸಿದ್ದ ಎಲ್ಲಾ 9 ಸ್ಥಾನಗಳಲ್ಲಿ ಜಯ, ಜನತಾದಳ-ಸಿಪಿಐ(ಎಂ) ಮೈತ್ರಿಕೂಟಕೆ ಸ್ಪಷ್ಟ ಬಹುಮತ-ಸಿಪಿಐ(ಎಂ) ಮಡಿಲಿಗೆ ಕುಂದಾಪುರ ಪುರಸಭೆ

ನವೆಂಬರ್ 18-24, 96
ಕುಂದಾಪುರದಲ್ಲಿ ಪುರಸಭಾ ಅಧ್ಯಕ್ಷರಾಗಿ ಕಾಂ. ವಿ. ನರಸಿಂಹ

ಡಿ. 2-8, 96
ಸಾರಿಗೆ ಸಂಸ್ಥೆಯ ವಿಭಜನೆ ದಕ್ಷತೆಗಾಗಿಯೋ ಅಥವಾ ಖಾಸಗೀಕರಣಕಾಗಿಯೋ?-ಕೆ.ಎಸ್.ಆರ್.ಟಿ.ಸಿ ವಿಭಜನೆಗೆ ಸಿಪಿಐ(ಎಂ) ವಿರೋಧ.
ಪ್ರತಿಷ್ಠಿತ 2ನೇ ವಾರ್ಡಿನಿಂದ ಜಯ-ಬಂಟ್ವಾಳ ಸಿಪಿಐ(ಎಂ)ನ ಏಕಾಂಗಿ ಹೋರಾಟಕ್ಕೆ ಸಂದ ಜಯ

ಮೇ26, ಜೂನ್ 2, 97
ದುಡಿಯುವ ಜನರ ಸಿದ್ಧಾಂತದ ಮಾರ್ಗದರ್ಶನದಲ್ಲಿ ಸ್ಪರ್ಧಿಸಿದ ಎರಡೂ ಸ್ಥಾನ-ಸಿಂಧನೂರು ಪುರಸಭೆಯಲ್ಲಿ ಸಿಪಿಐ(ಎಂ) ಸದಸ್ಯರು

ಜುಲೈ 7-13, 97
ಜುಲೈ 15 ರಂದು ರಾಜ್ಯ ವ್ಯಾಪಿ ಪ್ರತಿಭಟನೆಗೆ ಸಿಪಿಐ(ಎಂ) ಕರೆ-. ಜನಸಾಮಾನ್ಯರಿಗೆ ವಿದ್ಯುತ್ ದರ ಏರಿಕೆಯ ಹೊರೆ


ಆಗಸ್ಟ 4-10, 97
ಕೇಂದ್ರ, ಸರ್ಕಾರದ-ಜನವಿರೋಧಿ ನೀತಿಗಳ ವಿರುದ್ಧ ರಾಷ್ಟ್ರೀಯ ಪ್ರಚಾರಾಂದೋಲನದ ಅಂತಿಮ ಭಾಗವಾಗಿ -. ಬೆಂಗಳೂರಲ್ಲಿ ಜುಲೈ 25 ರಂದು ಸಿಪಿಐ(ಎಂ) ಬೃಹತ್ ರ್‍ಯಾಲಿ

ಸೆ. 15-21, 97
. ಮತ್ತೊಮ್ಮೆ ಪೆಟ್ರೋಲ್, ಡಿಸೆಲ್ ಅಡುಗೆ ಅನಿಲದ ಬೆಲೆಗಳನ್ನು ಏರಿಸಿರುವುದರ ವಿರುದ್ಧ ಪ್ರತಿಭಟನೆಗೆ ಕರೆ.

ಸೆ. 29-ಅಕ್ಟೋಬರ್ 5, 97
ಎಂ.ಪಿ.ಎಂ ಕಾರ್ಖಾನೆಯಲ್ಲಿ ಎಷ್ಟೊಂದು ಅವ್ಯವಹಾರಗಳು - ಸಿಓಡಿ ತನಿಖೆಗೆ ಕಾಂ. ಸೂರಿ ಆಗ್ರಹ

ನ. 17-23, 97
ದಕ್ಷಿಣ ಕನ್ನಡ ಜಿಲ್ಲಾ ಖಾಸಗಿ ಬಸ್ಸು ದರ ಏರಿಕೆಯ ವಿರುದ್ಧ ಯಶಸ್ವಿ ಚಳುವಳಿ

ನ. 10,16,97.
ಬೆಂಗಳೂರಲ್ಲಿ ಚೆ ಗುವಾರ ಪುತ್ರಿಗೆ ಭಾರಿ ಸ್ವಾಗತ
. ಅಲಿಡಾ ಚೆ ಗುವಾರರಿಗೆ ಭಾವನಾತ್ಮಕ ಸ್ವಾಗತ, ವೀರ ಕ್ಯೂಬಾದ ಬಗೆಗಿನ ಮೆಚ್ಚುಗೆಯ ಅಭಿವ್ಯಕ್ತಿ.



ಕಾರ್ಮಿಕರ ಹೋರಾಟಗಳು........

ಐಕ್ಯರಂಗ ಏಪ್ರಿಲ್ 2, 95
ಮಾರ್ಚ್ 21 ರಂದು ರಾಜ್ಯದ ವಿವಿಧೆಡೆಗಳಿಂದ ಬಂದ ಸಾವಿರಾರು ಕೈಮಗ್ಗ ನೇಕಾರರ ಬೃಹತ್ ಬೆಂಗಳೂರು ಚಲೋ

ಏಪ್ರಿಲ್ 9, 95
ಮಾರ್ಚ್ 21 ರಿಂದ ಒಂದು ವಾರ ಮುಷ ರ ನಡೆಸಿದ ಬೆಂಗಳೂರು ನಗರದ ಒಂದು ಲಕ್ಷ ಇಪ್ಪತ್ತು ಸಾವಿರ ಪವರ್‌ಲೂಂ ಕಾರ್ಮಿಕರ ಯಶಸ್ವಿ ಹೋರಾಟ

ಮೇ7, 95
ಕನಿಷ್ಠ ಕೂಲಿಯ ಪರಿಷ ರಣೆ, ಕನಿಷ್ಠ ಕೂಲಿ ಜಾರಿ ಇತ್ಯಾದಿಗಳಿಗೆ ಒತ್ತಾಯಿಸಿ ಮೇ 2 ರಿಂದ ಬೀಡಿ ಕಾರ್ಮಿಕರ ಉಪವಾಸ ಸತ್ಯಾಗ್ರಹ

.ಮೇ 21, 95
ಮೇ 4 ರಂದೆ ಸಿದ್ಧವಾಗಿ ಇಲಾಖೆಯ ಅಧಿಕಾರಿಗಳ ಕುತಂತ್ರದಿಂದ ಹೊರಬರದೆ, ಮೇ 10 ರಂದು ಮುಖ್ಯಮಂತ್ರಿಗಳ ನಿವಾಸದ ಮುಂದೆ ಧರಣಿ ಹಾಗೂ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಗಳ ಕಛೇರಿ ಮುಂದೆ ಪಿಕೆಟಿಂಗ್ ನಂತರ .ಕೊನೆಗೂ ಬೀಡಿ ಕಾರ್ಮಿಕರ ಕೂಲಿಯ ಕರಡು ಹೊರಬಂತು!

ಜೂನ್ 25, 95
ರಾಜ್ಯಾದ್ಯಂತ ಸಿಐಟಿಯು ಬೆಳ್ಳಿಹಬ್ಬ ಆಚರಣೆ ಮೇ 30

ಡಿಸೆಂಬರ್ 17,95
ಡಿಸೆಂಬರ್ 4 ರಂದು ಬೆಂಗಳೂರಿನ ಎ.ಡಿ.ಎ ರಂಗಮಂದಿರದಲ್ಲಿ ಸೇರಿದ್ದ ಅಸಂಘಟಿತ ಕಾರ್ಮಿಕರ ಸಮಾವೇಶದ ಕರೆ -ಕರ್ನಾಟಕದಾದ್ಯಂತ ಅಸಂಘಟಿತ ಕಾರ್ಮಿಕರ ತೀವ್ರ ಹೋರಾಟ

ಡಿಸೆಂಬರ್ 31, 95
ರಾಜ್ಯಾದ್ಯಂತ ಒಂದು ವಾರದ ಧರಣಿ, ಮೆರವಣಿಗೆ, ಪಿಕೆಟಿಂಗ್, ಮುಷ ರದ ನಂತರ ಡಿಸೆಂಬರ್ 18 ರಂದು ಬೆಂಗಳೂರಿನಲ್ಲಿ ಅಸಂಘಟಿತ ಒಂದು ವಾರದ ಧರಣಿ, ಮೆರವಣಿಗೆ, ಪಿಕೆಟಿಂಗ್, ಮುಷ್ಕರದ ನಂತರ ಡಿಸೆಂಬರ್ 18 ರಂದು ಬೆಂಗಳೂರಿನಲ್ಲಿ ಅಸಂಘಟಿತ ಕಾರ್ಮಿಕರ ಬೃಹತ್ ವಿಧಾನಸೌಧ ಚಲೋ

ಜನವರಿ 29-ಫೆ 4, 96
ಜನವರಿ 22 ರಂದು ಚಿಕ ಮಗಳೂರಿನಲ್ಲಿ ನಡೆದ ಪ್ಲಾಂಟೇಶನ್ ಕಾರ್ಮಿಕರ ಬೃಹತ್ ಸಮಾವೇಶದ ಕರೆ -ಫೆಬ್ರವರಿ 19 ರಂದು ಕನಿಷ್ಠ ಕೂಲಿ ನಿಗದಿಗಾಗಿ ಪ್ಲಾಂಟೇಶನ್ ಕಾರ್ಮಿಕರ ರಾಜ್ಯ ವ್ಯಾಪಿ ಮುಷ್ಕರ.

ಜ. 29- ಫೆ 4, 96
ಜನವರಿ 18-19 ರಂದು ಸಿಐಟಿಯು - ಐ ಎಲ್ ಒ ಜಂಟಿ ಆಶ್ರಯದಲ್ಲಿ .ಬೆಂಗಳೂರಿನಲ್ಲಿ ಬಾಲಕಾರ್ಮಿಕರ ಕುರಿತು ಯಶಸ್ವಿ ಕಾರ್ಯಾಗಾರ

ಫೆಬ್ರವರಿ 5-11, 96
ಎಲ್ಲಾ ಮೀನುಗಾರಿಕಾ ಸಂಘಟನೆಗಳ ಜತೆಗೆ ಕೇಂದ್ರೀಯ ಟ್ರೇಡ್ ಯುನಿಯನ್‌ಗಳು ಸೇರಿದ್ದ ರಾಷ್ಟ್ರೀಯ ಜಂಟಿ ಹೋರಾಟ ಸಮಿತಿಯ ಕರೆ ಮೇರೆಗೆ -.ವಿದೇಶಿ ಮೀನುಗಾರಿಕೆ ವಿರೋಧಿಸಿ ರಾಜ್ಯದಲ್ಲೂ ಯಶಸ್ವಿ ಮೀನುಗಾರಿಕೆ ಬಂದ್

ಫ 26- ಮಾ. 3, 96
ಸರಕಾರದ ಮೋಸದ ಪೆನ್ಷನ್ ಯೋಜನೆಯನ್ನು ತಿರಸ್ಕರಿಸಿದ ಯಶಸ್ವಿ ಮುಷ್ಕರ ಫೆಬ್ರವರಿ 23 ರಂದು



ಮಾರ್ಚ್ 4-10, 96
. ಗುಲ್ಬರ್ಗಾದಲ್ಲಿ ಗ್ರಾಮಪಂಚಾಯತ್ ನೌಕರರ 2ನೇ ರಾಜ್ಯ ಸಮ್ಮೇಳನ

ಮಾರ್ಚ್ 18-24, 96
. ತುಟ್ಟಿಭತ್ಯೆಗಾಗಿ ಹೋರಾಟ ಮುಂದು ವರಿಸಲು ಕೈಮಗ್ಗ ನೇಕಾರರ ನಿರ್ಧಾರ
. ಧಾರವಾಢದಲ್ಲಿ ಪೆನ್‌ಶನ್ ಹವಾಲಾ - ಬೀಡಿ ಕಾರ್ಮಿಕರ ರಾಜೀನಾಮೆಗೆ ಬಲಾತ್ಕಾರ! ಪೆನ್‌ಶನ್ ಫಾರಂಗಳ ಮಾರಾಟ!

ಮಾರ್ಚ್ 25-31, 96
22 ಕಾರ್ಖಾನೆಗಳು, ಏಳು ಸಾವಿರ ಕಾರ್ಮಿಕರನ್ನು ಹೊಂದಿರುವ ಕಾನೂನನ್ನು ಧಿಕ್ಕರಿಸುತ್ತಿರುವ ಸಾಮ್ರಾಟ್‌ಅಶೋಕ್ ಗಾರ್ಮೆಂಟ್ಸ ಮಾಲಿಕರ ಭಂಡತನ, ನೀಚತನದ ದಮನದ ವಿರುದ್ಧ ಮಹಿಳಾ ಕಾರ್ಮಿಕರ ಹೋರಾಟ.

ನ 25- ಡಿ 2, 96
ಅಸಂಘಟಿತ ಕಾರ್ಮಿಕರ ಹೋರಾಟಕ್ಕೆ ಪ್ರಚಂಡ ಜಯ - ಪವರ್ ಲೂಂ ಕೈಗಾರಿಕೆಗೆ ಕಾರ್ಖಾನೆ ಕಾಯಿದೆ ಜಾರಿ

ಮೇ 19-25, 96
ಎತ್ತರ ಕನ್ನಡದ ದುಡಿಯುವವರ ಹೋರಾಟಕ್ಕೆ ಹೊಸ ಅಧ್ಯಯನದ ಸೇರ್ಪಡೆ .ಅನಂತವಾಡಿ ಹೆಂಚು ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ

ಮೇ 26-ಜೂ 01, 96
ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಜನವಿರೋಧಿ ನೀತಿಗಳನ್ನು ವಿರೋಧಿಸಿ ಮೇ 22 ರಂದು ರಾಜ್ಯವ್ಯಾಪಿ ಯಶಸ್ವಿ ಮುಷ್ಕರ ಮತ್ತು ಮುಖ್ಯಮಂತ್ರಿಗಳ ಮನೆಯ ಮುಂದೆ ಮೂರು ಸಾವಿರಕೂ ಹೆಚ್ಚು ಕಾರ್ಮಿಕರ ಧರಣಿ.
ರೋಗಗ್ರಸ್ತತೆ, ಶೇರು ಹಿಂಪಡೆತ ಹಾಗೂ ಟೇಕ್-ಓವರ್‌ಗಳ ವಿರುದ್ಧ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಬೆಂಗಳೂರು ಸಮಾವೇಶದ ಕರೆ ಮೇ (20) - ಸಾರ್ವಜನಿಕ ವಲಯವನ್ನು ಉಳಿಸಲು, ಸತ್ವಯುತಗೊಳಿಸಲು ಐಕ್ಯ ಹೋರಾಟ

ಏಪ್ರಿಲ್ 7-13, 97
ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ರಾಜ್ಯಾದ್ಯಂತ ಮೇ 27 ರಂದು ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ರೈಲು-ರಸ್ತೆ ತಡೆ

ಆಗಸ್ಟ್ 4-10, 97
ಕನಿಷ್ಠ ವೇತನಕಾ ಗಿ ಆಗ್ರಹಿಸಿ ಸಹಸ್ರಾರು ಅಂಗನವಾಡಿ ನೌಕರರಿಂದ ಜಿಪಿಓ ಕಛೇರಿಯ ಮುಂದೆ ಪಿಕೆಟಿಂಗ್

ಅಕ್ಟೋಬರ್ 6-12, 97
ಸೆಪ್ಟೆಂಬರ್ 30 ರಂದು ಬೆಂಗಳೂರಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದತಿಗೆ ಆಗ್ರಹಿಸಿ, ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶದ ಕರೆ

ಡಿಸೆಂಬರ್ 8-14,97
ಡಿಸೆಂಬರ್ 1 ರಂದು ನಡೆದ ಕರ್ನಾಟಕದಲ್ಲಿನ ಖಾಸಗಿ ಮತ್ತು ಸಾರ್ವಜನಿಕ ರಂಗದ ಕಾರ್ಮಿಕರ ಸಮಾವೇಶದ ಕರೆ ಮತ್ತು ಭವಿಷ್ಯ ನಿಧಿಯಿಂದ ಪ್ರತ್ಯೇಕವಾದ ಪಿಂಚಣಿ ಯೋಜನೆಗೆ ಒತ್ತಾಯಿಸಿ ಡಿಸೆಂಬರ್ 17 ರಂದು ಮುಷ್ಕರಕ್ಕೆ ಕರೆ.

ರೈತ ಕೃಷಿ ಕೂಲಿಕಾರರ ಹೋರಾಟಗಳು



ಜನಶಕ್ತಿ ಫೆಬ್ರವರಿ 12-18, 96

ನೀರಿಗಾಗಿ ಬಳ್ಳಾರಿ ರೈತರ ಯಶಸ್ವಿ ಹೋರಾಟ -ಧರಣಿ-ಬಂದ್ ನಡೆಸಿ ಲಾಠಿಯೇಟು ತಿಂದು ಯಶಸ್ವಿಯಾದ ರೈತರ ಹೋರಾಟ

.ಆಗಸ್ಟ್ 12-18, 96

ಕೃಷಿ ಕೂಲಿಕಾರರ ಸಂಘದ ಧಾರವಾಢ ಜಿಲ್ಲಾ ಸಮ್ಮೇಳನ ಹಾನಗಲ್‌ನ ಅಕ್ಕಿಅಲೂರು ಗ್ರಾಮದಲ್ಲಿ (ಜುಲೈ 8)-

ಕಾಡೂ ಬೆಳೆಯುತ್ತೇವೆ, ಕಾಳೂ ಬೆಳೆಯುತ್ತೇವೆ, ನಮಗೆ ಭೂಮಿಕೊಡಿ.

ಅಕ್ಟೋಬರ್ 14-20, 96

ಅಕ್ಟೋಬರ್ 14 ರಂದು ರಾಜ್ಯಾದ್ಯಂತ ಪ್ರತಿಭಟನೆ, ಬಗ್ಗೆರ್ ಹುಕುಂ ಸಾಗುವಳಿ ಮಾಡುತ್ತಿದ್ದ 500 ಕ್ಕೂ ಹೆಚ್ಚು ಕೃಷಿ ಕೂಲಿಕಾರರ ಚಳುವಳಿ ಹಾನಗಲ್‌ನಲ್ಲಿ ಕೃಷಿ ಕೂಲಿಕಾರರ ಬಂಧನ.

ನವೆಂಬರ್ 18-24, 96

ಧಾರವಾಡ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ ಬಗ್ಗೆರ್ ಹುಕುಂ ಸಾಗುವಳಿ ಮಾಡುತ್ತಿದ್ದ 500 ಕ್ಕೂ ಹೆಚ್ಚು ಬಡ ಕೃಷಿ ಕೂಲಿಕಾರರು ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ದಮನವನ್ನು ಎದುರಿಸಿ ನಿಂತರು.

. ಜಂಗಿನ ಕೊಪ್ಪದ ವೀರ ವನಿತೆಯರು

ಮೇ 19-25, 97

ದಶಕಗಳಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ಹಿನ್ನಲೆಯಲ್ಲಿ, ಆ ಭೂಮಿಯನ್ನು ಮರುವಶಪಡಿಸಿಕೊಳ್ಳಲಾಯಿತು.

. ಹರಿತಗೊಂಡ ಭೂ ಹೋರಾಟ- ಹಾನಗಲ್ ಕೃಷಿ ಕೂಲಿಕಾರರ ಹೋರಾಟದ ಪರ್ವದ ಮುಂದಿನ ಅಧ್ಯಾಯ.

ಜೂನ್ 2-8,97

ಹಾನಗಲ್ 30 ಗ್ರಾಮಗಳ ಕೃಷಿ ಕೂಲಿಕಾರರ ಸಾಮೂಹಿಕ ಸರದಿ ಉಪವಾಸದ ಫಲ-*30 ಗ್ರಾಮಗಳ 5000 ಎಕರೆ ಭೂಮಿಯ ಪರಿಶೀಲನೆ. ಮೂಲವರದಿ ಸಲ್ಲಿಸಲು ಸಚಿವರ ಆದೇಶ.*

. ಹಾನಗಲ್: *ಅರಣ್ಯ ಇಲಾಖೆಯ ಕೆಲಸ ಸ್ಥಗಿತ, ಸಾಗುವಳಿ ಭೂಮಿ ಪರಿಶೀಲನೆ ಆರಂಭ*

ಆಗಸ್ಟ್ 4-10, 97

ರಾಜ್ಯಾದ್ಯಂತ ಎಲ್ಲೆಡೆಗಳಿಂದ ಬಂದ ರೈತರು, ಕೃಷಿ ಕೂಲಿಕಾರರು ಬೆಂಗಳೂರಿನಲ್ಲಿ ಒತ್ತುವರಿ ಭೂಮಿ ಸಕ್ರಮಗೊಳಿಸಲು ಒತ್ತಾಯಿಸಿ, ಮುಖ್ಯಮಂತ್ರಿ ಮನೆ ಮುಂದೆ ರೈತ-ಕೃಷಿ ಕೂಲಿಕಾರರ ಧರಣಿ

ವಿದ್ಯಾರ್ಥಿ-ಯುವಜನ-ಮಹಿಳಾ-ಸಾಂಸ್ಕೃತಿಕ ಹೋರಾಟಗಳು....

ಜನಶಕ್ತಿ ಏಪ್ರಿಲ್ 2, 95

ವಿಧಾನ ಸೌಧದ ಎದುರು ಸರ್ಕಾರದ ಕ್ರಮ ವಿರೋಧಿಸಿ ಸಾಹಿತಿ-ಕಲಾವಿದರು, ವಿದ್ಯಾರ್ಥಿ ಯುವಜನರ ಧರಣಿ (ಮಾರ್ಚ್ 20 ರಂದು)

ಮಹಾಚೈತ್ರ ನಾಟಕ ಪಠ್ಯಪುಸ್ತಕ ರದ್ದತಿ ವಿರೋಧಿಸಿ ಸಮುದಾಯ ಖಂಡನೆ

ಜೂನ್ 11, 95

.ವಿದ್ಯಾರ್ಥಿ ಬಸ್-ಪಾಸ್ ಹೊಸ ಪದ್ಧತಿ ಪ್ರಕಟಣೆಗೆ ಎಸ್.ಎಫ್.ಐ ನ ಖಂಡನೆ

ಗುಲ್ಬರ್ಗಾದಲ್ಲಿ "ಸಮುದಾಯ" ದಿಂದ ಫ್ಯಾಸಿಸಂ ಮೇಲಿನ ವಿಜಯದ ಸ್ವರ್ಣ ಮಹೋತ್ಸವ ಆಚರಣೆ

ಜುಲೈ 30,95

ಎಸ್.ಎಫ್.ಐ, ಡಿ.ವೈ.ಎಫ್.ಐ, ಬಿಜಿವಿಎಸ್, ಮಹಿಳಾ ದೌರ್ಜನ್ಯ ವಿರೋಧಿ ಸಮಿತಿಯ ಮಧ್ಯ ಪ್ರವೇಶದಿಂದ ಬಯಲಾದ ಮಂಗಳೂರಿನ ಶ್ರದ್ಧಾನಂದ ಅನಾಥಾಶ್ರಮದಲ್ಲಿನ ಲೈಂಗಿಕ ಹಗರಣ

.ಮಂಗಳೂರಿನಲ್ಲೊಂದು ಮಿನಿ ಜಲಗಾಂವ್ ಪ್ರಕರಣ

ಜನವರಿ 8-14,96

ಸಮುದಾಯಕೆ 20 ವರ್ಷದ ಆಚರಣೆ ಬೆಂಗಳೂರಿನಲ್ಲಿ ನವೆಂಬರ್ 28-ಡಿಸೆಂಬರ್ 4

. ಹೊಸ ಭರವಸೆ ಮೂಡಿಸಿದ ಸಮುದಾಯ ಜನ-ಸಂಸ್ಕೃತಿ ಉತ್ಸವ

ಮಾರ್ಚ್ 18-24, 96

ಮೈಸೂರಿನಲ್ಲಿ ಸಮುದಾಯದ 20ನೇ ಹುಟ್ಟುಹಬ್ಬದ ಆಚರಣೆ

.ಎಲ್ಲಿಂದ ಬಂದಿರೆಂದು ಕೇಳಬಹುದೇ? ಮತ್ತೆ ಎಲ್ಲಿಗೆ ನಿಮ್ಮ ಪಯಣ?

ಮೇ 27-ಜೂನ್2, 96

ಉತ್ತರ ಕನ್ನಡ ಜಿಲ್ಲೆಯಲಿ 'ಚಿಂತನ' ದ ಅನುಕರಣೀಯ ವಿನೂತನ ಪ್ರಯೋಗ.

. ಪುಸ್ತಕ ಸಂಸ್ಕೃತಿ ಬೆಳೆಸುವುದು ಹೇಗೆ?

ಜೂನ್ 10-16,96

ಅಂತರ್ರಾಷ್ಟ್ರೀಯ ಮಕ್ಕಳ ದಿನದ ಅಂಗವಾಗಿ ಜನವಾದಿಮಹಿಳಾ ಸಂಘಟನೆಯ ದಕ್ಷಿಣ ಕನ್ನಡ ಜಿಲ್ಲಾಸಮಿತಿ ಹಮ್ಮಿಕೊಂಡ ಮಕ್ಕಳ ಅದಾಲತ್ ವಿಶಿಷ್ಟ ಕಾರ್ಯಕ್ರಮ

. ಅವರಿಗೇಕೆ ಪುಸ್ತಕ, ರಬ್ಬರ್, ನಮಗೇಕೆ ಇಲ್ಲ......?

ಜೂನ್ 17-23, 96

ಬೆಂಗಳೂರು ವಿ.ವಿ.ಯ ಶೈಕ್ಷಣಿಕ, ಆಡಳಿತಾತ್ಮಕ ಸಮಸ್ಯೆಗಳು ಭ್ರಷ್ಟಾಚಾರದ ವಿರುದ್ಧ - *ಆಗಸ್ಟ 23 ರಂದು ಬೆಂಗಳೂರು ವಿ.ವಿ. ಚಲೋ*

ರಾಜ್ಯದ ಆಯ್ದ ಮುಖಂಡರುಗಳಿಗೆ ಸೈದ್ಧಾಂತಿಕ ಸಂಘಟನಾ ತರಬೇತಿ ನೀಡಲು ತುಮಕೂರಿನ ತುರುವೇಕೆರೆಯ ಎಸ್.ಎಫ್.ಐ ನ ಯಶಸ್ವಿ ರಾಜ್ಯಮಟ್ಟದ ಕಾರ್ಯಾಗಾರ

ಸೆಪ್ಟೆಂಬರ್ 2-8, 96

ಬೆಂಗಳೂರಿನಲ್ಲಿ ಕೀಳು ದರ್ಜೆಗಿಳಿಸುವ ಸೌಂದರ್ಯ ಸ್ಪರ್ಧೆ ವಿರುದ್ಧ ಸಮಾವೇಶದ ಕರೆ ಅಕ್ಟೋಬರ್ 31 ರಂದು ಸೌಂದರ್ಯ ಸ್ಪರ್ಧೆ ವಿರುದ್ಧ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ರ್‍ಯಾಲಿ.



ನವೆಂಬರ್ 25-ಡಿ.1, 96

ನವೆಂಬರ್ 17 ರಂದು ಪೋಲೀಸರ ದಬ್ಬಾಳಿಕೆಯನ್ನು ಲೆಕ್ಕಿಸದೆ ನಡೆದ ಬೃಹತ್ ಪ್ರತಿಭಟನೆ

.ಹೊಲಸು ಮನಸ್ಸುಗಳನ್ನು ಬಯಲಿಗೆಳೆದ ಸೌಂದರ್ಯ ಸ್ಪರ್ಧೆ ವಿರುದ್ಧ

ಡಿಸೆಂಬರ್ 9-15, 96

ಕರ್ನಾಟಕದಲ್ಲಿ ಪ್ರಬಲ ಯುವಜನ ಆಂದೋಲನ ಕಟ್ಟಲು ನಿರ್ಧರಿಸಿದ (ಡಿಸೆಂಬರ್ 2-3 ರಂದು ನಡೆದ), ಮೊದಲ ಬಾರಿಗೆ ಕರ್ನಾಟಕದಲ್ಲಿ ಡಿ.ವೈ.ಎಫ್.ಐ ರಾಜ್ಯ ಸಂಘಟನೆ ಸಂಘಟಿಸಿದ ಯಶಸ್ವಿಯಾಗಿ ಮುಕ್ತಾಯಗೊಂಡ ದಕ್ಷಿಣ ಭಾರತ ಯುವಜನ ಕಾರ್ಯಾಗಾರ

ಏಪ್ರೀಲ್ 14-20, 97

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಎಂದು ಧೀಮಂತ ಹೋರಾಟ

. ಬೆಂಗಳೂರಿನ ಕೃಪಾನಿಧಿ ಕಾಲೇಜು ವಿದ್ಯಾರ್ಥಿಗಳಿಗೆ ಕೊನೆಗೂ ಜಯ


.ಧರ್ಮಕಾರಣ ರದ್ದತಿ ಹಿಂತೆಗೆಯಲು ಸಮುದಾಯದ ಒತ್ತಾಯ ರಾಯಚೂರಿನಲ್ಲಿ ವಿದ್ಯಾರ್ಥಿ, ರೈತ ಕಾರ್ಯಕರ್ತರಿಂದ ಗೋಡೆ ಬರಹ

. ಎಲ್ಲರೂ ನೋಡಿ, ಜನುಮದ ಜೋಡಿ

ಆಗಸ್ಟ 18-24, 97

.ಜನವಾದಿ ಮಹಿಳಾ ಸಂಘಟನೆಯ ಮಡಿಲಲ್ಲಿ ಪ್ರಜ್ಞಾ ಕಾನೂನು ಸಲಹಾ ಸಮಿತಿ

ಅಪಾಯಕಾರಿ ಸಂತಾನ ವಿರೋಧ ಕ್ರಮವಾದ 'ಕ್ವಿನ್ ಕ್ರಿಮ್' ಬಳಕೆಗೆ ಮಹಿಳಾ ಆರೋಗ್ಯ ರಕ್ಷಣಾ ಸಮಿತಿಯಿಂದ ಪ್ರತಿಭಟನೆ



ನವೆಂಬರ್ 24-30, 97

ಮಂಡ್ಯದಲ್ಲಿ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ: ಡಾ. ವಿಶ್ವೇಶ್ವರಯ್ಯನವರ ಚಿಂತನೆಗಳು ಮತ್ತು ಸ್ವತಂತ್ರ ಭಾರತದ ಅಭಿವೃದ್ಧಿ ಎಂಬ ಎರಡು ದಿನದ ರಾಜ್ಯ ಮಟ್ಟದ ವಿಚಾರಣ ಸಂಕಿರಣ

ಡಾ.ಎಂ. ವಿಶ್ವೇಶ್ವರಯ್ಯ ನವರ ಚಿಂತನೆಗಳು ಇಂದಿಗೂ ಪ್ರಸ್ತುತ ರಾಜೀವಗಾಂಧಿ ಆರೋಗ್ಯ ವಿಜ್ಞಾನ ವಿ.ವಿ. ವಿದ್ಯಾರ್ಥಿಗಳು ಮತ್ತೆ ಹೋರಾಟಕ್ಕೇಕೆ ಇಳಿದಿದ್ದಾರೆ!



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭)


ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸದುಕೊಂಡ. ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಪೋಲೀಸರು ಎಷ್ಟೇ ದಮನ ನಡೆಸಿದರೂ ಕಾನೂನುಭಂಗ ಚಳುವಳಿ ಒಂದು ಜನಪ್ರಿಯ ಬಂಡಾಯದ ರೂಪತಳೆಯಲಾರಂಭಿಸಿತು. ಮೇ 1930 ರ ಆರಂಭದಲ್ಲಿ ಗಾಂಧೀಜಿಯ ಬಂಧನವಾದಾಗ ದೇಶಾದ್ಯಂತ ಭಾರೀ ಪ್ರತಿಭಟನೆಗಳು ನಡೆದವು. ಮಹಾರಾಷ್ಟ್ರದ ಶೋಲಾಪುರದ ಹತ್ತಿ ಗಿರಣಿ ಕಾರ್ಮಿಕರು ಹಾಗೂ ರೈಲ್ವೇ ಕಾರ್ಮಿಕರು ಬ್ರಿಟಿಶರನ್ನು ಒದ್ದೋಡಿಸಬೇಕೆಂದು ಸ್ವಯಂ ಸ್ಫೂರ್ತಿಯಿಂದ ಸಿಡಿದೆದ್ದರು.

ಮೇ 5 ಹಾಗೂ 6, 1930 ರಲ್ಲಿ ಗಾಂಧೀಜಿಯ ಬಂಧನದ ವಿರುದ್ಧ ಶೋಲಾಪುರದಲ್ಲಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ನಡೆಸಿದರು. ಎಲ್ಲಾ ಬ್ರಿಟಿಶರು ನಗರದಿಂದ ಓಡಿಹೋದರು. ಕೆಲವುದಿನಗಳ ಕಾಲ ಅಲ್ಲಿ ಬ್ರಿಟಿಶ್ ಆಳ್ವಿಕೆಯೆಂಬುದೇ ಇರಲಿಲ್ಲ. ಕೊನೆಗೆ ಮುಂಬೈ ಮತ್ತಿತರ ನಗರಗಳಿಂದ ದೊಡ್ಡ ಪ್ರಮಾಣದಲ್ಲಿ ಸೇನೆ ತರಿಸಿ ಲಷ್ಕರಿ ಶಾಸನ ಹಾಕಿ ಶೋಲಾಪುರದ ಬೀದಿಗಳಲ್ಲಿ ರಕ್ತದ ಹೊಳೆ ಹರಿಸಿ ಬ್ರಿಟಿಶ್ ಆಡಳಿತವನ್ನು ಮರು ಸ್ಥಾಪಿಸಿದರು. ಬ್ರಿಟಿಶ್ ಸೇನೆಗಳು ಎಲ್ಲೆಡೆಯೂ ಅಮಾನುಷ ಅತ್ಯಾಚಾರ ನಡೆಸಿದವು. ಗಾಂಧೀ ಟೋಪಿ ಹಾಕಿದ ಹುಡುಗರನ್ನೂ ಬಿಡಲಿಲ್ಲ.



ಕುರ್ಬಾನ್ ಹುಸೇನ್




ಮಲ್ಲಪ್ಪ ಧನಶೆಟ್ಟಿ

ಜನವರಿ 12, 1931 ರಂದು ಮಿಲಿಟರಿ ನ್ಯಾಯಾಲಯ ನಾಲ್ಕು ಮಂದಿಗೆ ಮರಣದಂಡನೆ ವಿಧಿಸಿತು-33 ವರ್ಷದ **ಮಲ್ಲಪ್ಪ ಧನಶೆಟ್ಟಿ, ಕುರ್ಬಾನ್ ಹುಸೇನ್,** 38 ವರ್ಷದ **ಶ್ರೀ ಕೃಷ್ಣ ಸರ್ದಾರ್** ಹಾಗೂ 25 ವರ್ಷದ **ಜಗನ್ನಾಥ್ ಶಿಂದೆ.** ಕುರ್ಬಾನ್ ಹುಸೇನ್ ಒಬ್ಬ ಕಾರ್ಮಿಕ ಮುಖಂಡರಾಗಿದ್ದರು.



ಜಗನ್ನಾಥ ಶಿಂಧೆ



ಕೃಷ್ಣ ಸರ್ದಾರ್


ಇದೇ ಸುಮಾರಿಗೆ ಬಂಗಾಳದ ಕಿಶೋರ್ ಗಂಜ್‌ನಲ್ಲಿ ರೈತರ ವ್ಯಾಪಕ ಆಂದೋಲನ ನಡೆಯಿತು. ಕ್ರಾಂತಿಕಾರಿ ಭಯೋತ್ಪಾದನೆಯ ಮಾರ್ಗ ಬಿಟ್ಟು ಕಮ್ಯುನಿಸಂನತ್ತ ಆಕರ್ಷಿತರಾಗುತ್ತಿದ್ದ ಯುವಕರು ರಚಿಸಿಕೊಂಡ **'ಯಂಗ್ ಕಾಮ್ರೇಡ್ಸ್ ಲೀಗ್'** ನೇತೃತ್ವದಲ್ಲಿ ಕಿಶೋರ್ ಗಂಜ್‌ನಿಂದ ಹತ್ತು ಕಿ.ಮಿ. ದೂರದಲ್ಲಿ ವಾಸಿಸುತ್ತಿದ್ದ ಒಬ್ಬ ಕ್ರೂರ ಮುಸ್ಲಿಂ ಲೇವಾದೇವಿಗಾರನ ವಿರುದ್ಧ ಹಿಂದೂ-ಮುಸ್ಲಿಂ ರೈತರ ಐಕ್ಯ ಮತ ಪ್ರದರ್ಶನದಿಂದ ಆರಂಭವಾದ ಈ ಆಂದೋಲನದಲ್ಲಿ ರೈತರು ಸಾಲ ಪತ್ರಗಳನ್ನು ದಾಖಲೆಗಳನ್ನೆಲ್ಲಾ ಸುಟ್ಟು ಹಾಕಿದರು. ಕಾಳ್ಗಿಚ್ಚಿನಂತೆ ಈ ಆಂದೋಲನ ಸುತ್ತಮುತ್ತಲ ಹಳ್ಳಿಗಳಲ್ಲಿ ಹರಡಿತು. ಜಂಗಲಿಯಾದ ಬಲಿಷ್ಟ ಲೇವಾದೇವಿಗಾರ ಕೃಷ್ಣರಾಯ್ ಖಾಸಗಿ ಪಿಸ್ತೂಲಿನಿಂದ 8 ಮಂದಿ ರೈತರನ್ನು ಕೊಂದಾಗ ರೊಚ್ಚಿಗೆದ್ದ ರೈತರು ಆತನ ಮನೆಯನ್ನು ಸುಟ್ಟು, ಸಾಲ ಪತ್ರಗಳನ್ನೆಲ್ಲಾ ಸುಟ್ಟರು. ಕೃಷ್ಣರಾಯ್ ಕೂಡಾ ಸತ್ತ.

ಇದೇ ವೇಳೆಗೆ (ಆಗ ಭಾರತದ ಭಾಗವಾಗಿದ್ದ) ಬರ್ಮಾದಲ್ಲಿ ಒಂದು ರೈತ ಬಂಡಾಯ ನಡೆಯಿತು. ಥರವಡ್ಡಿ ಬಂಡಾಯ ಎಂದು ಹೆಸರಾದ ಈ ಬಂಡಾಯದ ಮುಖಂಡತ್ವವನ್ನು ವಹಿಸಿದ ದೇಶಿ ವೈದ್ಯ ಸಿಯಾಸನ್ ಗೆರಿಲ್ಲಾ ಹೋರಾಟ ನಡೆಸಿ ಬ್ರಿಟಿಶ್ ಪಡೆಗಳು ತಲ್ಲಣಗೊಳ್ಳುವಂತೆ ಮಾಡಿದ. ಎರಡು ವರ್ಷಗಳ ನಿರಂತರ ಹೋರಾಟದ ನಂತರ ಸಿಯಾಸನ್ ಬ್ರಿಟಿಶ್ ಪಡೆಗಳ ಕೈಗೆ ಸಿಕ್ಕಿಬಿದ್ದ. ನವಂಬರ್ 1931 ರಲ್ಲಿ ಆತನನ್ನು ಬ್ರಿಟಿಶರು ಗಲ್ಲಿಗೇರಿಸಿದರು.

ದೇಶಾದ್ಯಂತ ಈ ರೀತಿಯ ಸಮರಧೀರ ಹೋರಾಟಗಳು ಹೆಚ್ಚುತ್ತಿರುವುದನ್ನು ಕಂಡ ಬ್ರಿಟಿಶ್ ಸರಕಾರ ಮಾತ್ರವಲ್ಲ, ಕಾಂಗ್ರೆಸ್ ಮುಖಂಡರೂ ಆತಂಕ ಪಡಲಾರಂಭಿಸಿದರು. ತೇಜ್ ಬಹದ್ದೂರ ಸಪ್ರು, ಎಂ.ಆರ್.ಜಯಕರ್‌ರಂತಹ ಮಂದಗಾಮಿ ಮುಖಂಡರು ಕಾಂಗ್ರೆಸ್ ಮುಖಂಡರು ಮತ್ತು ಬ್ರಿಟಿಶ್ ಸರಕಾರದ ನಡುವೆ ಮಾತುಕತೆ ಏರ್ಪಡಿಸುವ ಪ್ರಯತ್ನ ಆರಂಭಿಸಿದರು.

ವೈಸರಾಯ್ 25, ಜನವರಿ 1931ರಂದು ಬಂಧಿತ ಕಾಂಗ್ರೆಸ್ ಮುಖಂಡರು ಪರಸ್ಪರ ವಿಚಾರ ವಿಮರ್ಶೆ ನಡೆಸಲು ಅವಕಾಶ ಮಾಡಿಕೊಟ್ಟು, ಲಂಡನ್ನಿನಲ್ಲಿ ನಡೆಯಲಿದ್ದ ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗವಹಿಸುವಂತೆ ಮಾಡುವ ಪ್ರಯತ್ನ ನಡೆಯಿತು.

ಮರುದಿನವೇ ಅಂದರೆ ಜನವರಿ 26, 1931 ರಂದು ಸ್ವಾತಂತ್ರ್ಯ ದಿನದ ಮೆರವಣಿಗೆಗೆ ಕಲ್ಕತ್ತೆಯಲ್ಲಿ ಆಗ ನಗರದ ಮೇಯರ್ ಆಗಿದ್ದ ಸುಭಾಷ ಚಂದ್ರ ಬೋಸ್ ನೇತೃತ್ವ ನೀಡಿದ್ದರು. ಮೆರವಣಿಗೆ ಕಾರ್ಪೋರೇಶನ್‌ನಿಂದ ಮೈದಾನದತ್ತ ಸಾಗುತ್ತಿದ್ದಂತೆ ಬ್ರಿಟಿಶ್ ಅಶ್ವದಳ ಇದ್ದಕ್ಕಿದ್ದಂತೆ ಎರಗಿ ಲಾಠಿ ಪ್ರಹಾರ ನಡೆಸಿತು. ಬೋಸರ ಕೈಗಂಟು ಮುರಿಯಿತು. ಇನ್ನು ಹಲವು ಮುಖಂಡರಿಗೆ ತೀವ್ರ ಜಖಂಗಳಾದವು. ಆಸ್ಪತ್ರೆಗಳಲ್ಲೂ ಇವರಿಗೆ ಸರಿಯಾದ ಉಪಚಾರಸಿಗಲಿಲ್ಲ; ಬದಲಿಗೆ ಅನಾಗರಿಕ ವರ್ತನೆ ಎದುರಿಸಬೇಕಾಯಿತು.



ಆದರೂ ಗಾಂಧೀಜಿ ಶೋಲಾಪುರ ಬಂಡಾಯವನ್ನು, ಗಢ್‌ವಾಲೀ ಸೈನಿಕರು ಪಠಾಣರ ಮೇಲೆ ಗೋಳೀಬಾರ್ ಮಾಡಲು ನಿರಾಕರಿಸಿದ್ದನ್ನು 'ಅಶಿಸ್ತು' ಎಂದು ಖಂಡಿಸಿದರು.

ಮಾರ್ಚ್ 5, 1931 ರಂದು ಗಾಂಧೀಜಿ ಮತ್ತು ವೈಸರಾಯ್ ಇರ್ವಿನ್ ನಡುವೆ ಒಂದು ಒಪ್ಪಂದವಾಯಿತು. ಇದಾದ ಹದಿನೈದೇ ದಿನಗಳೊಳಗೆ ಪ್ರಖ್ಯಾತ ಕ್ರಾಂತಿಕಾರಿ ಭಗತ್ ಸಿಂಗ್ ನೇಣುಗಂಬವೇರಿದರು. ಇದಕ್ಕೆ ಒಂದು ವಾರದ ಹಿಂದೆ ಹಿಂದೂಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿಯ ಸೇನಾಧಿಪತಿಯಾಗಿದ್ದ ಕೇವಲ 25 ವರ್ಷ ಪ್ರಾಯದ ಚಂದ್ರಶೇಖರ್ ಆಝಾದ್ ಬ್ರಿಟಿಶ್ ಪಡೆಗಳೊಂದಿಗೆ ಸೆಣಸುತ್ತಾ ಬಲಿದಾನ ನೀಡಿದ್ದರು.

(ಮುಂದುವರಿಯುವುದು)

ದೇಶದೊಳಗೆ

ಬಿಜೆಪಿ–ಅಣ್ಣಾ ಡಿಎಂಕೆ 'ಸಮಯಸಾಧಕ' ಮೈತ್ರಿ

ವಿಶ್ಲೇ

ಕಳೆದ ಲೋಕಸಭೆ ಚುನಾವಣೆ ಯಿಂದೀಚೆಗೆ ಏನಾದರೂ ಮಾಡಿ ಅಧಿಕಾರಕ್ಕೆ ಬರಬೇಕೆಂಬ ಆಸೆಯಿಟ್ಟು ಕೊಂಡಿದ್ದ ಭಾರತೀಯ ಜನತಾ ಪಕ್ಷದ ನಿರೀಕ್ಷೆಗಳಿಗೆಲ್ಲ ಜಾತ್ಯತೀತ ಶಕ್ತಿಗಳು ತಣ್ಣೀರೆರಚಿದ್ದವು. ಇದರಿಂದ ಧೃತಿಗೆಟ್ಟ ಬಿಜೆಪಿ ಮಧ್ಯಂತರ ಚುನಾವಣೆಯಲ್ಲಿ ಮಿತ್ರ ಪಕ್ಷಗಳನ್ನು ಹುಡುಕುವ ಕೆಲಸವನ್ನು ಬಿರುಸುಗೊಳಿಸಿದೆ.

1991 ರಿಂದ 96 ರವರೆಗೆ ತಮಿಳುನಾಡಿನಲ್ಲಿ ಅತ್ಯಂತ ಭ್ರಷ್ಟ ಅಧಿಕಾರ ನಡೆಸಿದ್ದ ಜಯಲಲಿತಾ ನೇತೃತ್ವದ ಅಖಿಲ ಭಾರತ ಅಣ್ಣಾ ಡಿಎಂಕೆ ಪಕ್ಷದೊಂದಿಗೆ ಅದು ಮೈತ್ರಿಯನ್ನು ಕುದುರಿಸಿಕೊಂಡಿದೆ

ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವುದರಲ್ಲಿ ತನ್ನನ್ನು ಬಿಟ್ಟರೆ ಜಗತ್ತಿನಲ್ಲಿ ಬೇರಾರೂ ಇಲ್ಲ ಎಂದು ಜಂಭ ಕೊಚ್ಚಿ ಕೊಳ್ಳುತ್ತಿದ್ದ ಬಿಜೆಪಿಯ ಬಣ್ಣ ಇದರಿಂದ ಬಯಲಿಗೆ ಬಂದಿದೆ.

ಈ ನಡುವೆ, ಭಾರತೀಯ ಜನತಾ ಪಕ್ಷದೊಂದಿಗೆ ಚುನಾವಣೆ ಮೈತ್ರಿ ಮಾಡಿಕೊಳ್ಳಲು ಅಖಿಲ ಭಾರತ ಅಣ್ಣಾ ಡಿಎಂಕೆ ನಿರ್ಧರಿಸಿರುವುದಕ್ಕೆ ತಮಿಳು ನಾಡಿನಲ್ಲಿ ವ್ಯಾಪಕ ಆಕ್ರೋಶ-ವಿರೋಧ ವ್ಯಕ್ತವಾಗಿದ್ದು ಈ ನಿರ್ಧಾರವನ್ನು ಮರುಪರಿಶೀಲಿಸುವಂತೆ ಅಣ್ಣಾ ಡಿಎಂಕೆಗೆ ಹಲವು ಪಕ್ಷಗಳು ಮನವಿ ಮಾಡಿವೆ. ಅಣ್ಣಾ ಡಿಎಂಕೆಯ ಕ್ರಮ ಅಸಮರ್ಥನೀಯ ನಿರ್ಧಾರ ಎಂದು ರಾಜ್ಯದಲ್ಲಿನ ದ್ರಾವಿಡ ಚಳವಳಿಯ ಮಾತೃ ಸಂಸ್ಥೆಯಾದ ದ್ರಾವಿಡ ಕಳಗಂ (ಡಿಕೆ) ಹೇಳಿದೆ. ಇದೊಂದು ಗಂಭೀರ ರಾಜಕೀಯ ತಪ್ಪು ಎಂದೂ ವರ್ಣಿಸಿದೆ.

ಅಣ್ಣಾ ಡಿಎಂಕೆ ನಿರ್ಧಾರದಿಂದಾಗಿ ದ್ರಾವಿಡ ಸಿದ್ಧಾಂತಗಳಿಗೆ ಬದ್ಧರಾಗಿರುವವರು ಮತ್ತು ರಾಜ್ಯದಲ್ಲಿ ಕೋಮುವಾದದ ವಿರುದ್ಧ ಹೋರಾಡುತ್ತಿರುವ ಮಾನವತಾ ವಾದಿಗಳಿಗೆ ಆಘಾತವಾಗಿದೆ ಎಂದು ಡಿ.ಕೆ. ಪ್ರಧಾನ ಕಾರ್ಯದರ್ಶಿ ಕೆ.ವೀರಮಣಿ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಸಮಯಸಾಧಕತನ

ಬಿ.ಜೆ.ಪಿ.-ಅಣ್ಣಾ ಡಿಎಂಕೆ ಮೈತ್ರಿ ನಾಚಿಕೆಗೇಡು ಹಾಗೂ ಅಗ್ಗದ ರಾಜಕೀಯ ಸಮಯಸಾಧಕತನವಾಗಿದೆ ಎಂದು ಜನತಾದಳದ ತಮಿಳುನಾಡು ಘಟಕದ ಪ್ರಧಾನ ಕಾರ್ಯದರ್ಶಿ ಜಾನ್ ಮೋಸೆಸ್ ವರ್ಣಿಸಿದ್ದಾರೆ.

ಒಂದು ಕೋಮುವಾದಿ ಶಕ್ತಿ ಹಾಗೂ ಇನ್ನೊಂದು ವಿಚಾರವಾದಿ ಪಕ್ಷದ ನಡುವಿನ ಮೈತ್ರಿ ಬೆಕ್ಕು ಮತ್ತು ಇಲಿ ನಡುವಿನ ಸಂಬಂಧದಂತೆ ಎಂದು ಮೋಸೆಸ್ ಹೇಳಿದ್ದಾರೆ.

ಕೋಮುವಾದಿಗಳ ಸಂಚಿಗೆ ಬಲಿ

ಎಡಿಎಂಕೆ- ಬಿಜೆಪಿ ಚುನಾವಣೆ ಹೊಂದಾಣಿಕೆ ತೀರಾ ಸಮಯಸಾಧಕತನದ್ದು ಎಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ (ಸಿಪಿಐ-ಎಂ) ತಮಿಳುನಾಡು ಘಟಕ ವರ್ಣಿಸಿದೆ. ರಾಜ್ಯದ ಜನತೆ ಈ ಕೂಟವನ್ನು ತಿರಸ್ಕರಿಸುತ್ತದೆ ಎಂದು ರಾಜ್ಯಸಮಿತಿ ಕಾರ್ಯದರ್ಶಿ ಎನ್. ಶಂಕರಯ್ಯ ಹೇಳಿದ್ದಾರೆ.

ತೀರಾ ಹತಾಶೆಗೊಂಡಿರುವ ಅಣ್ಣಾ ಡಿಎಂಕೆ, ರಾಜ್ಯದಲ್ಲಿ ಕೋಮುವಾದಿ ಚಳವಳಿಯನ್ನು ಹುಟ್ಟುಹಾಕುವ ಬಿಜೆಪಿ ಸಂಚಿಗೆ ಬಲಿ ಬಿದ್ದಿದೆ ಎಂದು ಅವರು ಅಭಿಪ್ರಾಯಪಟ್ಟರು.

ಎ.ಡಿಎಂ.ಕೆ. ದ್ರಾವಿಡ ಆಂದೋಲನದ ಮುಖಂಡರಾದ ಪೆರಿಯಾರ್ ಹಾಗೂ ಅಣ್ಣಾದೊರೈ ಮೊದಲಾದವರ ಫೋಟೋಗಳನ್ನು ತೆಗೆದು ಹಾಕಿ ಆರ್‌ಎಸ್‌ಎಸ್ ಸಂಸ್ಥಾಪಕ ಗೊಲ್ವಾಲ್ಕರ್ ಮತ್ತು ಬಿಜೆಪಿ ಮುಖಂಡ ಎಲ್.ಕೆ.ಅಡ್ವಾನಿಯ ಚಿತ್ರಗಳನ್ನು ತೂಗುಹಾಕಬೇಕೆಂದು ಶಂಕರಯ್ಯ ವ್ಯಂಗ್ಯವಾಗಿ ಹೇಳಿದ್ದಾರೆ.

ಬಾಳ ಠಾಕರೆ ಜೀವಾವಧಿ ಅಧ್ಯಕ್ಷ!
ಶಿವಸೇನೆಯ ಸಾಂಕೇತಿಕ ಚುನಾವಣೆಯ ನಾಟಕ

1961 ರಲ್ಲಿ ಸ್ಥಾಪನೆಯಾದ ಶಿವಸೇನೆ ಇತಿಹಾಸದಲ್ಲಿ ಇದೇ ಮೊದಲಬಾರಿಗೆ ಚುನಾವಣೆ ನಡೆದಿದೆ. ಡಿಸೆಂಬರ್ 20 ರಂದು ಅದು ನಡೆಯಿತು. ಇದೊಂದು ಚುನಾವಣೆ ಎನ್ನುವುದಕ್ಕಿಂತ ಚುನಾವಣೆ ಯೆಂಬ ಪ್ರಹಸನ ಎನ್ನುವುದೇ ಸರಿ.

ಈ ಪ್ರಹಸನದಲ್ಲಿ ಮಹಾರಾಷ್ಟ್ರದಲ್ಲಿ ವಿಛಿದ್ರಕಾರೀ ಮಣ್ಣಿನ ಮಗನನ್ನು ಹುಟ್ಟು ಹಾಕಿದ ಬಾಳಠಾಕರೆ ಶಿವಸೇನೆಯ ಆಜೀವ ಅಧ್ಯಕ್ಷರಾಗಿ ಆಯ್ಕೆಯಾದರು.

ರಾಜಕೀಯ ಪಕ್ಷಗಳು ಸಾಂಸ್ಥಿಕ ಚುನಾವಣೆಯನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕೆಂಬ ಚುನಾವಣಾ ಆಯೋಗದ ಕಟ್ಟುನಿಟ್ಟಿನ ಆದೇಶದ ಹಿನ್ನೆಲೆಯಲ್ಲಿ ಶಿವಸೇನೆ ಈ ನಾಟಕ ಆಡಿತು. ಸಾಂಸ್ಥಿಕ ಚುನಾವಣೆ ನಡೆಸುವ ವಿಚಾರ ದಲ್ಲಿ ತನ್ನ ಸಂವಿಧಾನದಲ್ಲಿ ಅಡಕವಾಗಿಲ್ಲ ಎಂದು ಶಿವಸೇನೆ ಇಲ್ಲಿಯವರೆಗೆ ವಾದಿ ಸುತ್ತಾ ಬಂದಿತ್ತು. ಇದನ್ನು ಒಪ್ಪಲು ಆಯೋಗ ಸಿದ್ಧವಿರಲಿಲ್ಲ. ಇದುವೇ ಚುನಾವಣೆ ಆಯೋಗದ ಆಯುಕ್ತ ಜಿ.ವಿ.ಜಿ. ಕೃಷ್ಣಮೂರ್ತಿ ಮತ್ತು ಮುಖ್ಯ ಚುನಾವಣೆ ಆಯುಕ್ತ ಎಂ.ಎಸ್.ಗಿಲ್ ಮಧ್ಯೆ ಸಮ ರವೇ ನಡೆದಿತ್ತು. ಶಿವಸೇನೆಗೆ ಅನುಕೂಲ ಆಗುವ ರೀತಿಯಲ್ಲಿ ಗಿಲ್ ವರ್ತಿಸುತ್ತಿದ್ದಾರೆ ಎಂದು ಕೃಷ್ಣಮೂರ್ತಿ ಆಪಾದಿಸಿದ್ದರು.

ಅಂತೂ ಕೊನೆಗೆ ಮಧ್ಯಂತರ ಚುನಾವಣೆ ದೃಷ್ಟಿಯಿಂದ ಆಯೋಗ ದೊಂದಿಗೆ ಸಂಘರ್ಷ ತಪ್ಪಿಸುವ ಯತ್ನವಾಗಿ ಶಿವಸೇನೆ ಕೇಂದ್ರ ಕಛೇರಿಯಲ್ಲಿ ನಡೆದ ಸಭೆ ಯಲ್ಲಿ ಪಕ್ಷದ ಪ್ರತಿನಿಧಿಗಳು ಠಾಕರೆಯನ್ನು ಆಯ್ಕೆ ಮಾಡಿತು. ಬಾಳಠಾಕರೆ ಈ ಸಭೆ ಯಲ್ಲಿ ಹಾಜರಿರಲಿಲ್ಲ. ಅನುಪಸ್ಥಿತಿ ಯಲ್ಲಿಯೇ ಅವರು ಜೀವಾವಧಿ ಅಧ್ಯಕ್ಷರಾಗಿ ಆಯ್ಕೆಯಾದರು.

ಒಂದು ಪಕ್ಷ ಒಬ್ಬ ವ್ಯಕ್ತಿಯನ್ನು ಜೀವಾವಧಿ ಅಧ್ಯಕ್ಷಸ್ಥಾನಕ್ಕೆ ಆಯ್ಕೆ ಮಾಡುವುದು ಪಕ್ಷದ ಸರ್ವಾಧಿಕಾರಿ ಧೋರಣೆಯನ್ನು ತೋರಿಸುತ್ತದೆ. ಇದು ಶಿವಸೇನೆಯ ಹೊಸ ಲಕ್ಷಣವೇನು ಅಲ್ಲ. ಪಕ್ಷ ಹಾಗೂ ಠಾಕರೆಯ ಸರ್ವಾಧಿಕಾರಿತ್ವವನ್ನು ಇದು ಇನ್ನಷ್ಟು ಸ್ಫುಟಗೊಳಿಸಿ ತೋರಿಸಿದೆ.

ಅಸ್ಸಾಂ: ಸಾಮೂಹಿಕ ಪುಂಡುಗಂದಾಯಕ್ಕೆ ಸಿ.ಪಿ.ಐ.(ಎಂ) ವಿರೋಧ

ಗುವಾಹತಿ: ಅಸಾಂನ ಬೊಂಗೈಗಾಂವ್ ಜಿಲ್ಲೆಯ ಬಿಜನಿ ಪ್ರದೇಶದಲ್ಲಿ ಉಲ್ಫಾ ಭಯೋತ್ಪಾದಕರು ನವೆಂಬರ್ 27ರಂದು ಕಚ್ಚಾ ಎಣ್ಣೆಯ ಕೊಳವೆ ಮಾರ್ಗಗಳನ್ನು ಸ್ಫೋಟಿಸಿದರು. ಇದರಿಂದ ವ್ಯಾಪಕ ಹಾನಿ ಉಂಟಾಗಿದೆ.

ಈ ಸ್ಫೋಟ ನಡೆದ ಬಿಜನಿ ಪೊಲೀಸ್ ಠಾಣೆ ವ್ಯಾಪ್ತಿಯ ಐದು ಗ್ರಾಮಗಳ ಪ್ರತಿ ಕುಟುಂಬಗಳು ತಲಾ ಒಂದು ಸಾವಿರ ರೂ. ದಂಡ ತೆರುವಂತೆ ಬೊಂಗೈಗಾಂವ್ ಜಿಲ್ಲಾಡಳಿತ ಆದೇಶ ನೀಡಿದೆ. ಗ್ರಾಮಸ್ಥರ ಮೇಲೆ ದಂಡಗಳನ್ನು ಹೇರಿರುವುದನ್ನು ಸಿ.ಪಿ.ಐ(ಎಂ) ಅಸ್ಸಾಂ ರಾಜ್ಯಸಮಿತಿ ತೀವ್ರವಾಗಿ ವಿರೋಧಿಸಿದೆ.

ಉಗ್ರವಾದಿಗಳ ಕೃತ್ಯವನ್ನು ಪಕ್ಷ ಉಗ್ರವಾಗಿ ಖಂಡಿಸುತ್ತದೆ. ಆದರೆ ಅದೇ ಹೊತ್ತಿಗೆ ಮುಗ್ಧ ಜನರ ಮೇಲೆ ಪುಂಡುಗಂದಾಯ ಹೇರುವ ರಾಜ್ಯ ಸಕಾರದ ನಿರ್ಧಾರಕ್ಕೆ ತಕ್ಷಣ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತದೆ ಎಂದು ರಾಜ್ಯ ಸಮಿತಿ ಹೇಳಿದೆ.

ರಾಜಸ್ತಾನದಲ್ಲಿ ಗೋಳಿಬಾರಿಗೆ ಎ.ಐ.ಡಿ.ಡಬ್ಲ್ಯೂ.ಎ. ಖಂಡನೆ
ಬಿ.ಜೆ.ಪಿ. ರಾಜ್ಯದಲ್ಲಿ ಮಹಿಳೆಯರು, ರೈತರಿಗೆ ರಬ್ಬರ್ ಬುಲೆಟ್‌ಗಳು

ಡಿಸೆಂಬರ್ 10ರಂದು ರಾಜಸ್ತಾನ ಬಿ.ಜೆ.ಪಿ.ಸರ್ಕಾರದ ಪೋಲೀಸ್ ಗಂಗಾನಗರದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ನಿರ್ದಯ ಲಾಠೀ ಪ್ರಹಾರ ಹಾಗೂ ಗೋಳೀಬಾರು ನಡೆಸಿದ್ದನ್ನು ಎ.ಐ.ಡಿ. ಡಬ್ಲ್ಯೂ.ಎ. ಬಲವಾಗಿ ಖಂಡಿಸಿದೆ. ಇದರಲ್ಲಿ ಈ ಮಹಿಳಾ ಸಂಘಟನೆಯ ರಾಜಸ್ತಾನ್ ಘಟಕದ ಅಧ್ಯಕ್ಷೆ ಶ್ರೀಮತಿ ದುರ್ಗಾ ಸ್ವಾಮಿಯವರು ತೀವ್ರವಾಗಿ ಗಾಯಗೊಂಡಿದ್ದಾರೆ. ಪುರುಷ ಪೋಲೀಸರ ತೀವ್ರ ಹೊಡೆತಗಳಿಂದ ಅವರ ಭುಜದ ಕೀಲು ಮುರಿದಿದೆ. ಆಕೆ ಸ್ಥಳೀಯ ನಗರ ಸಭೆಯ ಚುನಾಯಿತ ಕಾರ್ಪೋರೇಟರ್ ಕೂಡಾ. ಇನ್ನೊಬ್ಬ ಮಹಿಳಾ ಪ್ರತಿಭಟನೆಕಾರರಾದ ಜೀತ್ ಕೌರ್‌ರವರಿಗೆ ತಲೆಗೆ ಏಟು ಬಿದ್ದಿದೆ. ಆಸ್ಪತ್ರೆಗೆ ಸೇರಿಸಬೇಕಾಗಿ ಬಂದ 15 ಮಂದಿಯಲ್ಲಿ 6 ಜನ ಮಹಿಳೆಯರು.

ರಾಜಸ್ತಾನ ಸರ್ಕಾರ ಗಂಗಾನಗರ ಜಿಲ್ಲೆಯಲ್ಲಿ ಅಪಾರ ಹಾನಿ ಅನುಭವಿಸಿದ ಹತ್ತಿ ಬೆಳೆಗಾರರಿಗೆ ಪರಿಹಾರ ಕೊಡುವ ವಚನ ನೀಡಿತ್ತು. ಅದನ್ನು ಈಡೇರಿಸಿ ಎಂದು ಕಿಸಾನ್ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆದಿತ್ತು. ಎ.ಐ.ಡಿ. ಡಬ್ಲ್ಯೂ.ಎ. ನೇತೃತ್ವದ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಈ ಹಿಂದೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮನವಿ ಪತ್ರ ಕೊಡಲು ಪ್ರತಿಭಟನಾಕಾರರು ಕಲೆಕ್ಟರ್ ಕಛೇರಿಯ ಬಳಿ ಬಂದಾಗ ಅವರನ್ನು ಚದುರಿಸ ಬಯಸಿದ ಕಾಂಗ್ರೆಸ್ ಯಾವುದೇ ಮುನ್ನೆಚ್ಚರಿಕೆ ಕೊಡದೆ ಲಾಠೀ ಪ್ರಹಾರ ಪ್ರಾರಂಭಿಸಿತು. ನಂತರ ಅಶ್ರುವಾಯು, ರಬ್ಬರ್ ಗೋಲಿಬಾರಿಗೂ ಕೈ ಹಾಕಿತು. ದುರ್ಗಾ ಸ್ವಾಮಿಯವರ ಮೇಲೆ ಗುರಿಯಿಟ್ಟೇ ಪ್ರಹಾರ ಮಾಡಲಾಗಿತ್ತು. ಏಕೆಂದರೆ ಅವರು ಕಾರ್ಪೋರೇಟರ್ ಆಗಿ ಹಾಗೂ ಪ್ರಮುಖ ಮಹಿಳಾ ಹಕ್ಕುಗಳ ಪ್ರತಿಪಾದಕರಾಗಿ ಭ್ರಷ್ಟ ಅಧಿಕಾರಿಗಳ ಮತ್ತು ಪೋಲೀಸರ ಶಾಮೀಲಿನ ವಿರುದ್ಧ ಹೋರಾಟಗಳನ್ನು ನಡೆ ಸುತ್ತಿರುವವರು. ಮೂವರು ರೈತ ಮುಖಂಡರಿಗೂ ತೀವ್ರ ಗಾಯವಾಗಿದೆ.

ಮಹಿಳೆಯರೊಂದಿಗೆ ಅಮಾನುಷ ವರ್ತನೆ ರಾಜಸ್ಥಾನದ ಬಿಜೆಪಿ ಸರಕಾರದ ಪ್ರಮುಖ ಲಕ್ಷಣವಾಗಿ ಬಿಟ್ಟಿದೆ. ಇತ್ತೀಚಿನ ಈ ಅಮಾನುಷ ವರ್ತನೆಗೆ ಕಾರಣವಾದ ಅಧಿಕಾರಿಗಳನ್ನು, ನಿರ್ದಿಷ್ಟವಾಗಿ, ಅಸಿಸ್ಟೆಂಟ್ ಜಿಲ್ಲಾ ಮ್ಯಾಜಿಸ್ಟ್ರೇಟ್, ಅಡಿಶನಲ್ ಎಸ್.ಪಿ. ಜೋಗಿಂದರ್ ಸಿಂಗ್ ಮತ್ತು ಡಿ.ಎಸ್.ಪಿ. ಹರಿಕುತ್ರಾ ರವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಎಐಡಿ ಡಬ್ಲ್ಯುಎ ಆಗ್ರಹಿಸಿದೆ. ಜಿಲ್ಲೆಯ ಹತ್ತಿ ಬೆಳೆಗಾರರಿಗೆ ಕೊಟ್ಟಿರುವ ತನ್ನ ವಚನವನ್ನು ಬಿಜೆಪಿ ಸರಕಾರ ಈಡೇರಿಸಬೇಕೆಂದು ಅದು ಆಗ್ರಹಿಸಿದೆ.

"ಹೋರಾಟದ ಅಸ್ತ್ರವನ್ನು ಮೊನಚು ಮಾಡಬೇಕು"

ರಾಜ್ಯದಲ್ಲಿ ಮಹತ್ತರ ರಾಜಕೀಯ ಬದಲಾವಣೆಯಾಗಬೇಕಾದರೆ ಹೋರಾಟದ ಅಸ್ತ್ರವನ್ನು ಮೊನಚು ಮಾಡಬೇಕು ಮತ್ತು ಸಂಘಟನೆಯನ್ನು ವಿಸ್ತರಣೆ ಮಾಡಬೇಕೆಂದು ಸಿ.ಪಿ.ಐ.(ಎಂ) ಆಂಧ್ರ ಪ್ರದೇಶ ರಾಜ್ಯ 19 ನೇ ಸಮ್ಮೇಳನ ಕರೆ ನೀಡಿದೆ.

ವೀರ ತೆಲಂಗಾಣ ಪ್ರದೇಶದ ನಲಗೊಂಡದಲ್ಲಿ ನವೆಂಬರ್ 30ರಿಂದ ಡಿಸೆಂಬರ್ 3ರವರೆಗೆ ನಡೆದ ಈ ಸಮ್ಮೇಳನವು ಕೇವಲ ಸರಿಯಾದ ರಾಜಕೀಯ ದೃಷ್ಟಿಕೋನದಿಂದ ಮಾತ್ರ ಪಕ್ಷ ಕಟ್ಟಲು ಸಾಧ್ಯವಿಲ್ಲ, ತೆಗೆದು ಕೊಂಡ ತೀರ್ಮಾನಗಳನ್ನು ಜಾರಿಮಾಡಿದಾಗ ಮಾತ್ರ ಪಕ್ಷ ಕಟ್ಟಲು ಸಾಧ್ಯ ಎಂದು ಒತ್ತಿ ಹೇಳಿದೆ.

ಅರ್ಧಕ್ಕೂ ಹೆಚ್ಚು ಯುವಕರಿದ್ದು, ಒಟ್ಟಾರೆ 532 ಪ್ರತಿನಿಧಿಗಳು ಮತ್ತು 33 ವೀಕ್ಷಕರು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಶೇ 40ಕ್ಕೂ ಹೆಚ್ಚು ಪ್ರತಿನಿಧಿಗಳು ಕೃಷಿ ಕೂಲಿಕಾರರು ಮತ್ತು ಬಡ ರೈತರ ಮಟ್ಟದಿಂದ ಬಂದವರಾಗಿದ್ದರು. ಮಹಿಳಾ ಪ್ರತಿನಿಧಿಗಳ ಸಂಖ್ಯೆ 39 ಇತ್ತು.

ಸಮ್ಮೇಳನಗಳ ನಡುವಿನ ಕೆಲಸ

ರಾಜಕೀಯ ವರದಿಯನ್ನು ಮಂಡಿಸಿದ ಕಾಂ. ಕೆ. ಸತ್ಯನಾರಾಯಣರವರು ಹೈದ್ರಾಬಾದ್ ಸಮ್ಮೇಳನದ ನಂತರದ ಅನುಭವಗಳನ್ನು ವಿವರಿಸುತ್ತಾ, 18ನೇ ಸಮ್ಮೇಳನದಲ್ಲಿ ವರ್ಗ ಹೋರಾಟಗಳು ಮತ್ತು ಕಮ್ಯುನಿಸ್ಟ್ ಕೆಲಸದ ಶೈಲಿಯನ್ನು ಪುನಃ ವಿಮರ್ಶಿಸಿಕೊಳ್ಳಲು ಕರೆ ನೀಡಿತ್ತು, ಕಳೆದ ಎರಡು ವರ್ಷಗಳಲ್ಲಿ ಈ ದಿಕ್ಕಿನಲ್ಲಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ ಮತ್ತು ಇದರಿಂದ ಪಕ್ಷದ ಬೆಳವಣಿಗೆಗೆ ಬಹಳ ಸಹಾಯವಾಗಿದೆ, ಆದರೆ ಇದು ಕೇವಲ ಆರಂಭ ಮಾತ್ರ ಎಂದರು.

ಕೂಲಿಗಾಗಿ ನಡೆದ ಹೋರಾಟವು 1996ರಲ್ಲಿ 4000 ಹಳ್ಳಿಗಳನ್ನು ತಲುಪಿದ್ದರೆ, 1997ರಲ್ಲಿ 6000 ಹಳ್ಳಿಗಳನ್ನು ತಲುಪಿದೆ, ಇದರಿಂದ ದಲಿತರ ಮತ್ತು ಸಾಮಾಜಿಕ ದಮನಕ್ಕೊಳಗಾದವರನ್ನು ಪಕ್ಷದ ಹತ್ತಿರ ಸೆಳೆಯಲು ಸಾಧ್ಯವಾಗಿದ್ದರೆ, ಕೆಲವರನ್ನು ಪಕ್ಷಕ್ಕೂ ಸೆಳೆಯಲಾಗಿದೆ. ಆದ್ದರಿಂದ ಈ ಹೋರಾಟವನ್ನು, ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ಬೆಸೆದು ಮುಂದುವರೆಸ ಬೇಕಾಗಿದೆ ಮತ್ತು ಭೂಮಿ, ಕೂಲಿ, ಜೀವನ ಭದ್ರತೆ, ಮರ್ಧನದ ವಿರುದ್ಧ, ನಿವೇಷನಗಳಿಗಾಗಿ, ಈ ಹೋರಾಟವನ್ನು ಮತ್ತಷ್ಟು ಬಲಿಷ್ಠಗೊಳಿಸ ಬೇಕಾಗಿದೆ ಎಂದರು.

ಸಂಘಟನೆ :

ಪಕ್ಷದ ಸಂಘಟನೆಯನ್ನು ವಿಮರ್ಶಿಸುತ್ತಾ, ಈ ಅವಧಿಯಲ್ಲಿ 80,000 ಕಾರ್ಯಕರ್ತರಿಗೆ ರಾಜಕೀಯ ಶಿಕ್ಷಣ ನೀಡಲಾಗಿದೆ, ಆದರೆ ಇದನ್ನು ನಿರ್ಲಕ್ಷಿಸದೆ ಮುಂದುವರೆಸಬೇಕೆಂದು ಸಮ್ಮೇಳನ ತೀರ್ಮಾನಿಸಿತು.

ಪ್ರಜಾಶಕ್ತಿ ಈ ಅವಧಿಯಲ್ಲಿ ಗಣನೀಯವಾಗಿ ಮುನ್ನಡೆ ಸಾಧಿಸಿದೆ, ಹೈದ್ರಬಾದ್, ವಿಜಯವಾಡ ಅಲ್ಲದೆ ಈಗ ವಿಶಾಖ ಪಟ್ಟಣದಿಂದ ಮೂರನೇ ಆವೃತ್ತಿ ಆರಂಭಿಸಲಾಗಿದೆ, ಆದರೂ ಇದು ಇನ್ನೂ ಶೇ. 50ರಷ್ಟು ಪಕ್ಷದ ಶಾಖೆಗಳಿಗೆ ಮುಟ್ಟುತ್ತಿಲ್ಲ ಎಂದು ಸಮ್ಮೇಳನ ಗುರ್ತಿಸಿತು. ಪ್ರಜಾಶಕ್ತಿಯು ಪ್ರಚಾರ ಹೆಚ್ಚಿಸಲು ಎಲ್ಲಾ ಶಾಖೆಗಳು ಪ್ರಯತ್ನಿಸ ಬೇಕೆಂದು ಕರೆ ನೀಡಿತು.

ನಿರ್ಣಯಗಳು :-

ರಾಜ್ಯದಲ್ಲೆಲ್ಲ ವಿಶೇಷವಾಗಿ ತೆಲಂಗಾಣದಲ್ಲಿ ಪ್ರತ್ಯೇಕತೆಯ ಕೂಗು ಕೇಳಿಬರುತ್ತಿದೆ. ಆದರೆ ಪ್ರಾದೇಶಿಕವಾಗಿ ಹಿಂದುಳಿದವರಿಗೆ ಪ್ರತ್ಯೇಕತೆ ಪರಿಹಾರವಲ್ಲ ಎಂದು ಸಮ್ಮೇಳನ ಅದನ್ನು ವಿರೋಧಿಸಿ ಅವಿರೋಧವಾಗಿ ನಿರ್ಣಯ ಅಂಗೀಕರಿಸಿತು.

ರಾಜ್ಯದ ಪ್ರಮುಖ ಜಾತ್ಯಾತೀತ ಶಕ್ತಿಯಾದ ಟಿ.ಡಿ.ಪಿ. ಜೊತೆ ಚುನಾವಣೆ ಹೊಂದಾಣಿಕೆ ಮಾಡಿಕೊಳ್ಳುವುದು- ಆದರೂ ಅದರ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹೋರಾಡಬೇಕೆಂದು ಮತ್ತೊಂದು ನಿರ್ಣಯ ಅಂಗೀಕರಿಸಿತು.

ಬರ ಪರಿಹಾರಕ್ಕೆ ಒತ್ತಾಯಿಸಿ, ಜಾತಿ ವಿಭಜನೆಯ ವಿರುದ್ಧ, ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಿಸಲು ನಿರ್ಣಯಗಳನ್ನು ಅಂಗೀಕರಿಸಲಾಯ್ತು.

ಕೊನೆಯಲ್ಲಿ ನೂತನ ರಾಜ್ಯ ಸಮಿತಿ, ಮೂವರು ಸದಸ್ಯರು ನಿಯಂತ್ರಣ ಆಯೋಗಗಳನ್ನು ರಚಿಸಲಾಯ್ತು. ರಾಜ್ಯ ಕಾರ್ಯದರ್ಶಿಯಾಗಿ ಅನಾರೋಗ್ಯ ನಿಮಿತ್ತ ನಿವೃತ್ತರಾದ ಕೆ. ಸತ್ಯನಾರಾಯಣರವರ ಸ್ಥಾನಕ್ಕೆ ಕಾಂ. ಬಿ.ವಿ. ರಾಘವಲು ಆಯ್ಕೆಯಾದರು. ರಾಜ್ಯ ನಿಯಂತ್ರಣ ಆಯೋಗಕ್ಕೆ ಪಾರ್ಸ ಸತ್ಯನಾರಾಯಣ ಅಧ್ಯಕ್ಷರಾಗಿ ಆರ್. ರೆಡ್ಡಿ, ರಮಾದೇವಿ ಸದಸ್ಯರಾಗಿ ಆಯ್ಕೆಯಾದರು.

○

"ದುಡ್ಡಿಗೆ ದೂರಿಯಾಡೋರ ದಫನ ಮಾಡೋಣ"
ಸಿ.ಪಿ.ಐ.(ಎಂ) ತ್ರಿಪುರ ರಾಜ್ಯ ಸಮ್ಮೇಳನ ಕರೆ

ಸಾಮ್ರಾಜ್ಯಶಾಹಿ ಏಜೆಂಟರು ಮತ್ತು ಅವರ ಮಿತ್ರರ, ವಿಚ್ಛಿದ್ರಕಾರಿ ಪ್ರವೃತ್ತಿ ಗಳನ್ನು ತಡೆಯಲು ತ್ರಿಪುರ ರಾಜ್ಯ ಸಿ.ಪಿ.ಐ.(ಎಂ) 16ನೇ ಸಮ್ಮೇಳನ ಕರೆ ನೀಡಿದೆ. ಈ ಶಕ್ತಿಗಳನ್ನು ಹದ್ದುಬಸ್ತಿನಲ್ಲಿಡಬೇಕು ಮತ್ತು ಪಕ್ಷದ ಶಕ್ತಿ ಯನ್ನು ವಿಸ್ತರಿಸಿ, ಕ್ರೋಢಿಕರಿಸಿ ಮುಂಬರುವ ಚುನಾವಣೆಗಳಲ್ಲಿ ಎಡರಂಗ ಜಯಭೇರಿ ಬಾರಿಸಲು ಕೆಲಸ ಮಾಡಬೇಕೆಂದು ಕರೆ ನೀಡುತ್ತಾ ಮೂರು ದಿನಗಳ ಕಾಲ ನಡೆದ ಈ ಸಮ್ಮೇಳನ ಡಿ. 14ರಂದು ಮುಕ್ತಾಯಗೊಂಡಿತು.

ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಭಾಗವಹಿಸಿದ್ದ ಸಮ್ಮೇಳನದಲ್ಲಿ ಶೇ 74ರಷ್ಟು ಜನರು ಅತ್ಯಂತ ಬಡ ವಿಭಾಗಗಳಿಂದ ಬಂದವರಾಗಿದ್ದರು ಮತ್ತು, 95 ಪ್ರತಿನಿಧಿಗಳು ಪರಿಶಿಷ್ಟ ಜಾತಿ ಪಂಗಡಗಳಿಂದ, 123 ಜನರು ವಿವಿಧ ಮಟ್ಟಗಳ ಚುನಾಯಿತ ಪ್ರತಿನಿಧಿಗಳಾಗಿದ್ದರು.

ರಾಜಕೀಯ ಸಂಘಟನಾತ್ಮಕ ಕರಡು ವರದಿಯನ್ನು ಪ್ರಧಾನ ಕಾರ್ಯದರ್ಶಿ ಕಾಂ. ಮಾಣಿಕ್ ಸರ್ಕಾರ್ ಮಂಡಿಸಿದರು. 51 ಜನರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ ಅದನ್ನು ಅವಿರೋಧವಾಗಿ ಅಂಗೀಕರಿಸಲಾಯ್ತು. ಚರ್ಚೆಗೆ ಉತ್ತರಿಸಿದ ಕಾಂ. ಸರ್ಕಾರ್‌ರವರು ಪ್ರತಿನಿಧಿಗಳ ಚರ್ಚೆಯಲ್ಲಿ ಹೊಸ ಜನರನ್ನು ಪಕ್ಷದ ಕಡೆ ಸೆಳೆದುಕೊಂಡು, ಮೂಡಿ ಬರುತ್ತಿರುವ ಶಕ್ತಿಯನ್ನು ಕ್ರೋಢಿಕರಿಸಿ, ಪಕ್ಷದ ತಳಪಾಯವನ್ನು ಭದ್ರಪಡಿಸಿ ವಿಸ್ತರಿಸಬೇಕೆಂಬುದು ಚರ್ಚೆಯ ಪ್ರಮುಖ ಅಂಶವಾಗಿತ್ತು ಎಂದರಲ್ಲದೆ, ಮುಂಬರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಜಯಭೇರಿ ಬಾರಿಸಲು ಹೊಸ ವಿಭಾಗಗಳನ್ನು ಅಣಿನೆರೆಸಬೇಕು ಮತ್ತು ಎಡರಂಗದ ಪರವಾಗಿ ಮತಗಳಿಕೆ ಮತ್ತು ಸ್ಥಾನಗಳಿಕೆಯೂ ಹೆಚ್ಚಾಗಬೇಕೆಂದು ಕರೆ ನೀಡಿದರು.

ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಕಾಂ. ಪ್ರಕಾಶ್ ಕಾರಟ್‌ರವರು, ಮುಂಬರುವ ಚುನಾವಣೆಗಳಲ್ಲಿ ಎಡ-ಜಾತ್ಯಾತೀತ ಶಕ್ತಿಗಳನ್ನು ಕ್ರೋಢಿಕರಿಸಲು ಸಾಧ್ಯವಾದ ಎಲ್ಲಾ ಪ್ರಯತ್ನವನ್ನು ಮಾಡಬೇಕೆಂದು ಕರೆ ನೀಡಿದರು. ಮುಂದುವರಿದು ಇಂದು ನಮ್ಮ ಪ್ರಥಮ ಕರ್ತವ್ಯವೆಂದರೆ ಮುಳುಗುತ್ತಿರುವ ದೋಣಿಯಾದ ಕಾಂಗ್ರೆಸ್‌ನಿಂದ ಫ್ಯಾಸಿಸ್ಟ್ ಮತ್ತು ಮೂಲಭೂತವಾದಿ ಶಕ್ತಿಗಳಾದ ಬಿ.ಜೆ.ಪಿ. ಮತ್ತದರ ಕೂಟ ಲಾಭ ಮಾಡಿ ಕೊಳ್ಳುವುದನ್ನು ತಡೆಯಬೇಕಾಗಿರುವುದು ಅದಕ್ಕಾಗಿ ಹಿಂದುಳಿದ ಮತ್ತು ಮಧ್ಯಮ ವರ್ಗದ ಜನತೆಯನ್ನು ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಪರವಾಗಿ ಕ್ರೋಢೀಕರಿಸಬೇಕಾಗಿರುವುದು ಎಂದರು.

ಕಮ್ಯುನಿಸ್ಟರನ್ನು ಮಟ್ಟಹಾಕಲು ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯವಾಗಿ ಧನಸಹಾಯ ಪಡೆದು ಕೆಲಸ ಮಾಡುತ್ತಿರುವ ಅಪಾಯಕಾರಿ ಶಕ್ತಿಗಳ ಮಧ್ಯೆ ಎಡಶಕ್ತಿಗಳನ್ನು ಬಲಪಡಿಸಲು ದುಡಿಯುತ್ತಿರುವ ಸಿ.ಪಿ.ಐ. (ಎಂ) ಕಾರ್ಯಕರ್ತರನ್ನು ಹೊಗಳಿದರು.

ಕೊನೆಯಲ್ಲಿ ಅವಿರೋಧವಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ, ರಾಜ್ಯ ಸಮಿತಿ ಮತ್ತು ನಿಯಂತ್ರಣ ಆಯೋಗಗಳನ್ನು ರಚಿಸಲಾಯ್ತು. 70ಜನರ ರಾಜ್ಯ ಸಮಿತಿಯಲ್ಲಿ ಕಾರ್ಯದರ್ಶಿಯಾಗಿ ಕಾಂ|| ಮಾಣಿಕ್ ಸರ್ಕಾರ್, 14 ಮಂದಿ ಕಾರ್ಯದರ್ಶಿ ಮಂಡಳಿಗೆ ಪುನರ್‌ಆಯ್ಕೆ ಗೊಂಡರು ಮತ್ತು ಮೂವರನ್ನೊಳಗೊಂಡ ನಿಯಂತ್ರಣ ಆಯೋಗವನ್ನು ರಚಿಸಲಾಯಿತು.

ಐಕ್ಯತೆಯ ಪ್ರತೀಕವಾದ ಜನಸಾಗರ

ಡಿ. 12ರಂದು ಇಡೀ ರಾಜಧಾನಿ ಅಗರ್ತಲಾ ಜನಸಾಗರವಾಗಿತ್ತು. ಸಿಪಿಐ(ಎಂ) ರಾಜ್ಯ ಸಮ್ಮೇಳನದ ಅಂಗವಾಗಿ ನಡೆದ ಈ ರ್‍ಯಾಲಿಯಲ್ಲಿ ರಾಜ್ಯದ ಸಿಪಿಐ(ಎಂ) ನ ಐಕ್ಯತೆಯ ಪ್ರತೀಕವಾಗಿತ್ತು. ಈ ಜನಸಾಗರವನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ| ಸುರ್ಜಿತ್ ಮಾತನಾಡುತ್ತಾ ಕಾಂಗ್ರೆಸ್ ಅಧಿಕಾರದ ದುರಾಸೆ ಮತ್ತು ಅದರ ಜನವಿರೋಧಿ ನಿಲುವುಗಳು ದೇಶವನ್ನು ಈ ಸ್ಥಿತಿಗೆ ತಂದಿವೆ, ಕಾಂಗ್ರೆಸ್‌ನ ಪಾದದಡಿ ಬೀಳುತ್ತಿರುವ ಬಿಜೆಪಿಯನ್ನು ಸೋಲಿಸಬೇಕು ಅದಕ್ಕಾಗಿ ಮುಂಬರುವ ಚುನಾವಣೆಗಳಲ್ಲಿ ಈ ಎರಡೂ ಶಕ್ತಿಗಳನ್ನು ಸದೆಬಡಿದು ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳನ್ನು ಗೆಲ್ಲಿಸಬೇಕೆಂದು ಕರೆ ನೀಡಿದರು.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಇತರ ಮುಖಂಡರುಗಳಲ್ಲಿ ಕಾಂ|| ಮಾಣಿಕ ಸರ್ಕಾರ್ ಸಿಪಿಐ(ಎಂ)ನ ಇತಿಹಾಸವನ್ನು ವಿವರಿಸಿದರೆ, ಕಾಂ|| ದಶರತ್ ದೇಬ್ ಅವರು 3 ರಾಜ್ಯಗಳಲ್ಲಿ ಎಡರಂಗ ಸರ್ಕಾರಗಳ ಸಾಧನೆಗಳನ್ನು ವಿವರಿಸಿದರು.

○

ಎಎನ್‌ಸಿಯ 50ನೇ ಮಹಾಧಿವೇಶನ - ಮೊಬೊಕಿ ಹೊಸ ಅಧ್ಯಕ್ಷ



ಶರತ್ ಚಂದ್ರ

ದಕ್ಷಿಣ ಆಫ್ರಿಕಾವನ್ನು ವರ್ಣಭೇದದ ಕತ್ತಲಿಂದ ಹೊರತರಲು ಹೋರಾಟ ನಡೆಸಿದ, ಈಗ ವರ್ಣಭೇದ-ರಹಿತ, ಪ್ರಜಾಸತ್ತಾತ್ಮಕ ಹೊಸ ದಕ್ಷಿಣ ಆಫ್ರಿಕಾ ಕಟ್ಟಲು ಶ್ರಮಿಸುತ್ತಿರುವ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ಎಎನ್‌ಸಿ) ತನ್ನ ತ್ರೈವಾರ್ಷಿಕ ಮಹಾಧಿವೇಶನವನ್ನು ನಡೆಸಿತು. ಎಎನ್‌ಸಿ ಯ ಈ ಮಹಾ ಧಿವೇಶನ ಅತ್ಯಂತ ಮಹತ್ವಪೂರ್ಣವಾಗಿದ್ದು, ದೇಶದ ಹಿರಿಯ ಮುತ್ಸದ್ದಿ ನಾಯಕ ನೆಲ್ಸನ್ ಮಂಡೆಲಾ ಸಂಘಟನೆಯ ಅಧ್ಯಕ್ಷ ಪದವಿಯಿಂದ ನಿವೃತ್ತರಾದರು. ಅವರ ಸ್ಥಾನದಲ್ಲಿ ತಾಂಬೊ ಮಬೊಕಿ ಎಎನ್‌ಸಿ ಯ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದರು. 1999 ರಲ್ಲಿ ನಡೆಯುವ ಚುನಾವಣೆಯಲ್ಲಿ ನೆಲ್ಸನ್ ಮಂಡೇಲಾ ದೇಶದ ಅಧ್ಯಕ್ಷ ಪದವಿಗೆ ಸ್ಪರ್ಧಿಸದಿರುವುದರಿಂದ ನಿವೃತ್ತರಾಗುತ್ತಾರೆ. ಆ ಸ್ಥಾನಕ್ಕೆ ತಾಂಬೊ ಮಬೊಕಿಯವರೇ ಎಎನ್‌ಸಿ ಯ ಆಯ್ಕೆ.

ನಿವೃತ್ತರಾಗುತ್ತಿರುವ ಅಧ್ಯಕ್ಷ ನೆಲ್ಸನ್ ಮಂಡೆಲಾರವರು ಮಹಾಧಿವೇಶನವನ್ನು ಉದ್ದೇಶಿಸಿ ಮಾಡಿದ ದೀರ್ಘ ಭಾಷಣ ಗಮನಾರ್ಹವಾಗಿತ್ತು. ಕಳೆದ ಮೂರು ವರ್ಷಗಳಲ್ಲಿ ವರ್ಣಭೇದದ ದಕ್ಷಿಣ ಆಫ್ರಿಕಾವನ್ನು, ಬದಲಾಯಿಸುವ ಪ್ರಕ್ರಿಯೆಯಲ್ಲಿ ಆಗಿರುವ ಸಾಧನೆಗಳು, ಸಮಸ್ಯೆಗಳ ಬಗ್ಗೆ ಮಂಡೆಲಾ ಬಿಚ್ಚು ನುಡಿಗಳಲ್ಲಿ ಮಾತನಾಡಿದರು. ಹೊಸ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾ ಕಟ್ಟುವಲ್ಲಿ, ಪ್ರತಿಹೆಜ್ಜೆಯಲ್ಲೂ ಅಡ್ಡಗಾಲಿಡುತ್ತಿರುವ ಬಿಳಿಯರ ಪಕ್ಷಗಳು, ಸಂಘಟನೆಗಳನ್ನು (ಅದರಲ್ಲೂ ಮಾಜಿ ಆಳುವ ಪಕ್ಷ ನ್ಯಾಷನಲ್ ಪಾರ್ಟಿ) ಮಂಡೆಲಾ ತರಾಟೆಗೆ ತೆಗೆದುಕೊಂಡರು. ರಾಷ್ಟ್ರೀಯ ಸಮಜಾಯಿಷಿಯ ಇನ್ನೊಂದು ಮುಖವೆಂದರೆ ಬದಲಾವಣೆ, ಸಮಜಾಯಿಷಿಯನ್ನು ಯಥಾಸ್ಥಿತಿ ಮುಂದುವರಿಸುವುದು ಎಂದು ಬಗೆಯುವ ವರ್ಣಭೇಧದ ಸವಲತ್ತುಗಳನ್ನು ಮುಂದುವರೆಸುವ ಬಿಳಿಯ ಶಕ್ತಿಗಳು, ಇದು ಬಿಳಿಯರ ಹಿತಾಸಕ್ತಿಯಲ್ಲಿಲ್ಲ, ಪ್ರಜಾಸತ್ತೆ ಬಿಳಿಯರಿಗೂ ಭವಿಷ್ಯತ್ತು ನೀಡುವಂತಹದು ಎಂದರು. ಎಎನ್‌ಸಿಗೆ ಕಳೆದ ಮೂರು ವರ್ಷಗಳಲ್ಲಿ ಬಿಳಿಯರು, ಆಫ್ರಿಕ್‌ನ್ನರು (ಬಿಳಿ ಕಿಂಪುಮಿಶ್ರಿತ ಸಂತತಿಯವರು), ಹಾಗೂ ಭಾರತೀಯ ಮೂಲದವರನ್ನು (ಇವು ಮೂರು ಪ್ರಮುಖ ಅಲ್ಪ ಸಂಖ್ಯಾತ ಜನಾಂಗಗಳು) ಸಂಘಟನೆಗೆ ಆಕರ್ಷಿಸುವುದು ಸಾಧ್ಯವಾಗಿಲ್ಲ. ಇದಕ್ಕೆ ಸತತ ಶ್ರಮಿಸಬೇಕು. ಇದು ಈಗಾಗಲೇ ಆಗದಿರುವುದು ಮುಂದೆ ಅಪಾಯಕಾರಿ ಜನಾಂಗೀಯ ಸಮಸ್ಯೆಗಳಿಗೆ ಎಡೆಗೊಡಬಹುದು ಎಂದು ಎಚ್ಚರಿಸಿದರು.

ವಿದೇಶೀ ಹಣ ಪಡೆಯುವ ಸಂಘಟನೆಗಳು ಹಾಗೂ ದಕ್ಷಿಣ ಆಫ್ರಿಕಾದ ಸುದ್ದಿ ಮಾಧ್ಯಮಗಳು ಎಎನ್‌ಸಿಗೆ ಪ್ರಮುಖ ವಿರೋಧ ಪಕ್ಷದಂತೆ ಕೆಲಸ ಮಾಡುತ್ತಿವೆ. ಇವೂ ಬಿಳಿಯ ಅಲ್ಪಸಂಖ್ಯಾತರ ಸವಲತ್ತುಗಳನ್ನು ಎತ್ತಿ ಹಿಡಿದು ಬದಲಾವಣೆಗೆ ಅಡ್ಡಗಾಲು ಇಡುವ ಕೆಲಸ ಮಾಡುತ್ತಿವೆ ಎಂದು ಮಂಡೇಲಾ ಟೀಕಿಸಿದರು.

ಎಎನ್‌ಸಿ ಮಹಾಧೀವೇಶನದಲ್ಲಿ ನೆರೆದಿದ್ದ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಸಮಿತಿಯ 60 ಸದಸ್ಯರನ್ನು ಚುನಾಯಿಸಿದರು. ನಾಯಕರಾದ ವಾಲ್ಟರ್ ಸಿಸಿಲು ಮತ್ತು ಗೊವನ್ ಮಬೊಕಿ (ಹೊಸ ಚುನಾಯಿತ ಅಧ್ಯಕ್ಷರ ತಂದೆ) ಸಹ ನಿವೃತ್ತರಾದರು. ಹೊಸ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಎಎನ್‌ಸಿಯ ವರ್ಣಭೇಧ-ರಹಿತ ಸಮಾನತೆ, ಪ್ರಜಾಸತ್ತೆಯನ್ನು ಎಷ್ಟರಮಟ್ಟಿಗೆ ಅರಗಿಸಿಕೊಂಡಿದೆ ಎಂಬುದನ್ನು ಪ್ರತಿಬಿಂಬಿಸಿತು.

60 ಸದಸ್ಯರ ಸಮಿತಿಯಲ್ಲಿ ಒಂಭತ್ತು ಭಾರತೀಯರು (ಮೂಲದವರು) ಐದು ಜನ ಬಿಳಿಯರು, ಮೂರು ಮಿಶ್ರ ಸಂತತಿಯವರು ಇದ್ದರು. ಹದಿನೈದು ಸದಸ್ಯರು ಮಹಿಳೆಯರು. ಇವರಲ್ಲೂ ತಲಾ ಒಬ್ಬ ಬಿಳಿಯ, ಭಾರತೀಯ ಹಾಗೂ ಮಿಶ್ರ ಸಂತತಿಯ ಸದಸ್ಯರಿದ್ದರು. ಅಲ್ಲದೆ ಮೂರು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಇದ್ದರು. (ಕಮ್ಯುನಿಸ್ಟ್ ಪಕ್ಷದ ಸದಸ್ಯರು ಎಎನ್‌ಸಿಯಲ್ಲೂ ಸದಸ್ಯರಾಗಬಹುದು). ಜೆಕೋಬಾ ಝೂಮಾ ಅವರು ಅವಿರೋಧವಾಗಿ ಉಪಾಧ್ಯಕ್ಷರಾಗಿ ಚುನಾಯಿತರಾದರು.

ಮಹಾಧಿವೇಶನದಲ್ಲಿ ಭಾಗವಹಿಸಿದ ಮೂರು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು 1.35 ಲಕ್ಷ ಸದಸ್ಯರಿಂದ ಶಾಖೆಗಳಿಂದ ಪ್ರಾಂತ್ಯಗಳಿಂದ ಆಯ್ಕೆಯಾಗಿ ಬಂದವರು. ಇವುಗಳಲ್ಲಿ ಎಎನ್‌ಸಿ ಯ ಯುವಕ ಮಹಿಳಾ ಸಂಘಟನೆಗಳೂ ಸೇರಿವೆ. ಎಎನ್‌ಸಿ ಯ ಕಾರ್ಯಕಾರಿಣಿ ಸಮಿತಿಗೆ ಸ್ಪರ್ಧಿಸಬೇಕಾದರೆ, ಅಭ್ಯರ್ಥಿಗಳು ಎಎನ್‌ಸಿಯ ಮಹಿಳಾ ಯುವಕ ಘಟಕ ಅಥವಾ ಯಾವುದೇ ಪ್ರಾಂತೀಯ ಘಟಕದಿಂದ ಶಿಫಾರಸ್ಸು ಪಡೆಯಬೇಕು. ಮಹಾಧಿವೇಶನದಲ್ಲೇ ಸ್ಪರ್ಧಿಸುವುದಾದರೆ, ಶೇಕಡಾ 10 ರಷ್ಟು ಪ್ರತಿನಿಧಿಗಳು ಶಿಫಾರಸ್ಸು ಮಾಡಬೇಕು. ಎಎನ್‌ಸಿಯನ್ನು ಸಂಘಟನೆ ಅತ್ಯಂತ ಪ್ರಜಾಸತ್ತಾತ್ಮಕವಾಗಿ ನಡೆಸಲಾಗುತ್ತಿದೆ.

ಈ ನಡುವೆ ಮಾಜಿ ಅಧ್ಯಕ್ಷ ಬೋಥಾರನ್ನು ಬಂಧಿಸುವ ಸಾಧ್ಯತೆ ಇದೆ. ದೇಶದ ವರ್ಣಭೇಧ ಅವಧಿಯಲ್ಲಿ ನಡೆದ ಅತ್ಯಾಚಾರ, ದುಷ್ಕೃತ್ಯಗಳ ಬಗ್ಗೆ ವಿಚಾರಣೆ ನಡೆಸುತ್ತಿರುವ ಕಮಿಶನ್ ಮುಂದೆ ಕರೆದರೂ ಹಾಜರಾಗದೆ ಅವರು ಕಮಿಶನ್‌ಗೆ ಅಗೌರವ ತೋರಿದ್ದಾರೆ. ಈಗಿನ ಕಾನೂನು ಪ್ರಕಾರ ಎರಡು ವಾರಗಳ ಒಳಗೆ, ಅವರ ಮೇಲೆ ಅಗೌರವ ಮೊಕದ್ದಮೆ ಹೂಡಬಹುದು.

ದ. ಕೊರಿಯಾ ಅಧ್ಯಕ್ಷೀಯ ಚುನಾವಣೆ- ವಿರೋಧಿ ಅಭ್ಯರ್ಥಿಯ ಆಯ್ಕೆ

ದಕ್ಷಿಣ ಕೊರಿಯಾದ ಅಧ್ಯಕ್ಷೀಯ ಚುನಾವಣೆಯಲ್ಲಿ ಸಣ್ಣ ಬಹುಮತದ ಅಂತರ ದಿಂದ ಪ್ರಮುಖ ವಿರೋಧ ಪಕ್ಷದ ಎನ್ ಸಿಎನ್ ಪಿನ ಅಭ್ಯರ್ಥಿ 72 ವರ್ಷದ ಕಿಮ್-ದಾಯಿ-ಜಂಗ್ ಆಯ್ಕೆಯಾಗಿದ್ದಾರೆ. ಕಿಮ್-ದಾಯಿ-ಜಂಗ್ ಎರಡು ಮೂರು ದಶಕಗಳಿಂದ, ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ವಿರೋಧ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಈ ಬಾರಿ ಅವರನ್ನು ಆರಿಸುವ ಮೂಲಕ ಕೊರಿಯಾದ ಜನತೆ, ಆಳುವ ಪಕ್ಷದ ನೀತಿಗಳಿಗೆ ಅತೃಪ್ತಿ ತೋರಿದ್ದಾರೆ ಎನ್ನಬಹುದು. ಆಳುವ ಪಕ್ಷ ನ್ಯೂ ಕೊರಿಯಾ ಪಾರ್ಟಿ (ಎನ್ ಕೆ ಪಿ) ಯ ಅಭ್ಯರ್ಥಿ ಲೀ-ಹೊಮ್-ಚಾಂಗ್ ರವರನ್ನು ಕಿಮ್ ಅವರು ನಾಲ್ಕು ಲಕ್ಷದ ಅಂತರಗಳಿಂದ ಸೋಲಿಸಿದರು. ಗೆದ್ದ ಕಿಮ್ ಅವರಿಗೆ ಶೇಕಡಾ 40.3 ಮತ ಸಿಕ್ಕಿತ್ತು. ರೀ-ಇನ್-ಜೆ ಮೂರನೇ ಅಭ್ಯರ್ಥಿಯಾಗಿ ಶೇಕಡಾ 19 ಮತಗಳಿಸಿದರು.

ಆಯ್ಕೆಯಾದ ಅಧ್ಯಕ್ಷ ಕಿಮ್-ಯಂಗ್, ಪ್ರಸಕ್ತ ಅಧ್ಯಕ್ಷ ಕಿಮ್-ದಾಯಿ-ಜಂಗ್ ಸ್ಯಾಮರಿಂದ ಫೆಬ್ರವರಿ 25 ರಂದು ಅಧಿಕಾರ ವಹಿಸಿಕೊಳ್ಳುತ್ತಾರೆ. ಆಯ್ಕೆಯಾದ ಕಿಮ್-ದಾಯಿ-ಜಂಗ್ ಕಾರ್ಮಿಕರು, ಯುವಕರು, ಪ್ರಜಾಸಕ್ತ ಚಳುವಳಿಗಾರರಲ್ಲಿ ಜನಪ್ರಿಯರಾಗಿದ್ದಾರೆ. ಆದರೆ ಈಗಿನ ಜ್ವಲಂತ ಸಮಸ್ಯೆ - ದಕ್ಷಿಣ ಕೊರಿಯಾದ ಆರ್ಥಿಕ ಪತನ- ಬಗ್ಗೆ ಅವರಲ್ಲಿ ಏನೂ ವಿಶಿಷ್ಟ ಪರಿಹಾರವಿಲ್ಲ. ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ಹಾಗೆ, ಮೂವರು ಪ್ರಮುಖ ಅಭ್ಯರ್ಥಿಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಚೋದ್ಯದ ಸಂಗತಿ ಎಂದರೆ ಇಡೀ ದಕ್ಷಿಣ ಕೊರಿಯಾದ ಜನ ಶರತ್ತುಗಳ ಬಗ್ಗೆ ಕುದಿಯುತ್ತಿದ್ದಾರೆ. ಐಎಂಎಫ್ ಮೂವರು ಅಧ್ಯಕ್ಷೀಯ ಅಭ್ಯರ್ಥಿಗಳಿಂದ ಸೋತರೂ-ಗೆದ್ದರೂ ತನ್ನ ಷರತ್ತುಗಳನ್ನು ವಿರೋಧಿಸುವುದಿಲ್ಲ ಎಂದು ಭರವಸೆ ತೆಗೆದುಕೊಂಡಿತಂತೆ. ಹೇಗಿದೆ ಬೂರ್ಜ್ವಾ ಪ್ರಜಾಪ್ರಭುತ್ವದ ಚುನಾವಣೆಯೆಂಬ ಪ್ರಹಸನ? ದಕ್ಷಿಣ ಕೊರಿಯಾ ಎರಡೇ ವಾರಗಳಲ್ಲಿ ಜಗತ್ತಿನ 11 ನೇ ಅತಿದೊಡ್ಡ ಆರ್ಥಿಕ ಸ್ಥಿತಿಯಿಂದ, 20 ನೇ ಸ್ಥಾನಕ್ಕೆ ಇಳಿಯಿತು. ದಕ್ಷಿಣ ಕೊರಿಯಾದ ನಾಣ್ಯ ವೊನ್ ಶೇಕಡಾ 30 ರಷ್ಟು ಇಳಿಯಿತು - ಡಾಲರಿನ ಮುಂದೆ. ಇದು ಯಾವುದೂ ಚುನಾವಣೆ ವಿಷಯವಲ್ಲ!

ದಕ್ಷಿಣ ಕೊರಿಯಾವನ್ನು ನಿಜವಾಗೂ ಆಳುತ್ತಿರುವ ದೊಡ್ಡ ಕಂಪನಿಗಳು (ಇವನ್ನು ಚಾಬೋಲ್‌ಗಳು ಎಂದು ಕರೆಯುತ್ತಾರೆ) ಕಿಮ್ ಐಎಂಎಫ್ ಷರತ್ತುಗಳನ್ನು ಜನರ ಮೇಲೆ ಹೊರಿಸಲು ಹೆಚ್ಚು ಸಮರ್ಥ ಎಂದು ಪರಿಗಣಿಸಿಯೂ ಇರಬಹುದು. ಆಯ್ಕೆಯಾದ ಅಧ್ಯಕ್ಷ ಕಿಮ್, ಹಿಂದಿನ ಎರಡು ಅಧ್ಯಕ್ಷರುಗಳು ಕ್ರಿಮಿನಲ್ ಪ್ರಕರಣದಲ್ಲಿ ಅನುಭವಿಸುತ್ತಿರುವ ಜೈಲುವಾಸವನ್ನು ಮನ್ನಾ ಮಾಡುವೆ ಎನ್ನುವ ಆಶ್ವಾಸನೆ ನಿಜವಾದ ಬದಲಾವಣೆ ಎಷ್ಟರಮಟ್ಟಿಗೆ ಆಗಬಹುದು, ಎಂಬ ಬಗ್ಗೆ ಆತಂಕ ಹೆಚ್ಚಿಸಿದೆ. ಹೊಸ ಅಧ್ಯಕ್ಷರ ಈ ನಿರ್ಧಾರವನ್ನು ಸಮರಶೀಲ ಟ್ರೇಡ್ ಯೂನಿಯನ್‌ಗಳು, ವಿದ್ಯಾರ್ಥಿ-ಯುವ ಸಂಘಟನೆಗಳು, ಮಾನವ ಹಕ್ಕು ಪ್ರಜಾಸತ್ತಾತ್ಮಕ ಚಳುವಳಿಗಾರರು ಟೀಕಿಸಿದ್ದಾರೆ. ಇದೂ ಮೂವರು ಅಭ್ಯರ್ಥಿಗಳ ನಡುವೆ ಅಲಿಖಿತ ಒಪ್ಪಂದದ ಭಾಗ ಇರಬಹುದು ಎನ್ನಲಾಗಿದೆ.

ಆಳುವ ವರ್ಗದ ಈ ಪಿತೂರಿಯ ಮುಂದೆ ದಕ್ಷಿಣ ಕೊರಿಯಾದ ಪ್ರಜ್ಞಾವಂತ ಕಾರ್ಮಿಕರು, ವಿದ್ಯಾರ್ಥಿ-ಯುವಜನರು ಸುಮ್ಮನಿರುವುದಿಲ್ಲ. ಈಗಾಗಲೇ ಈ ಬಗ್ಗೆ ಅವರು ದನಿ ಎತ್ತಲಾರಂಭಿಸಿದ್ದಾರೆ. ಇತ್ತೀಚೆಗೆ ರಾಜಧಾನಿ ಸಿಯೋಲ್‌ನಲ್ಲಿ ಸಾವಿರಾರು ವಿದ್ಯಾರ್ಥಿ-ಯುವಜನರು, ಕಾರ್ಮಿಕರು ಭಾಗವಹಿಸಿದ್ದ ಭಾರೀ ರ್‍ಯಾಲಿ ನಡೆಯಿತು, ಈ ಬಿಕ್ಕಟ್ಟಿಗೆ ಕಾರಣರಾದ ಸರ್ಕಾರ, ಚಾಬೋಲ್‌ಗಳು (ದೊಡ್ಡ ಕಂಪನಿಗಳು), ಮತ್ತು ಐಎಂಎಫ್ ವಿರುದ್ಧ ಘೋಷಣೆ ಕೂಗಲಾಯಿತು. ರ್‍ಯಾಲಿ 'ಕೊರಿಯಾ ಸರಕುಗಳನ್ನು ಕೊಳ್ಳಿ' ಎಂದು ಸ್ವದೇಶಿ ಘೋಷಣೆ ಕೊಟ್ಟಿದೆ. ವಿದೇಶಿ ವಿನಿಮಯದಲ್ಲಿ ಉಳಿತಾಯ ಈ ಘೋಷಣೆಯ ಉದ್ದೇಶ. ದಕ್ಷಿಣ ಕೊರಿಯಾದ ಪತನಕ್ಕೆ ಹೆಚ್ಚಿನ ಅಂತರಾಷ್ಟ್ರೀಯ ಮಹತ್ವವಿದೆ. ಹಿಂದೆ ಸಮಾಜವಾದಿ ದೇಶಗಳ ಹೊಸ್ತಿಲಲ್ಲಿದ್ದ ದೇಶಗಳಲ್ಲಿ 'ಸಮೃದ್ಧಿ' ತೋರಿಸಲು ಹಣ ಸುರಿಯುತ್ತಿದ್ದ ಅಭಿವೃದ್ಧ ಬಂಡವಾಳಶಾಹಿ ದೇಶಗಳು ಇನ್ನಿವರು ಅಗತ್ಯವಿಲ್ಲ ಎಂದು ನಿರ್ಧರಿಸಿದ್ದಾರೆ. ಆ ಹಣವನ್ನು ವಾಪಸು ದೋಚಲು ಹೊರಟಿದ್ದಾರೆ. ವಿದೇಶಿ ವಿನಿಮಯದ ಮಾರುಕಟ್ಟೆಯಲ್ಲಿ, ಈ ದೇಶಗಳ ಮೇಲೆ ಯೋಜಿತ ಆಕ್ರಮಣ ಮಾಡಲಾಗಿದೆ ಎಂದು ಮೆಲ್ಲಗೆ ಹೊರ ಬರುತ್ತಿದೆ.

ತಾಲಿಬಾನ್ ಕಾಲಲ್ಲಿ ಬೀಳುತ್ತಿರುವ ಟೆಕ್ಸಾಸ್ ತೈಲ ದೊರೆಗಳು

ತಾಲಿಬಾನ್ ಮಹಿಳೆಯರ, ಮಾನವ ಹಕ್ಕುಗಳ ಹರಣ ಮಾಡುತ್ತಿದೆ, ಮುಸ್ಲಿಂ ಮೂಲಭೂತವಾದಿ ಸಂಘಟನೆ ಎಂದೆಲ್ಲಾ ಸಾರ್ವಜನಿಕವಾಗಿ ಹೇಳುವ ಅಮೇರಿಕ ಸರ್ಕಾರ, ತಾಲಿಬಾನ್ ಶಿಷ್ಟ ಮಂಡಲದ ಕಾಲಲ್ಲಿ ಬೀಳುತ್ತಿತ್ತು. ಅಮೇರಿಕಾದ ಟೆಕ್ಸಾಸ್‌ನ, ಸೌದಿ ಅರೇಬಿಯಾ, ಜಪಾನಿ, ದಕ್ಷಿಣ ಕೊರಿಯಾದ ತೈಲ ಕಂಪನಿಗಳ ಕೂಟ 'ವಿನೊಕೊಲ್' ತಾಲಿಬಾನ್ ಶಿಷ್ಟವಂಡಲವನ್ನು ಟೆಕ್ಸಾಸ್‌ಗೆ ಆಹ್ವಾನಿಸಿತ್ತು. ಅವರನ್ನು ಭಾರೀ ಆತಿಥ್ಯದಿಂದ ಸಂಪ್ರೀತಗೊಳಿಸಲು ಪ್ರಯತ್ನಿಸಿತು. ಅಮೇರಿಕಾದ ಸರ್ಕಾರ ಸಹ ಇದರಲ್ಲಿ ಹಿಂದೆ ಬೀಳಲಿಲ್ಲ. ಈಗಾಗಲೇ ತಾಲಿಬಾನ್‌ನ ಚಟುವಟಿಕೆಗಳಲ್ಲಿ ವಿನೊಕೊನ್ ಹಾಗೂ ಅಮೇರಿಕದ ಸರ್ಕಾರ ಸಾಕಷ್ಟು, ಪರೋಕ್ಷ ಪ್ರತ್ಯಕ್ಷ ತನು-ಮನ-ಧನ ಬೆಂಬಲ ಕೊಡುತ್ತಿವೆ.

ಇದು ಅಮೇರಿಕದ ಮೂಲಭೂತವಾದದ ವಿರುದ್ಧ ಹೋರಾಡುವ ಮಾದರಿ!

ಚೀಣಾ ಸೌಹಾರ್ದ ನಿಯೋಗ

ಚೀಣಾ ಜನತಾ ಗಣತಂತ್ರದ ಉಚ್ಚಮಟ್ಟದ ಸೌಹಾರ್ದ ನಿಯೋಗವೊಂದು ಭಾರತದ ಉಪರಾಷ್ಟ್ರಪತಿಗಳ ಆಹ್ವಾನದ ಮೇರೆಗೆ ಭಾರತಕ್ಕೆ ಭೇಟಿಕೊಟ್ಟಿದೆ. ಚೀಣಾ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸ್ಥಾಯಿ ಸಮಿತಿಯ ಸದಸ್ಯರಾದ ವೈ ಜಿಯಾಂಗ್ಸ್‌ಂಗ್ ನೇತೃತ್ವದ ಈ ನಿಯೋಗದಲ್ಲಿ ಉನ್ನತ ಮಟ್ಟದ ವ್ಯಕ್ತಿಗಳು, ಅಧಿಕಾರಿಗಳಿದ್ದಾರೆ.

ನಿಯೋಗ ನವದೆಹಲಿಯಲ್ಲಿ ಸಿಪಿಐ(ಎಂ) ಮುಖ್ಯ ಕಚೇರಿಗೆ ಡಿಸೆಂಬರ್ ೧೬ ರಂದು ಭೇಟಿ ನೀಡಿತು. ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಹಾಗೂ ಕೇಂದ್ರ ಸಮಿತಿ ಸದಸ್ಯ ಹರಿಸಿಂಗ್ ಕಂಗ ಅವರನ್ನು ಸ್ವಾಗತಿಸಿದರು.

ಆಪ್ತತೆಯ ವಾತಾವರಣದಲ್ಲಿ ವಿಚಾರ ವಿನಿಮಯ ನಡೆಸಿದ ನಂತರ ಎರಡೂ ಕಡೆಯಿಂದ ಭಾರತ ಚೀಣಾ ಸಂಬಂಧಗಳನ್ನು ಬಲಪಡಿಸುವ ಆಕಾಂಕ್ಷೆಗಳನ್ನು ವ್ಯಕ್ತಪಡಿಸಲಾಯಿತು. ಪ್ರಸ್ತುತ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ, ಶತಮಾನಗಳಿಂದ ನೆರೆಕರೆಯಲ್ಲಿರುವ ಈ ಎರಡು ದೊಡ್ಡ ದೇಶಗಳ ಹಾಗೂ ಜನಗಳ ನಡುವಿನ ಸಂಬಂಧಗಳನ್ನು ಇನ್ನಷ್ಟು ಬಲಪಡಿಸಬೇಕಾಗಿದೆ ಎಂದು ಅಭಿಪ್ರಾಯ ಪಡಲಾಯಿತು.

(ಐಎನ್‌ಎನ್)

ಕ್ಯೂಬಾದ ಮಾಜಿ ವಿದೇಶಾಂಗ ಮಂತ್ರಿ ನಿಧನ

ಸಿಪಿಐ(ಎಂ) ಶ್ರದ್ಧಾಂಜಲಿ

ಕ್ಯೂಬಾದ ಪ್ರಮುಖ ಮುಖಂಡರ ಲ್ಲೊಬ್ಬರು ಹಾಗೂ ಈ ಹಿಂದೆ ವಿದೇಶಾಂಗ ಮಂತ್ರಿಗಳಾಗಿದ್ದ ಕಾರ್ಲೋಸ್ ರಫೆಲ್ ರೋಡ್ರಿಗಸ್ ನಿಧನರಾಗಿದ್ದಾರೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಅವರ ನಿಧನಕ್ಕೆ ಅತೀವ ದುಃಖ ವ್ಯಕ್ತಪಡಿಸಿದ್ದಾರೆ.

1959ರಲ್ಲಿ ಕ್ಯಾಸ್ಟ್ರೋ ನೇತೃತ್ವದಲ್ಲಿ ಕ್ಯೂಬಾ ಕ್ರಾಂತಿ ದುಷ್ಟ ಬಾಟಿಸ್ಟಾ ಆಡಳಿತವನ್ನು ಕಿತ್ತೆಸೆಯುವ ಮೊದಲೇ ಒಬ್ಬ ಕಮ್ಯುನಿಸ್ಟ್ ಮುಖಂಡರಾಗಿದ್ದರು. ಆರಂಭದ ಕಮ್ಯುನಿಸ್ಟರಾಗಿ ಅವರು ಫಿಡೆಲ್ ಕ್ಯಾಸ್ಟ್ರೋ ಮತ್ತು ಅವರ ಸಂಗಾತಿಗಳನ್ನು ಕಂಬಾಪುಟ ದಡಿ ಹಾಗೂ ಕಮ್ಯುನಿಸ್ಟ್ ಪಕ್ಷಕ್ಕೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಕ್ರಾಂತಿಯ ನಂತರ ಸರಕಾರದಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದ ಅವರು ಬಹಳ ವರ್ಷಕಾಲ ಕ್ಯೂಬಾದ ವಿದೇಶಾಂಗ ಮಂತ್ರಿಯಾಗಿದ್ದರು. ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ಆಳವಾದ ಅಧ್ಯಯನ ಮಾಡಿದ್ದ ಅವರು ಅಂತರ್ರಾಷ್ಟ್ರೀಯ ವಲಯಗಳಲ್ಲಿ ಪ್ರಖ್ಯಾತಿ ಪಡೆದಿದ್ದರು.

"ಕ್ಯೂಬಾದ ಪಕ್ಷ ಮತ್ತು ಜನತೆಗೆ ಅವರ ನಿಧನದಿಂದ ಭಾರೀ ನಷ್ಟವಾಗಿದೆ" ಎಂದು ಹಾರ್ದಿಕ ಸಂತಾಪ ಸೂಚಿಸುತ್ತಾ ಸುರ್ಜಿತ್ ಹೇಳಿದ್ದಾರೆ.

(ಐಎನ್‌ಎನ್)

ಪ್ರೌಢಶಾಲಾ- ವಿದ್ಯಾರ್ಥಿ ಸಮೀಕ್ಷಾ ಕಾರ್ಯಕ್ರಮ

ಮೈಸೂರು: ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಎಸ್‌ಎಫ್‌ಐ ತಾಲೂಕು ಸಮಿತಿ ನೇತೃತ್ವದಲ್ಲಿ 'ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ' ದ ಅಂಗವಾಗಿ ತಾಲೂಕಿನ ಶೈಕ್ಷಣಿಕ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಪ್ರೌಢಶಾಲಾ-ವಿದ್ಯಾರ್ಥಿಗಳ ಸಮೀಕ್ಷೆ ಕಾರ್ಯ ನಡೆಸಿ ಅವರ ಮೂಲಭೂತ ಅವಶ್ಯಕತೆ, ಕೊರತೆ ಹಾಗೂ ಬೇಡಿಕೆ ಒಳಗೊಂಡಂತ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅದರ ಈಡೇರಿಕೆಗಾಗಿ ಒತ್ತಾಯಿಸುವ ಕಾರ್ಯಕ್ರಮ ಡಿಸೆಂಬರ್೧೬ ರಂದು ಉದ್ಘಾಟನೆ ಗೊಂಡಿತು.

ಮುಖ್ಯ ಅತಿಥಿಗಳಾಗಿದ್ದ ತಾಲೂಕು ಪಂಚಾಯತ್ ಸದಸ್ಯರೂ. ಡಿ.ವೈ.ಎಫ್.ಐ ನ ಮುಖಂಡರೂ ಆದ ಸಿ.ಮಾರುತಿ ಚನ್ನೇಗೌಡ ಮಾತನಾಡಿ, ಪ್ರೌಢಶಿಕ್ಷಣವು ವಿದ್ಯಾರ್ಥಿಗಳಿಗೆ ಅತಿಮುಖ್ಯವಾದ ಹಂತವಾಗಿದ್ದು ಅವರಿಗೆ ಸತ್ಯಾಸತ್ಯತೆಯನ್ನು ತಿಳಿಸುವಂತಹ ವೈಜ್ಞಾನಿಕ ಶಿಕ್ಷಣ ಪದ್ಧತಿ ಜಾರಿಯಾಗಬೇಕೆಂದರು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ಉತ್ತಮ ಬಾಂಧವ್ಯ ಏರ್ಪಟ್ಟು ಇವರಿಬ್ಬರು ತಮ್ಮ ಸಮಸ್ಯೆಗಳ ನಿವಾರಣೆಗೆ ತಾವೇ ಹೋರಾಟ ನಡೆಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೆಚ್.ಕೆಂಚಮಾರಯ್ಯನವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಎಸ್.ಎಫ್.ಐ ಹಮ್ಮಿಕೊಂಡಿರುವ ಈ ಸಮೀಕ್ಷಾ ಕಾರ್ಯವು ತಾಲೂಕಿನ ಶಿಕ್ಷಣ ರಂಗದಲ್ಲಿನ ತೊಡಕುಗಳನ್ನು ಸಾಧ್ಯವಾದಷ್ಟು ನಿವಾರಿಸಲು ಸಹಕಾರಿಯಾಗುತ್ತದೆಂದು ಆಶಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಎಂ.ಆರ್. ವೆಂಕಟಪ್ಪ, ಚೆಲುವಯ್ಯ, ಡಿ.ಪಿ.ಇ.ಪಿ. ಸಂಯೋಜಕ ರಾಧ ಮೈಮುನ್ನಿಸಾ ಬೇಗಂ ಈ ಸಮೀಕ್ಷಾ ಕಾರ್ಯಕ್ರಮವನ್ನು ಸ್ವಾಗತಿಸಿ ಪ್ರಶಂಸಿಸಿದರು. ವೇದಿಕೆಯಲ್ಲಿ ಟೌನ್ ಪಂಚಾಯತ್ ಅಧ್ಯಕ್ಷರಾದ ಹೆಚ್.ಸಿ. ಮಂಜುನಾಥ್, ಎಂ. ಶಿವಸ್ವಾಮಿ, ಎಂ. ಆರ್. ಸತ್ಯನಾರಾಯಣ. ಬಿ. ಪುಟ್ಟಸ್ವಾಮಿ ಶಿವಕುಮಾರ್, ರಾಜೇಂದ್ರ ಕುಮಾರ್ ಅಲ್ಲದೆ ಶಾಲಾ -ಕಾಲೇಜುಗಳ ವಿದ್ಯಾರ್ಥಿ ಮುಖಂಡರು ಉಪಸ್ಥಿತರಿದ್ದರು.

ತೊಗರಿ ಬೆಳೆಗಾರರಿಂದ ರಸ್ತೆ ತಡೆ

ಅತ್ತ ಬೀದರ್ ಜಿಲ್ಲೆಯ ಕಬ್ಬು ಬೆಳೆಗಾರರು ರಸ್ತೆ ತಡೆ ಚಳುವಳಿ ನಡೆಸಿ ಸಕ್ಕರೆ ಕಾರ್ಖಾನೆಯಿಂದ ತಮಗೆ ಬರಬೇಕಾದ ಬಾಕಿಗೆ ಒತ್ತಾಯಿಸಿದರೆ ಇತ್ತ ಗುಲ್ಬರ್ಗ ಜಿಲ್ಲೆಯ ಪ್ರಮುಖ ಬೆಳೆಯಾದ ತೊಗರಿ ಬೆಳೆ ರೈತರು ತೊಗರಿ ಬೆಳೆಯಿಂದಾಗಿ ಈ ವರ್ಷ ತಾವು ಅನುಭವಿಸಿರುವ ನಷ್ಟ ತುಂಬಿ ಕೊಡಬೇಕೆಂದು ಒತ್ತಾಯಿಸುವ ಸಲುವಾಗಿ ಕರ್ನಾಟಕ ಪ್ರಾಂತ ರೈತ ಸಂಘದ ಚಿತ್ತಾಪುರ ತಾಲೂಕು ಸಮಿತಿ ಮುಖಂಡತ್ವದಲ್ಲಿ ಡಿಸೆಂಬರ್ 15 ರಂದು ಶಹಾಬಾದ್-ವಾಡಿ ರಸ್ತೆಯ ಎ.ಬಿ.ಎಲ್ ಕ್ರಾಸ್‌ನಲ್ಲಿ 300ಕ್ಕೂ ಮಿಗಿಲಾದ ರೈತರು ರಸ್ತೆ ರೋಕೋ ಕಾರ್ಯಕ್ರಮ ನಡೆಸಿದರು.

ರೈತರ ಜೊತೆ ಯುವ ಜನರು ಕಾರ್ಮಿಕರು, ವಿದ್ಯಾರ್ಥಿಗಳು, ಚಳುವಳಿಗಾರರು, ತೊಗರಿ ಬೆಳೆ ನಷ್ಟ ಅನುಭವಿಸಿದ ರೈತರಿಗೆ ಎಕರೆಗೆ 2ಸಾವಿರ ಪರಿಹಾರ ನೀಡಬೇಕು, ತೊಗರಿಬೆಳೆಗಾರರ ಮಂಡಳಿ ರಚನೆ ಮಾಡಿ, ಕಳಪೆ ಔಷಧಿ ಮಾರಾಟಗಾರರಿಗೆ ಶಿಕ್ಷೆ ನೀಡಬೇಕು, ಸಮಗ್ರ ಬೆಳೆಗೆ ವಿಮಾ ಯೋಜನೆ ಜಾರಿಗೆ ತರಬೇಕು. ಶಹಾಬಾದ್ ಮೇಲ್ ಸೇತುವೆ ರಸ್ತೆ ರಿಪೇರಿ ಮಾಡಬೇಕು. ಎ.ಬಿ.ಎಲ್ ವೃತ್ತ ದಲ್ಲಿರುವ ಹೊಟೇಲ್‌ಗಳನ್ನು ವಿನಾಕಾರಣ ಕಿತ್ತುಹಾಕುವುದನ್ನು ನಿಲ್ಲಿಸಬೇಕು ಇತ್ಯಾದಿ ಬೇಡಿಕೆಗಳುಳ್ಳ ಮನವಿಪತ್ರವನ್ನು ತಹಶಿಲ್ದಾರರಿಗೆ ಚಂದು ಜಾದವ್, ಮರಲಿಂಗಪ್ಪ ನಾಯಕತ್ವದಲ್ಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಧರ್ಮವೀರ ಚಣ್ಣಾ, ಮೋತಿಲಾಲ್ ಠಾಕೋರ್ ಮೊದಲಾದವರು ಭಾಗವಹಿಸಿದ್ದರು.

ಕಾರಂತರಿಗೆ ಶ್ರದ್ಧಾಂಜಲಿ

ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ಶಿವರಾಮ ಕಾರಂತರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಳಗಾವಿ ಜಿಲ್ಲಾ ಸಮಿತಿ ಸಂತಾಪ ಸೂಚಿಸಿದೆ.


ಅಪಾರ ಜೀವನೋತ್ಸಾಹ, ವೈಜ್ಞಾನಿಕ ಮನೋಭಾವ, ಜೀವನದ ಎಲ್ಲಾ ರಂಗಗಳಲ್ಲಿ ವಿಶೇಷ ಆಸಕ್ತಿಯಿಂದಾಗಿ ಶಿವರಾಮ ಕಾರಂತರು ವಿಶಿಷ್ಠ ವ್ಯಕ್ತಿ ಯಾಗಿದ್ದರು. ಸಮಾಜದ ಮೂಢ ನಂಬಿಕೆಗಳ ವಿರುದ್ಧ, ಜೀವ ವಿರೋಧಿ ಧಾರ್ಮಿಕ ನಂಬಿಕೆಗಳ ವಿರುದ್ಧ ಸಮರ ಸಾರಿದ, ಸಾಹಿತ್ಯದ ಎಲ್ಲ ಪ್ರಕಾರ ಗಳಲ್ಲಿ ಶ್ರೇಷ್ಠತೆಯನ್ನು ಮೆರೆದ ಕಾರಂತರ ನಿಧನದಿಂದ ದೊಡ್ಡ ಸಾಂಸ್ಕೃತಿಕ ನಷ್ಟವಾಗಿದೆ ಎಂದು ಜಿಲ್ಲಾ ಸಮಿತಿ ತನ್ನ ಸಂತಾಪ ಸೂಚಕ ನಿರ್ಣಯದಲ್ಲಿ ತಿಳಿಸಿದೆ.

ವೀರ ತೆಲಂಗಾಣ ಲಾಲ್ ಸಲಾಮ್



1998

ಐಕ್ಯರಂಗ



JANUARY 1998 ಜನವರಿ

ಭಾನು		4	11	18	25
ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

FEBRUARY 1998 ಫೆಬ್ರವರಿ

ಭಾನು	1	8	15	22
ಸೋಮ	2	9	16	23
ಮಂಗಳ	3	10	17	24
ಬುಧ	4	11	18	25
ಗುರು	5	12	19	26
ಶುಕ್ರ	6	13	20	27
ಶನಿ	7	14	21	28

MARCH 1998 ಮಾರ್ಚ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

APRIL 1998 ಏಪ್ರಿಲ್

ಭಾನು		5	12	19	26
ಸೋಮ		6	13	20	27
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	
ಶನಿ	4	11	18	25	

MAY 1998 ಮೇ

ಭಾನು	31	3	10	17	24
ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

JUNE 1998 ಜೂನ್

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

JULY 1998 ಜುಲೈ

ಭಾನು		5	12	19	26
ಸೋಮ		6	13	20	27
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

AUGUST 1998 ಆಗಸ್ಟ್

ಭಾನು	30	2	9	16	23
ಸೋಮ	31	3	10	17	24
ಮಂಗಳ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

SEPTEMBER 1998 ಸೆಪ್ಟೆಂಬರ್

ಭಾನು		6	13	20	27
ಸೋಮ		7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	
ಶುಕ್ರ	4	11	18	25	
ಶನಿ	5	12	19	26	

OCTOBER 1998 ಅಕ್ಟೋಬರ್

ಭಾನು		4	11	18	25
ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

NOVEMBER 1998 ನವೆಂಬರ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

DECEMBER 1998 ಡಿಸೆಂಬರ್

ಭಾನು		6	13	20	27
ಸೋಮ		7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	
ಶುಕ್ರ	4	11	18	25	
ಶನಿ	5	12	19	26	

ಜ 1 ಕ್ಯೂಬಾ ಕ್ರಾಂತಿ (1959)
14 ಬು ಸಂಕ್ರಾಂತಿ
21 ಲೆನಿನ್ ನಿಧನ (1924)
26 ಸೋ ಗಣರಾಜ್ಯೋತ್ಸವ
30 ಶು ರಮಜಾನ್
ಮಹಾತ್ಮ ಹತ್ಯೆ (1948)
ಫೆ 25 ಬು ಮಹಾ ಶಿವರಾತ್ರಿ
ಮಾ 5 ಸ್ಟಾಲಿನ್ ನಿಧನ (1953)
7 ಅಂತರರಾಷ್ಟ್ರೀಯ ಮಹಿಳಾ ದಿನ (1917)
14 ಮಾರ್ಕ್ಸ್ ನಿಧನ (1883)
22 ಎ.ಕೆ.ಜಿ. ನಿಧನ (1977)
ಏ 6 ಬಿ.ಟಿ.ಆರ್. ನಿಧನ (1990)
8 ಬು ಬಕ್ರೀದ್
9 ಗು ಮಹಾವೀರ ಜಯಂತಿ
10 ಶು ಗುಡ್ ಫ್ರೈಡೆ
12 ಬಸವಪುನ್ನಯ್ಯ ನಿಧನ (1992)
22 ಲೆನಿನ್ ಜನ್ಮ ದಿನ (1870)
29 ಬು ಬಸವ ಜಯಂತಿ
ಮೇ 1 ಶು ಕಾರ್ಮಿಕ ದಿನಾಚರಣೆ
5 ಮಾರ್ಕ್ಸ್ ಜನ್ಮ ದಿನ (1818)
7 ಗು ಮೊಹರಮ್
19 ಪಿ. ಸುಂದರಯ್ಯ ನಿಧನ (1985)
19 ಹೋಚಿಮಿನ್ ಜನ್ಮ ದಿನ(1890)
ಜೂ 14 ಚೆ ಗುವಾರ ಜನ್ಮ ದಿನ (1928)
ಜುಲೈ 7 ಮಂ ಈದ್-ಮಿಲಾದ್
ಆಗಸ್ಟ್ 5 ಎಂಗೆಲ್ಸ್ ನಿಧನ (1895)
15 ಶ ಸ್ವಾತಂತ್ರ ದಿನಾಚರಣೆ
25 ಮಂ ಶ್ರೀ ವಿನಾಯಕ ವ್ರತ
ಸೆ 3 ಹೋಚಿಮಿನ್ ನಿಧನ (1969)
9 ಮಾವೋ ನಿಧನ (1976)
30 ಬು ಮಹಾನವಮಿ ಆಯುಧ ಪೂಜಾ
ಅ 1 ಚೀನಾ ಗಣತಂತ್ರ ದಿನ
1 ಗು ವಿಜಯದಶಮಿ
2 ಶು ಗಾಂಧಿ ಜಯಂತಿ
21 ಬು ದೀಪಾವಳಿ
ನ 7 ರಷ್ಯನ್ ಸಮಾಜವಾದಿ ಕ್ರಾಂತಿ(1917)
26 ಎಂಗೆಲ್ಸ್ ಜನ್ಮ ದಿನ (1820)
ಡಿ 6 ಬಾಬರಿ ಮಸೀದಿ ಧ್ವಂಸ (1992)
21 ಸ್ಟಾಲಿನ್ ಜನ್ಮ ದಿನ (1879)
25 ಶು ಕ್ರಿಸ್‌ಮಸ್
26 ಮಾವೋ ಜನ್ಮ ದಿನ (1893)

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27